
# NEWSPAPER CUTTINGS
## about college program




**JSS INSTITUTE OF EDUCATION**

**Kowdalli, Sakaleshpur Tq, Hassan Dist – 573 134**

# ಸಂಕುಚಿತ ವ್ಯಕ್ತಿತ್ವ ವಿಶಾಲತೆ ಕಡೆಗೆ ಹೋಗಲು ಕ್ರೀಡೆ ಸಹಕಾರಿ



ಸಕಲೇಶಪುರ: ಸಂಕುಚಿತ ವ್ಯಕ್ತಿತ್ವವನ್ನು ವಿಶಾಲತೆ ಕಡೆಗೆ ಕೊಂಡೊಯ್ಯಲು ಕ್ರೀಡೆ ಸಹಕಾರಿ ಎಂದು ಜೆಎಸ್‌ಎಸ್ ನರ್ಸಿಂಗ್ ಕಾಲೇಜು ಪ್ರಾಂಶುಪಾಲ ನೋಲಿಯಾ ರಾಜ್ ಹೇಳಿದರು.

ಪಟ್ಟಣದ ಜೆಎಸ್‌ಎಸ್ ಬಿಎಡ್ ಕಾಲೇಜು ಆವರಣದಲ್ಲಿ ನಡೆದ ವಾರ್ಷಿಕ ಕ್ರೀಡಾಕೂಟದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಯುವಜನರಲ್ಲಿ ಕ್ರೀಡಾ ಚೈತನ್ಯ ಒಡಮೂಡಬೇಕು. ಮಾನಸಿಕ ಆರೋಗ್ಯ ವೃದ್ಧಿ, ಉತ್ತಮ ಆಲೋಚನೆಗಳು ಹಾಗೂ ಕ್ರಿಯಾಶೀಲತೆಗೆ ನೆರವಾಗುವ ಕ್ರೀಡೆ ಪ್ರತಿಯೊಬ್ಬರ ದಿನಚರಿಯಾಗಬೇಕು ಎಂದರು.

ಕ್ರೀಡಾ ಪ್ರತಿಭೆಗಳು ಬೆಳಗಲು ಸಾಕಷ್ಟು ಅವಕಾಶಗಳಿದ್ದು, ಸೋಲು ಗೆಲುವನ್ನು ಲೆಕ್ಕಿಸದೆ ಶ್ರದ್ಧೆ ಹಾಗೂ ಆತ್ಮಸ್ಥೈರ್ಯದಿಂದ ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸಿದರೆ ಮುಂದೊಂದು ದಿನ ರಾಷ್ಟ್ರ, ಅಂತರ ರಾಷ್ಟ್ರೀಯ ಮಟ್ಟದಲ್ಲಿ ಅತ್ಯುತ್ತಮ ಕ್ರೀಡಾಪಟು ಎಂದೆನಿಸಿಕೊಳ್ಳಲು ಸಾಧ್ಯವಿದೆ. ಕ್ರೀಡಾಪಟುಗಳಿಗೆ ಪ್ರೋತ್ಸಾಹಿಸುವ ಮನೋಭಾವ ಹಾಗೂ ಹೆಚ್ಚು ಕ್ರೀಡಾ ಸ್ಪರ್ಧೆಗಳನ್ನು ಆಯೋಜಿಸುವ ಮನೋಭಾವ ಸಂಘಟನೆಗಳು, ಶಾಲೆ-ಕಾಲೇಜುಗಳು ಹಾಗೂ ಸರ್ಕಾರದ ಜವಬ್ದಾರಿಯಾಗಿದೆ. ಗ್ರಾಮೀಣ ಮಟ್ಟದಲ್ಲಿಯೂ ಅದೆಷ್ಟೋ ಪ್ರತಿಭಾನ್ವಿತ ಕ್ರೀಡಾಪಟುಗಳು ಹುದುಗಿದ್ದು, ಅವರನ್ನೆಲ್ಲಾ ಬೆಳಕಿಗೆ ತರುವ ಕಾರ್ಯಕ್ರಮಗಳು ರೂಪುಗೊಳ್ಳಬೇಕು ಎಂದರು.

ಎಸ್‌ಬಿಎಂ ಪಟ್ಟಣ ಶಾಖೆ ವ್ಯವಸ್ಥಾಪಕ ಎಂ.ಸಿ.ಮಹೇಶ್ ಕ್ರೀಡಾಕೂಟ ಉದ್ಘಾಟಿಸಿ ಮಾತನಾಡಿ, ಗ್ರಾಮೀಣ ಹಾಗೂ ದೇಶಿಯ ಆಟಗಳಿಗೆ ಪುನಶ್ಚೇತನ ನೀಡುವ ಕಾರ್ಯಗಳಾಗಬೇಕು. ಇತ್ತೀಚಿನ ದಿನಗಳಲ್ಲಿ ಭಾರತೀಯ ರಾಷ್ಟ್ರೀಯ ಕ್ರೀಡೆಯಾದ ಕಬಡ್ಡಿಗೆ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಹೆಚ್ಚು ಮನ್ನಣೆ ದೊರೆಯುತ್ತಿರುವುದು ಸಂತೋಷದ ವಿಚಾರವಾಗಿದೆ. ಅಂತೆಯೆ ಅಂದಿನ ಕಾಲದಲ್ಲಿ ಮಕ್ಕಳ ಪ್ರಿಯವಾಗಿದ್ದ ಚಿನ್ನಿದಾಂಡು, ಬುಗುರಿ, ಲಗೋರಿ ಮೊದಲಾದ ಗ್ರಾಮೀಣ ಆಟಗಳಿಗೆ ಉತ್ತೇಜನ ನೀಡಿ ದೇಸಿ ಕಲೆಗಳನ್ನು ಉಳಿಸುವಂತಾಗಬೇಕು ಎಂದರು.

ಕಾಲೇಜು ದೈಹಿಕ ಶಿಕ್ಷಣ ನಿರ್ದೇಶಕ ಕಾಳೇಗೌಡ ಮಾತನಾಡಿ, ಸೋಲು ಅವಮಾನವಲ್ಲ. ಗೆಲುವೆ ಅಂತಿಮವಲ್ಲ. ಗೆಲ್ಲುವ ಕಡೆಗೆ ಗುರಿ ಇದ್ದರೆ ಯಾವಾಗಲೂ ಗೆಲ್ಲುತ್ತಲೆ ಇರಬಹುದು. ಸೋತ ಮಾತ್ರಕ್ಕೆ ನಾವು ಅಪ್ರಯೋಜಕರು ಎಂದು ಮೂಲೆ ಯಲ್ಲಿ ಕೂರುವ ಬದಲು ನ್ಯೂನ್ಯತೆಗ ಳನ್ನು ಸರಿಪಡಿಸಿಕೊಂಡು ತಪ್ಪುಗಳನ್ನು ತಿದ್ದಿಕೊಂಡು ಛಲದಿಂದ ಮುಂದೆ ಬರುವ ಗುಣ ವಿದ್ಯಾರ್ಥಿ ದಿಸೆಯಲ್ಲಿ ಆದರೆ, ಭವಿಷ್ಯದಲ್ಲಿ ಅತಿ ಹೆಚ್ಚು ಕ್ರೀಡಾಪಟುಗಳ ಕೊಡುಗೆಯಾಗುತ್ತದೆ ಎಂದರು.

ಈ ಸಂದರ್ಭದಲ್ಲಿ ಪುರಸಭೆ ಉಪಾಧ್ಯಕ್ಷ ಮುಖೇಶ್, ಬಿ.ಎಡ್. ಕಾಲೇಜು ಪ್ರಾಂಶುಪಾಲ ಡಾ.ಎನ್.ಎಸ್.ಸುರೇಶ್, ಅಧೀಕ್ಷಕ ಮಂಜುನಾಥ್, ಜೆಎಸ್‌ಎಸ್ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲ ಎನ್.ಎಸ್.ನಾಗೇಂದ್ರ ಪ್ರಸಾದ್, ಉಪನ್ಯಾಸಕ ವೀರಯ್ಯ, ಡಾ.ವಿಕ್ರಂ, ಪ್ರಭುಸ್ವಾಮಿ, ಡಾ.ದಿನೇಶ್, ಮೀನಾಕ್ಷಿ ಖಾದರ್, ನರ್ಸಿಂಗ್ ಕಾಲೇಜು ಉಪ ಪ್ರಾಂಶುಪಾಲ ಆರ್.ಕೆ.ಮಹದೇವಸ್ವಾಮಿ ಇತರರು ಇದ್ದರು.

PRINCIPAL
J.S.S. Institute of Education
P.B. 26, SAKALESHPUR-573 134
Hassan Dist

ಕರ್ನಾಟಕ ಸರ್ಕಾರ

## ಸಾರ್ವಜನಿಕ ಶಿಕ್ಷಣ ಇಲಾಖೆ

ಆಯುಕ್ತರ ಕಚೇರಿ, ಕೇಂದ್ರೀಕೃತ ದಾಖಲಾತಿ ಘಟಕ, ಸೆಂಟ್ರಲ್ ಜೂನಿಯರ್ ಕಾಲೇಜು ಆವರಣ, ಕಂಪೇಗೌಡ ರಸ್ತೆ, ಬೆಂಗಳೂರು-560 009. ದೂರವಾಣಿ: 080-22228805, 22483140, 22483145 ಇ-ಮೇಲ್ : cackarnataka@gmail.com

ಸಂ.: ಸಿಎಸಿ3.ಬಿ.ಇಡಿ.ದಾಖಲಾತಿ/2015-16 ದಿನಾಂಕ : 09.12.2015

## ಪ್ರಕಟಣೆ

**2015-16ನೇ ಸಾಲಿಗೆ ಎರಡು ವರ್ಷದ ಬಿ.ಇಡಿ ಕೋರ್ಸಿಗೆ ದಾಖಲಾತಿ ಅಧಿಸೂಚನೆ**

2015-16ನೇ ಸಾಲಿನಲ್ಲಿ ಎರಡು ವರ್ಷದ ಬಿ.ಇಡಿ ಕೋರ್ಸಿನ ವ್ಯಾಸಂಗಕ್ಕಾಗಿ ರಾಜ್ಯದ ಸರ್ಕಾರಿ, ಮಾನ್ಯತೆ ಪಡೆದ ಅನುದಾನಿತ ಹಾಗೂ ಅನುದಾನ ರಹಿತ ಬಿ.ಇಡಿ ಕಾಲೇಜುಗಳಲ್ಲಿನ ಸರ್ಕಾರಿ ಕೋಟಾದ ಸೀಟುಗಳ ದಾಖಲಾತಿಗಾಗಿ ಆನ್‌ಲೈನ್ ಮೂಲಕ ಅರ್ಜಿಯನ್ನು ಇಲಾಖಾ ವೆಬ್‌ಸೈಟ್ **www.schooleducation.kar.nic.in**ರಲ್ಲಿ ದಿನಾಂಕ: **11.12.2015** ರಿಂದ **28-12-2015**ರವರೆಗೆ ಆಹ್ವಾನಿಸಲಾಗಿದೆ. ಜಿಲ್ಲಾವಾರು ಬಿ.ಇಡಿ ಶಿಕ್ಷಣ ಸಂಸ್ಥೆಗಳ ಪಟ್ಟಿ ಅರ್ಹತೆ, ಮೀಸಲಾತಿ ವಿವರ ಹಾಗೂ ಇತರೆ ಸೂಚನೆಗಳನ್ನು ಮೇಲ್ಕಂಡ ವೆಬ್‌ಸೈಟ್‌ನಲ್ಲಿ ನೀಡಲಾಗಿದ್ದು ಕಡ್ಡಾಯವಾಗಿ ಅವುಗಳನ್ನು ಓದಿಕೊಂಡು ಅರ್ಜಿಯನ್ನು ಕ್ರಮವಾಗಿ ಭರ್ತಿ ಮಾಡುವುದು. ಹೆಚ್ಚಿನ ಮಾಹಿತಿಗಾಗಿ ಆಯಾ ಜಿಲ್ಲೆಗಳ ಸಿ.ಟಿ.ಇ./ಡಯಟ್ ಪ್ರಾಂಶುಪಾಲರುಗಳನ್ನು ಸಂಪರ್ಕಿಸುವುದು.

ಸಹಿ/- ವಿಶೇಷಾಧಿಕಾರಿ

ಪ್ರಜಾವಾಣಿ P-11

ದಿನಾಂಕ 10-12-2015

PRINCIPAL
J.S.S. Institute of Education
P.B. 26, SAKALESHPUR-573 134
Hassan Dist



# ಶಿಕ್ಷಣ ದಾಸೋಹದ ಸ್ವಾಮಿ

## ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ

ಮೈಸೂರು ಜಿಲ್ಲೆ ನಂಜನಗೂಡು ತಾಲೂಕು ಕಪಿಲಾ ನದಿ ದಂಡೆಯಲ್ಲಿರುವ ಸುತ್ತೂರು ಮಠಕ್ಕೆ ಒಂದು ಸಾವಿರ ವರ್ಷಗಳ ಇತಿಹಾಸವಿದೆ. ನಾಡಿನ ಧಾರ್ಮಿಕ, ಶೈಕ್ಷಣಿಕ, ಸಾಂಸ್ಕೃತಿಕ, ಸಾಮಾಜಿಕ ಕ್ಷೇತ್ರಗಳಲ್ಲಿ ಮುಂಚೂಣಿಯಲ್ಲಿದೆ. ಜಗದ್ಗುರು ಶ್ರೀ ಶಿವರಾತ್ರೀಶ್ವರ ರಾಜೇಂದ್ರ ಸ್ವಾಮಿಗಳು ಸುತ್ತೂರು ಮಠದ 23ನೇ ಪೀಠಾಧಿಪತಿಗಳು. ಚಿಕ್ಕ ವಯಸ್ಸಿನಲ್ಲಿಯೇ ತಮ್ಮ ಹಿರಿಯರಾದ ಜಗದ್ಗುರು ಪಟ್ಟದ ಶಿವರಾತ್ರಿ ಮಹಾಸ್ವಾಮಿಗಳೊಂದಿಗೆ ಹೊಣೆಗಾರಿಕೆಯನ್ನು ಹಂಚಿಕೊಂಡರು. ಹಿಂದಿನ ಸ್ವಾಮಿಗಳಂತೆಯೇ ಇವರು ಕೂಡ ಎಲ್ಲರಲ್ಲಿಯೂ ಒಳ್ಳೆಯದನ್ನೆ ಕಂಡವರು. ಅರ್ಧ ಶತಮಾನಕ್ಕೂ ಹೆಚ್ಚು ಕಾಲ ತಮಗಾಗಿ ಏನನ್ನೂ ಬಯಸದೆ ಎಲ್ಲರ ಯೋಗ ಕ್ಷೇಮ ನೋಡಿಕೊಂಡರು.

ಕನ್ನಡ ಮತ್ತು ಸಂಸ್ಕೃತ ಭಾಷೆಗಳೆರಡರಲ್ಲೂ ವಿದ್ವಾಂಸರಾಗಿದ್ದರು. ಇಂಗ್ಲಿಷ್ ಬಲ್ಲವರಾಗಿದ್ದರು. ಕಲೆ ಮತ್ತು ಸಾಹಿತ್ಯಗಳಿಗೆ ಪೋಷಕರಾಗಿದ್ದರು. ವಿಚಾರಶೀಲರೂ, ಸೂಕ್ಷ್ಮಗ್ರಾಹಿಗಳೂ ಆಗಿದ್ದರು. ಉದಾತ್ತ ಆಲೋಚನೆಯನ್ನು ವಾಸ್ತವಿಕತೆಯತ್ತ ತಿರುಗಿಸುವ ಕಲೆಯನ್ನು ಕರಗತ ಮಾಡಿಕೊಂಡಿದ್ದರು. ಹಿಂದಿನವರೆಲ್ಲರ ಜಾಣ್ಮೆ ಇವರಲ್ಲಿ ಮೂರ್ತೀಭವಿಸಿದಂತೆ ತೋರುತ್ತಿತ್ತು. ಅವರು ಕೈಗೊಂಡ ಪ್ರತಿಯೊಂದು ಹೆಜ್ಜೆಯೂ ಹೊಸ ಸೇವಾ ಕ್ಷೇತ್ರಗಳ ಹುಡುಕಾಟದ ಮುಂದಿನ ಹೆಜ್ಜೆಯಾಗಿತ್ತು. ಹಾಗಿದ್ದರಿಂದಲೇ ಜೆಎಸ್‌ಎಸ್ ಮಹಾವಿದ್ಯಾಪೀಠದ ಮೂಲಕ ಶೈಕ್ಷಣಿಕ ಸಂಸ್ಥೆಗಳ ಸಾಮ್ರಾಜ್ಯವನ್ನೇ ನಿರ್ಮಿಸಲು ಅವರಿಗೆ ಸಾಧ್ಯವಾಯಿತು. ಅವರು ಯಾವುದೇ ಬಗೆಯ ಅಧಿಕಾರ ಬಯಸುವವರಾಗಿರಲಿಲ್ಲ. ವಾಸ್ತವವಾಗಿ ಯಾವುದೇ ಸ್ವಾರ್ಥ ಬಯಕೆಗಳಿಲ್ಲದ ದಣಿವರಿಯದ ಕಾರ್ಯಕರ್ತರಾಗಿದ್ದರು.

ಸ್ವಾತಂತ್ರ್ಯಪೂರ್ವದಲ್ಲಿ ದೇಶದಲ್ಲಿದ್ದ ಹಸಿವು, ಬಡತನ, ಅಜ್ಞಾನ, ನಿರುದ್ಯೋಗ, ಅನಾರೋಗ್ಯ ಮುಂತಾದ ಸಮಸ್ಯೆಗಳಿಗೆ ಅನಕ್ಷರತೆಯೇ ಮೂಲ ಕಾರಣವೆಂದು ತಿಳಿದು, ಶಿಕ್ಷಣ ಮತ್ತು ದಾಸೋಹಕ್ಕೆ ಒತ್ತು ನೀಡಿದರು. ನಂತರ ಆರೋಗ್ಯ ಕ್ಷೇತ್ರಕ್ಕೂ ಕಾಲಿಟ್ಟು, ಆಸ್ಪತ್ರೆ ಆರಂಭಿಸಿದರು. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಸ್ಥಾಪನೆಗೆ ಕಾರಣಕರ್ತರು. ಈಗಿನ ಪೀಠಾಧಿಪತಿ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರು ಕೂಡ ಅದೇ ಸಂಪ್ರದಾಯ ಮುಂದುವರೆಸುತ್ತಿದ್ದಾರೆ. ಅವರ ಸತ್‌ಸಂಕಲ್ಪದಿಂದ ಜೆಎಸ್‌ಎಸ್ ಒಂದು ಮಹಾನ್ ಸಂಸ್ಥೆಯಾಗಿ ರೂಪುಗೊಂಡಿದೆ.

ನಮ್ಮ ವಿಳಾಸ: ಬೈಟು ಕಾಫಿ, ಕನ್ನಡಪ್ರಭ, ನಂ.36, ಕ್ರೆಸೆಂಟ್ ರಸ್ತೆ,

11 ಜುಲೈ 2015
ಕನ್ನಡಪ್ರಭ

PRINCIPAL
J.S.S. Institute of Education
P.B. 26, SAKALESHPUR-573 134
Hassan Dist

▶ ಖಾಸಗಿ ಅನುದಾನಿತ ಶಿಕ್ಷಕರಿಗೆ ಹೈಕೋರ್ಟ್ ರಿಲೀಫ್

# ಶಿಕ್ಷಕರ ಸೌಲಭ್ಯಕ್ಕೆ ಕತ್ತರಿ ಹಾಕುತ್ತಿದ್ದ ರಾಜ್ಯದ ಕಾಯ್ದೆಯೇ ರದ್ದು

**■ ಕಾಯ್ದೆಯು ಸುಪ್ರೀಂ ಕೋರ್ಟ್, ಹೈಕೋರ್ಟ್ ಆದೇಶದ ಉಲ್ಲಂಘನೆ: ಪೀಠ**

- ನೇಮಕವಾದ ದಿನದಿಂದಲೇ ಎಲ್ಲ ಸವಲತ್ತು, ಹಿಂಬಾಕಿ ನೀಡಲು ಆದೇಶ
- ಸರ್ಕಾರವು ಸಂಸ್ಥೆ ಅನುದಾನಿತ ಆದಾಗಿನಿಂದ ಸವಲತ್ತು, ಹಿಂಬಾಕಿ ನೀಡಲು ಕಾಯ್ದೆ ರೂಪಿಸಿತ್ತು

ಬೆಂಗಳೂರು: ಸುಪ್ರೀಂ ಕೋರ್ಟ್ ಮತ್ತು ರಾಜ್ಯ ಹೈಕೋರ್ಟ್ ಆದೇಶಗಳನ್ನು ಬದಿಗೊತ್ತಿ ರಾಜ್ಯ ಸರ್ಕಾರವು ರೂಪಿಸಿದ್ದ 'ಕರ್ನಾಟಕ ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳ ಉದ್ಯೋಗಿಗಳ ನಿಯಮಗಳ (ವೇತನ ನಿಯಂತ್ರಣ, ಪಿಂಚಣಿ ಹಾಗೂ ಇತರೆ ಸೌಲಭ್ಯಗಳು)ಕಾಯ್ದೆ -2014 ಯನ್ನು ಹೈಕೋರ್ಟ್ ಅಸಾಂವಿಧಾನಿಕ ಎಂದು ಘೋಷಿಸಿ ರದ್ದುಪಡಿಸಿದೆ.

ಕಾಯ್ದೆಯನ್ನುಪ್ರಶ್ನಿಸಿಗೀತಾಸೇರಿದಂತೆ 250ಕ್ಕೂ ಹೆಚ್ಚು ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳ ಶಿಕ್ಷಕರು ಸಲ್ಲಿಸಿದ್ದ ಅರ್ಜಿಯನ್ನು ಊರ್ಜಿತಗೊಳಿಸಿದ ನ್ಯಾ. ಅರವಿಂದ ಕುಮಾರ್ ಅವರಿದ್ದ ಏಕಸದಸ್ಯ ಪೀಠವು ಶುಕ್ರವಾರ ಈ ಮಹತ್ವದ ಆದೇಶ ಹೊರಡಿಸಿದೆ. ಅಲ್ಲದೆ ಖಾಸಗಿ ಅನುದಾನಿತ ಪ್ರಾಥಮಿಕ, ಹಿರಿಯ ಮತ್ತು ಪ್ರೌಢ ಶಾಲೆ, ಪದವಿಪೂರ್ವ, ಪದವಿ ಮತ್ತು ಪಾಲಿಟೆಕ್ನಿಕ್ ಶೈಕ್ಷಣಿಕ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗೆ ತಾವು ನೇಮಕಗೊಂಡ ದಿನದಿಂದ ವೇತನ, ಪಿಂಚಣಿ, ಹಿಂಬಾಕಿ ಸೇರಿದಂತೆ ಸೇವಾ ಸೌಲಭ್ಯ ಕಲ್ಪಿಸಲು ನಿರ್ದೇಶಿಸಿದೆ.


▶ 6ನೇ ಪುಟಕ್ಕೆ

11 ಜುಲೈ 2015 ಉದಯವಾಣಿ

PRINCIPAL
J.S.S. Institute of Educatio[illegible]
P.B. 26, SAKALESHPUR-573 1[illegible]
Hassan Dist

ಜನತಾವಾಣಿ 28/12/15 P/4

# ಫೆ.5ರಿಂದ ಸುತ್ತೂರು ಜಾತ್ರೆ: ಪ್ರಚಾರ ರಥಕ್ಕೆ ಸ್ವಾಗತ



ಸುತ್ತೂರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವ ಪ್ರಚಾರದ ಅಂಗವಾಗಿ ಪಟ್ಟಣಕ್ಕೆ ಆಗಮಿಸಿದ ಜಾತ್ರಾ ಪ್ರಚಾರ ರಥವನ್ನು ಜೆಎಸ್ಎಸ್ ಶಾಲಾ ಕಾಲೇಜಿನ ಸಿಬ್ಬಂದಿ, ವೀರಶೈವ ಮುಖಂಡರು ಸ್ವಾಗತಿಸಿದರು.

ಸಕಲೇಶಪುರ: ಸುತ್ತೂರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವವು ಫೆ.5ರಿಂದ 10 ರವರೆಗೆ ವಿಜ್ರಂಭಣೆಯಿಂದ ನಡೆಯಲಿದ್ದು, ಈ ಜಾತ್ರಾ ಮಹೋತ್ಸವದ ಪ್ರಚಾರದ ಅಂಗವಾಗಿ ಪಟ್ಟಣಕ್ಕೆ ಆಗಮಿಸಿದ ಜಾತ್ರಾ ಪ್ರಚಾರ ರಥವನ್ನು ಜೆಎಸ್ಎಸ್ ಶಾಲಾ ಕಾಲೇಜಿನ ಸಿಬ್ಬಂದಿ ಹಾಗೂ ವೀರಶೈವ ಸಮಾಜದ ಮುಖಂಡರು ಸ್ವಾಗತಿಸಿದರು.

ಈ ಸಂದರ್ಭದಲ್ಲಿ ಪ್ರಚಾರ ಸಮಿತಿಯ ಸಂಚಾಲಕ ಪಂಚಾಕ್ಷರಿ ಮಾತನಾಡಿ, ಫೆ.5ರಿಂದ 10ರವರೆಗೆ ಸುತ್ತೂರಿನಲ್ಲಿ ಜಾತ್ರೆ ನಡೆಯಲಿದ್ದು, ಜಾತ್ರೆಯಲ್ಲಿ ಹಲವಾರು ಜನಪದ ತಂಡಗಳು ಕಲಾ ಪ್ರದರ್ಶನ ನೀಡಲಿದೆ. ಆರು ದಿನಗಳು ನಡೆಯುವ. ಜಾತ್ರೆಯಲ್ಲಿ ಧಾರ್ಮಿಕ ಸಭೆ, ಸಾಮೂಹಿಕ ವಿವಾಹ, ವಸ್ತು ಪ್ರದರ್ಶನ, ಕೃಷಿಮೇಳ ಹಾಗೂ ಸಮ್ಮೇಳನ, ಭಜನಾ ಮೇಳ, ಕುಸ್ತಿಪಂದ್ಯಾವಳಿ, ದೇಶಿ ಕ್ರೀಡಾ ಸ್ಪರ್ಧೆಗಳು, ರಂಗೋಲಿ, ಚಿತ್ರಕಲಾ ಸ್ಪರ್ಧೆ ಮತ್ತು ಕೃಷಿ ಉತ್ತೇಜನಕ್ಕಾಗಿ ಸುಮಾರು ನೂರರಷ್ಟು ಪ್ರದರ್ಶನ ಮಳಿಗೆಗಳು ಸ್ಥಾಪಿಸಲಾಗಿದೆ. ಗ್ರಾಮೀಣ ಭಾಗದ ಸಣ್ಣಕೃಷಿಕರಿಗೆ ಕಡಿಮೆ ಜಮೀನಿನಲ್ಲಿ ಸ್ವಾವಲಂಬನೆ ಬದುಕಿಗೆ ಅನುಕೂಲವಾಗುವ ರೀತಿಯಲ್ಲಿ ಕೃಷಿ ಮಾಡಲು ಸಂವಾದಗಳನ್ನು ಏರ್ಪಡಿಸಲಾಗಿದೆ ಎಂದರು.

ಮಲೆನಾಡು ವೀರಶೈವ ಯುವವೇದಿಕೆ ಅಧ್ಯಕ್ಷ ನರೇಶ್ ಮಾತನಾಡಿ, ಈ ಬಾರಿಯ ಸುತ್ತೂರು ಜಾತ್ರಾ ಮಹೋತ್ಸವಕ್ಕೆ ತಾಲೂಕಿನಿಂದ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಜನ ಭಾಗವಹಿಸುವ ನಿರೀಕ್ಷೆಯಿದ್ದು, ಹೆಚ್ಚಿನ ಮಾಹಿತಿ ಬೇಕಾದಲ್ಲಿ ಮಲೆನಾಡು ವೀರಶೈವ ಯುವ ವೇದಿಕೆ ಹಾಗೂ ಜೆಎಸ್ಎಸ್ ಶಿಕ್ಷಣ ಸಂಸ್ಥೆಯನ್ನು ಸಂಪರ್ಕಿಸಬೇಕೆಂದು ಹೇಳಿದರು.

ತಾಲೂಕಿನ ಜೆಎಸ್ಎಸ್ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿ ಮಂಜುನಾಥ್, ಡಾ। ವೀರಯ್ಯ, ನವೀನ್, ರಾಜಪ್ಪ, ರೇಣುಕಾರಾಧ್ಯ, ಗಂಗಾಧರ ಸ್ವಾಮಿ, ಅಖಿಲ ಭಾರತ ವೀರಶೈವ ವೇದಿಕೆಯ ತಾಲೂಕು ಘಟಕದ ಅಧ್ಯಕ್ಷ ಯತೀಶ್, ವೀರಶೈವ ಯುವ ವೇದಿಕೆ ಪದಾಧಿಕಾರಿಗಳಾದ ಜೆ.ಡಿ.ರವಿ, ದೋಣಗಾಲ್ ಸುರೇಶ್, ನಾಗರ ಹಿತೈಷಿ, ಮಳಲಿ ಸ್ವಾಮಿ ಸೇರಿದಂತೆ ಇನ್ನು ಅನೇಕರು ಉಪಸ್ಥಿತರಿದ್ದರು.

PRINCIPAL
J.S.S. Institute of Education
P.B. 26, SAKALESHPUR-573 134
Hassan Dist

# ಸುತ್ತೂರು ಜಾತ್ರೆ ಪ್ರಚಾರ ರಥಕ್ಕೆ ಸ್ವಾಗತ

**ಫೆ.5ರಿಂದ 10ರವರೆಗೆ ವಿವಿಧ ಕಾರ್ಯಕ್ರಮ**

**ಹಾಸನ:** ಮೈಸೂರು ಜಿಲ್ಲೆಯ ಸುತ್ತೂರು ಶ್ರೀ ಕ್ಷೇತ್ರದಲ್ಲಿ ಫೆ.5ರಿಂದ 10ರವರೆಗೆ ನಡೆಯುವ ಜಾತ್ರೆ ಅಂಗವಾಗಿ ಸುತ್ತೂರಿನಿಂದ ವಿವಿಧ ಜಿಲ್ಲೆಗಳಿಗೆ ತೆರಳುತ್ತಿರುವ ಪ್ರಚಾರ ರಥ ನಗರಕ್ಕೆ ಆಗಮಿಸಿತು.

ಬಸವೇಶ್ವರ ಕಲ್ಯಾಣ ಮಂಟಪದ ಬಳಿ ವೀರಶೈವ ಸಮುದಾಯದ ಮುಖಂಡರು ರಥವನ್ನು ಬರಮಾಡಿಕೊಂಡರು.

ಈ ಸಂದರ್ಭ ಮಾತನಾಡಿದ ವೀರಶೈವ ಸಂಘದ ಜಿಲ್ಲಾ ಉಪಾಧ್ಯಕ್ಷ ವೈ.ಎಸ್.ವೀರಭದ್ರಪ್ಪ, ಫೆಬ್ರವರಿ 5ರಂದು ಉತ್ಸವಮೂರ್ತಿಯನ್ನು ಶ್ರೀ ಮಠದಿಂದ ಕತೃ ಗದ್ದುಗೆಗೆ ತಂದು ಪ್ರತಿಷ್ಠಾಪಿಸಲಾಗುವುದು. 6ರಂದು ಹಾಲರವಿ ಉತ್ಸವ, 7ರಂದು ರಥೋತ್ಸವ ಮತ್ತು ಲಕ್ಷದೀಪೋತ್ಸವ, 8ರಂದು ಶ್ರೀ ಮಹದೇಶ್ವರ ಕೊಂಡೋತ್ಸವ, 9ರಂದು ಶ್ರೀ ವೀರಭದ್ರೇಶ್ವರ ಉತ್ಸವ, ಕೊಂಡೋತ್ಸವ, ತೆಪ್ಪೋತ್ಸವ, 10ರಂದು ಅನ್ನ ಬ್ರಹ್ಮೋತ್ಸವ ಕಾರ್ಯಕ್ರಮ ಜರುಗಲಿವೆ ಎಂದು ಹೇಳಿದರು.



ಹಾಸನ ನಗರದ ಬಸವೇಶ್ವರ ಕಲ್ಯಾಣ ಮಂಟಪದ ಬಳಿ ಸುತ್ತೂರು ಜಾತ್ರೆಯ ಪ್ರಚಾರ ರಥವನ್ನು ಸಮುದಾಯದ ಮುಖಂಡರು ಬರಮಾಡಿಕೊಂಡರು.

ಸಂಘದ ಕಾರ್ಯದರ್ಶಿ ಬಿ.ಎಂ.ಭುವನಾಕ್ಷ, ನಿರ್ದೇಶಕರಾದ ಅನ್ನಪೂರ್ಣಮ್ಮ, ಎಸ್.ಎನ್.ಪಾಲಾಕ್ಷ, ಅಖಿಲ ಭಾರತ ವೀರಶೈವ ಮಹಾಸಭಾದ ಜಿಲ್ಲಾ ಕಾರ್ಯದರ್ಶಿ ಕಟ್ಟಾಯ ಶಿವಕುಮಾರ್, ರಥೋತ್ಸವದ ಸಂಚಾಲಕ ಪಂಚಾಕ್ಷರಿ ಇತರರು ಹಾಜರಿದ್ದರು.

**ಸಕಲೇಶಪುರ ವರದಿ:** ಫೆಬ್ರುವರಿ 5ರಿಂದ 10ರವರೆಗೆ ನಡೆಯುವ ಸುತ್ತೂರು ಜಾತ್ರಾ ಮಹೋತ್ಸವದ ಪ್ರಚಾರ ರಥ ಯಾತ್ರೆಯನ್ನು ಪಟ್ಟಣದ ಜೆಎಸ್‌ಎಸ್ ಶಾಲಾ ಕಾಲೇಜಿನ ಸಿಬ್ಬಂದಿ ಹಾಗೂ ವೀರಶೈವ ಸಮಾಜದ ಮುಖಂಡರು ಆತ್ಮೀಯವಾಗಿ ಸ್ವಾಗತಿಸಿದರು.

ಪ್ರಚಾರ ಸಮಿತಿಯ ಸಂಚಾಲಕ ಪಂಚಾಕ್ಷರಿ ಮಾತನಾಡಿದರು. ಮಲೆನಾಡು ವೀರಶೈವ ಯುವ ವೇದಿಕೆ ಅಧ್ಯಕ್ಷ ನರೇಶ್ ಮಾತನಾಡಿದರು . ತಾಲೂಕಿನ ಜೆಎಸ್‌ಎಸ್‌ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಗಳಾದ ಮಂಜು ನಾಥ್, ಡಾ.ವೀರಯ್ಯ, ನವೀನ್, ರಾಜಪ್ಪ, ರೇಣುಕಾರಾಧ್ಯ, ಗಂಗಾಧರಸ್ವಾಮಿ, ಅಖಿಲ ಭಾರತ ವೀರಶೈವ ವೇದಿಕೆಯ ತಾಲೂಕು ಘಟಕದ ಅಧ್ಯಕ್ಷ ಯತೀಶ್, ಹಾಜರಿದ್ದರು.

ದಿನಾಂಕ 28/12/15

P/N 2

PRINCIPAL
J.S.S. Institute of Education
P.B. 26, SAKALESHPUR-573 1..,
Hassan Dist

P/N 11

ವಿಜಯ ಕರ್ನಾಟಕ ದಿನಾಂಕ 28-12-2015

# ಸಕಲೇಶಪುರ: ಸುತ್ತೂರು ಜಾತ್ರೋತ್ಸವ ಪ್ರಚಾರ

■ ವಿಕ ಸುದ್ದಿಲೋಕ ಸಕಲೇಶಪುರ

ಫೆ.5 ರಿಂದ 10ರ ವರೆಗೆ ಸುತ್ತೂರಿನಲ್ಲಿ ನಡೆಯಲಿರುವ ಶ್ರೀ ಶಿವರಾತ್ರೀಶ್ವರ ಶಿವಯೋಗಿ ಅವರ ಜಾತ್ರೆ ಮಹೋತ್ಸವದ ಬಗ್ಗೆ ಭಾನುವಾರ ವೀರಶೈವ ಸಮಾಜ ಹಾಗೂ ಸ್ಥಳೀಯ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ವತಿಯಿಂದ ಪಟ್ಟಣದಲ್ಲಿ ಪ್ರಚಾರ ಕಾರ್ಯ ಕೈಗೊಳ್ಳಲಾಯಿತು.

ಸುತ್ತೂರಿನಿಂದ ಬಂದಿದ್ದ ಪ್ರಚಾರ ರಥದೊಂದಿಗೆ ಪ್ರಮುಖ ಬೀದಿಗಳಲ್ಲಿ ಸಾಗಿದ ಪ್ರಮುಖರು ಸುತ್ತೂರು ಜಾತ್ರೆಯ ಹಿನ್ನೆಲೆ, ವೈಶಿಷ್ಟ್ಯ, ಕಾರ್ಯಕ್ರಮಗಳು ಹಾಗೂ ಜಾತ್ರೆಗೆ ಹೋಗುವ ಭಕ್ತರಿಗೆ ಒದಗಿಸುವ ಸೌಕರ್ಯಗಳ ಬಗ್ಗೆ ಮಾಹಿತಿ ನೀಡಿದರು. ಬಿತ್ತಿಪತ್ರಗಳನ್ನು ಅಂಟಿಸಿ, ಕರಪತ್ರಗಳನ್ನು ಹಂಚಿ ಜಾತ್ರೆಗೆ ಭಕ್ತರನ್ನು ಆಹ್ವಾನಿಸಿದರು.

**ಕಾರ್ಯಕ್ರಮ:** ಆರು ದಿನಗಳ ಕಾಲ ನಡೆಯಲಿರುವ ಜಾತ್ರೆಯಲ್ಲಿ ಧಾರ್ಮಿಕ ಕಾರ್ಯಕ್ರಮ ಹಾಲ್ಹರವಿ ಉತ್ಸವ, ರಥೋತ್ಸವ, ಲಕ್ಷ ದೀಪೋತ್ಸವ, ಮಹದೇಶ್ವರ ಕೆಂಡೋತ್ಸವ, ತೆಪ್ಪೋತ್ಸವ, ಅನ್ನಬ್ರಹ್ಮೋತ್ಸವ, ಸೋಬಾನೆ ಮತ್ತು ರಂಗೋಲಿ ಸ್ಪರ್ಧೆ, ರಾಜ್ಯದ ವಿವಿಧ ಮೂಲೆಗಳಿಂದ ಆಗಮಿಸುವ ಭಜನಾ ತಂಡಗಳ ಪ್ರದರ್ಶನ, ದನಗಳ ಜಾತ್ರೆ, ವಸ್ತು ಪ್ರದರ್ಶನ, ಉಚಿತ ಸಾಮೂಹಿಕ ಸರಳ ವಿವಾಹ, ಶೈಕ್ಷಣಿಕ ಹಾಗೂ ವಿಜ್ಞಾನ ವಸ್ತುಪ್ರದರ್ಶನ, ಕೃಷಿ ಮೇಳ, ದೇಸಿ ಹಸುಗಳ ಸ್ಪರ್ಧೆ, ಗದ್ದುಗೆ ಆವರಣ, ನಾಟಕಗಳು, ಯಕ್ಷಗಾನ, ಮಹಿಳೆಯರು ಹಾಗೂ ವಿದ್ಯಾರ್ಥಿಗಳಿಗಾಗಿ ದೇಸಿ ಆಟಗಳು, ಮಕ್ಕಳು ಹಾಗೂ ಸಾರ್ವಜನಿಕರಿಗೆ ಗಾಳಿಪಟ ಸ್ಪರ್ಧೆ, ಕುಸ್ತಿ, ದೋಣಿ ವಿಹಾರ ಕಾರ್ಯಕ್ರಮ ನಡೆಯುತ್ತಿವೆ.

ವಿಕ ಚಿತ್ರಲೋಕ




ಸಕಲೇಶಪುರದಲ್ಲಿ ಸುತ್ತೂರು ಜಾತ್ರೆ ಮಹೋತ್ಸವದ ಪ್ರಚಾರ ಕಾರ್ಯ ನಡೆಯಿತು.

**ವ್ಯವಸ್ಥೆ:** ದೂರದ ಊರುಗಳಿಂದ ಜಾತ್ರೆಗೆ ಬರುವ ಎಲ್ಲಾ ಭಕ್ತರಿಗೆ ಉಚಿತ ವಸತಿ, ಬೆಳಗ್ಗೆ, ಮಧ್ಯಾಹ್ನ, ರಾತ್ರಿ ಪ್ರಸಾದ, ರಾಜ್ಯದ ಪ್ರತಿ ಜಿಲ್ಲೆ ಹಾಗೂ ತಾಲೂಕು ಕೇಂದ್ರಗಳಿಂದ ಸಾರಿಗೆ ವ್ಯವಸ್ಥೆ ಮಾಡಿಕೊಡಲಾಗಿದೆ. ಜಾತ್ರೆಗೆ ಬರುವ ಆಸಕ್ತ ಭಕ್ತರಿಗೆ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದ ವತಿಯಿಂದ ಹನ್ನೊಂದು ಬಗೆಯ ವಿವಿಧ ಔಷಧಿ ಗಿಡಗಳನ್ನು ಉಚಿತವಾಗಿ ನೀಡುವ ವ್ಯವಸ್ಥೆ ಇದೆ ಎಂದು ವಿವರಿಸಿದರು.

ಪಟ್ಟಣದಲ್ಲಿ ನಡೆದ ಪ್ರಚಾರ ಯಾತ್ರೆ ಸಂದರ್ಭ ಅಖಿಲ ಭಾರತ ವೀರಶೈವ ಸಮಾಜದ ತಾಲೂಕು ಅಧ್ಯಕ್ಷ ಬಿ.ಜಿ.ಯತೀಶ್, ತಾಲೂಕು ವೀರಶೈವ ಯುವ ವೇದಿಕೆ ಅಧ್ಯಕ್ಷ ನರೇಶ್, ಜೆಎಸ್‌ಎಸ್ ಶಿಕ್ಷಣ ಸಂಸ್ಥೆಯ ಮಂಜುನಾಥ್, ನಟರಾಜ್, ರೇಣುಕಾರಾಧ್ಯ, ಹಿತೇಶ್, ಸುರೇಶ್, ಸ್ವಾಮಿ, ಸಂದೇಶ್ ಮತ್ತಿತರರು ಹಾಜರಿದ್ದರು.

PRINCIPAL
J.S.S. Institute of Education
P.B. 26, SAKALESHPUR-573 134
Hassan Dist

# ಸುತ್ತೂರು ಜಾತ್ರಾ ಮಹೋತ್ಸವದ ಪ್ರಚಾರ ಕಾರ್ಯ



ಸಕಲೇಶಪುರ: ಮುಂಬರುವ ಫೆ.5 ರಿಂದ 10ರ ವರೆಗೆ ಸುತ್ತೂರಿನಲ್ಲಿ ನಡೆಯಲಿರುವ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿ ಅವರ ಜಾತ್ರೆ, ಮಹೋತ್ಸವದ ಬಗ್ಗೆ ಭಾನುವಾರ ವೀರಶೈವ ಸಮಾಜ ಹಾಗೂ ಸ್ಥಳೀಯ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ವತಿಯಿಂದ ಪಟ್ಟಣದಲ್ಲಿ ಪ್ರಚಾರ ಕಾರ್ಯ ಕೈಗೊಳ್ಳಲಾಯಿತು.

ಸುತ್ತೂರಿನಿಂದ ಬಂದಿದ್ದ ಪ್ರಚಾರ ರಥದೊಂದಿಗೆ ಪ್ರಮುಖ ಬೀದಿಗಳಲ್ಲಿ ಸಾಗಿದ ಪ್ರಮುಖರು ಸುತ್ತೂರು ಜಾತ್ರೆಯ ಹಿನ್ನೆಲೆ, ವೈಶಿಷ್ಟ್ಯ, ಕಾರ್ಯಕ್ರಮಗಳು ಹಾಗೂ ಜಾತ್ರೆಗೆ ಹೋಗುವ ಭಕ್ತರಿಗೆ ಒದಗಿಸುವ ಸೌಕರ್ಯಗಳ ಬಗ್ಗೆ ಮಾಹಿತಿ ನೀಡಿದರು. ಬಿತ್ತಿಪತ್ರಗಳನ್ನು ಅಂಟಿಸಿ, ಕರಪತ್ರಗಳನ್ನು ಹಂಚಿ ಜಾತ್ರೆಗೆ ಭಕ್ತಾದಿಗಳನ್ನು ಆಹ್ವಾನಿಸಿದರು.

ಆರು ದಿನಗಳ ಕಾಲ ನಡೆಯಲಿರುವ ಜಾತ್ರೆಯಲ್ಲಿ ಧಾರ್ಮಿಕ ಕಾರ್ಯಕ್ರಮಗಳಾದ ಹಾಲ್ಹರ ಉತ್ಸವ, ರಥೋತ್ಸವ, ಲಕ್ಷದೀಪೋತ್ಸವ, ಮಹದೇಶ್ವರ ಕೆಂಡೋತ್ಸವ, ತೆಪ್ಪೋತ್ಸವ, ಅನ್ನಬ್ರಹ್ಮೋತ್ಸವ, ಸೋಬಾನ ಮತ್ತು ರಂಗೋಲಿ ಸ್ಪರ್ಧೆ, ರಾಜ್ಯದ ವಿವಿಧ ಮೂಲೆಗಳಿಂದ ಆಗಮಿಸುವ ಭಜನಾ ತಂಡಗಳ ಪ್ರದರ್ಶನ, ದನಗಳ ಜಾತ್ರೆ, ವಸ್ತು ಪ್ರದರ್ಶನ, ಉಚಿತ ಸಾಮೂಹಿಕ ಸರಳ ವಿವಾಹ, ಶೈಕ್ಷಣಿಕ ಹಾಗೂ ವಿಜ್ಞಾನ ವಸ್ತು ಪ್ರದರ್ಶನ, ಕೃಷಿ ಮೇಳ, ದೇಸಿ ಹಸುಗಳ ಸ್ಪರ್ಧೆ, ಗದ್ದುಗೆ ಆವರಣ, ನಾಟಕಗಳು, ಯಕ್ಷಗಾನ, ಮಹಿಳೆಯರು ಹಾಗೂ ವಿದ್ಯಾರ್ಥಿಗಳಿಗಾಗಿ ದೇಸಿ ಆಟಗಳು, ಮಕ್ಕಳು ಹಾಗೂ ಸಾರ್ವಜನಿಕರಿಗೆ ಗಾಳಿಪಟ ಸ್ಪರ್ಧೆ, ಕುಸ್ತಿ, ದೋಣಿ ಹಾರ ಮೊದಲಾದ ಕಾರ್ಯಕ್ರಮಗಳಿವೆ.

ದೂರದ ಊರುಗಳಿಂದ ಜಾತ್ರೆಗೆ ಬರುವ ಎಲ್ಲಾ ಭಕ್ತಾದಿಗಳಿಗೆ ಉಚಿತ ವಸತಿ, ಬೆಳಿಗ್ಗೆ, ಮಧ್ಯಾಹ್ನ, ರಾತ್ರಿ ಪ್ರಸಾದ, ರಾಜ್ಯದ ಪ್ರತಿ ಜಿಲ್ಲೆ ಹಾಗೂ ತಾಲ್ಲೂಕು ಕೇಂದ್ರಗಳಿಂದ ಸಾರಿಗೆ ವ್ಯವಸ್ಥೆ ಮಾಡಿಕೊಡಲಾಗಿದೆ. ಜಾತ್ರೆಗೆ ಬರುವ ಆಸಕ್ತ ಭಕ್ತಾದಿಗಳಿಗೆ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದ ವತಿಯಿಂದ ಹನ್ನೊಂದು ಬಗೆಯ ವಿವಿಧ ಔಷಧಿ ಗಿಡಗಳನ್ನು ಉಚಿತವಾಗಿ ನೀಡುವ ವ್ಯವಸ್ಥೆ ಇದೆ ಎಂದು ತಿಳಿಸಲಾಗಿದೆ.

ಪಟ್ಟಣದಲ್ಲಿ ನಡೆದ ಪ್ರಚಾರ ಯಾತ್ರೆ ಸಂದರ್ಭ ಅಖಿಲ ಭಾರತ ವೀರಶೈವ ಸಮಾಜದ ತಾಲ್ಲೂಕು ಅಧ್ಯಕ್ಷ ಬಿ.ಜಿ.ಯತೀಶ್, ತಾಲ್ಲೂಕು ವೀರಶೈವ ಯುವ ವೇದಿಕೆ ಅಧ್ಯಕ್ಷ ನರೇಶ್, ಜೆಎಸ್‌ಎಸ್ ಶಿಕ್ಷಣ ಸಂಸ್ಥೆಯ ಮಂಜುನಾಥ್, ನಟರಾಜ್, ರೇಣುಕಾರಾಧ್ಯ, ಹಿತೇಶ್, ಸುರೇಶ್, ನಾಗೇಶ್, ಗಂಗಾಧರಸ್ವಾಮಿ, ಸಂದೇಶ್, ಶೀಗೂರು ನಟರಾಜ್ ಮೊದಲಾದವರಿದ್ದರು.

PRINCIPAL
J.S.S. Institute of Education
P.B. 26, SAKALESHPUR-573 134
Hassan Dist

# ಸುತ್ತೂರು ಜಾತ್ರೆ ಪ್ರಚಾರ ರಥಕ್ಕೆ ಸ್ವಾಗತ

**ಫೆ.5ರಿಂದ 10ರವರೆಗೆ ವಿವಿಧ ಕಾರ್ಯಕ್ರಮ**

**ಹಾಸನ:** ವೆ ರು ಜಿಲ್ಲೆಯ ಸುತ್ತೂರು ಶ್ರೀ ಕ್ಷೇತ್ರದಲ್ಲಿ ಫೆ.5ರಿಂದ 10ರವರೆಗೆ ನಡೆಯುವ ಜಾತ್ರೆ ಅಂಗವಾಗಿ ಸುತ್ತೂರಿನಿಂದ ವಿವಿಧ ಜಿಲ್ಲೆಗಳಿಗೆ ತೆರಳುತ್ತಿರುವ ಪ್ರಚಾರ ರಥ ನಗರಕ್ಕೆ ಆಗಮಿಸಿತು.

ಬಸವೇಶ್ವರ ಕಲ್ಯಾಣ ಮಂಟಪದ ಬಳಿ ವೀರಶೈವ ಸಮುದಾಯದ ಮುಖಂಡರು ರಥವನ್ನು ಬರಮಾಡಿಕೊಂಡರು.

ಈ ಸಂದರ್ಭ ಮಾತನಾಡಿದ ವೀರಶೈವ ಸಂಘದ ಜಿಲ್ಲಾ ಉಪಾಧ್ಯಕ್ಷ ವೈ.ಎಸ್.ವೀರಭದ್ರಪ್ಪ, ಫೆಬ್ರವರಿ 5ರಂದು ಉತ್ಸವಮೂರ್ತಿಯನ್ನು ಶ್ರೀ ಮಠದಿಂದ ಕತ್ತ ಗದ್ದುಗೆಗೆ ತಂದು ಪ್ರತಿಷ್ಠಾಪಿಸಲಾಗುವುದು. 6ರಂದು ಹಾಲರವಿ ಉತ್ಸವ, 7ರಂದು ರಥೋತ್ಸವ ಮತ್ತು ಲಕ್ಷದೀಪೋತ್ಸವ, 8ರಂದು ಶ್ರೀ ಮಹದೇಶ್ವರ ಕೊಂಡೋತ್ಸವ, 9ರಂದು ಶ್ರೀ ವೀರಭದ್ರೇಶ್ವರ ಉತ್ಸವ, ಕೊಂಡೋತ್ಸವ, ತೆಪ್ಪೋತ್ಸವ, 10ರಂದು ಅನ್ನ ಬ್ರಹ್ಮೋತ್ಸವ ಕಾರ್ಯಕ್ರಮ ಜರುಗಲಿವೆ ಎಂದು ಹೇಳಿದರು.

ಸಂಘದ ಕಾರ್ಯದರ್ಶಿ ಬಿ.ಎಂ.ಭುವನಾಕ್ಷ, ನಿರ್ದೇಶಕರಾದ ಅನ್ನಪೂರ್ಣಮ್ಮ, ಎಸ್.ಎನ್.ಪಾಲಾಕ್ಷ, ಅಖಿಲ ಭಾರತ ವೀರಶೈವ ಮಹಾಸಭಾದ ಜಿಲ್ಲಾ ಕಾರ್ಯದರ್ಶಿ ಕಟ್ಟಾಯ ಶಿವಕುಮಾರ್, ರಥೋತ್ಸವದ ಸಂಚಾಲಕ ಪಂಚಾಕ್ಷರಿ ಇತರರು ಹಾಜರಿದ್ದರು.



ಹಾಸನ ನಗರದ ಬಸವೇಶ್ವರ ಕಲ್ಯಾಣ ಮಂಟಪದ ಬಳಿ ಸುತ್ತೂರು ಜಾತ್ರೆಯ ಪ್ರಚಾರ ರಥವನ್ನು ಸಮುದಾಯದ ಮುಖಂಡರು ಬರಮಾಡಿಕೊಂಡರು.

**ಸಕಲೇಶಪುರ ವರದಿ:** ಫೆಬ್ರುವರಿ 5ರಿಂದ 10ರವರೆಗೆ ನಡೆಯುವ ಸುತ್ತೂರು ಜಾತ್ರಾ ಮಹೋತ್ಸವದ ಪ್ರಚಾರ ರಥ ಯಾತ್ರೆಯನ್ನು ಪಟ್ಟಣದ ಜೆಎಸ್‌ಎಸ್ ಶಾಲಾ ಕಾಲೇಜಿನ ಸಿಬ್ಬಂದಿ ಹಾಗೂ ವೀರಶೈವ ಸಮಾಜದ ಮುಖಂಡರು ಆತ್ಮೀಯವಾಗಿ ಸ್ವಾಗತಿಸಿದರು.

ಪ್ರಚಾರ ಸಮಿತಿಯ ಸಂಚಾಲಕ ಪಂಚಾಕ್ಷರಿ ಮಾತನಾಡಿದರು. ಮಲೆನಾಡು ವೀರಶೈವ ಯುವ ವೇದಿಕೆ ಅಧ್ಯಕ್ಷ ನರೇಶ್ ಮಾತನಾಡಿದರು . ತಾಲೂಕಿನ ಜೆಎಸ್‌ಎಸ್‌ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಗಳಾದ ಮಂಜು ನಾಥ್, ಡಾ.ವೀರಯ್ಯ, ನವೀನ್, ರಾಜಪ್ಪ, ರೇಣುಕಾರಾಧ್ಯ, ಗಂಗಾಧರಸ್ವಾಮಿ, ಅಖಿಲ ಭಾರತ ವೀರಶೈವ ವೇದಿಕೆಯ ತಾಲೂಕು ಘಟಕದ ಅಧ್ಯಕ್ಷ ಯತೀಶ್, ಹಾಜರಿದ್ದರು.

ವಿಜಯ ವಾಣಿ 28/12/15

P/W 2

PRINCIPAL
J.S.S. Institute of Education
P.B. 26, SAKALESHPUR-573 1
Hassan Dist

ಪ್ರಜಾವಾಣಿ -
ದಿನ 4-4-16 ಪುಟ -2

| | ಮಂಗಳವಾರ | ಬುಧವಾರ | ಗುರುವಾರ |
|---|---|---|---|
| ಹವಾಮಾನ | 32° 18° | 32° 18° | 33° 27° |

ದ ಹವಾಮಾನ : ಗರಿಷ್ಠ 31° ಕನಿಷ್ಠ 17°

ಪ್ರಜಾವಾಣಿ

ಸುದ್ದಿ 2 ನಿಮಿಷ >

## ಕೌಡಹಳ್ಳಿಯಲ್ಲಿ ಮಹಿಳಾ ದಿನಾಚರಣೆ

ಸಕಲೇಶಪುರ: ಮಹಿಳೆ ಎಲ್ಲ ಕ್ಷೇತ್ರಗಳಲ್ಲಿಯೂ ಸಕ್ರಿಯವಾಗಿ ತಮ್ಮನ್ನು ತಾವು ತೊಡಗಿಸಿ ಕೊಳ್ಳುವುದಕ್ಕೆ ಮುಕ್ತ ಅವಕಾಶವನ್ನು ಸರ್ಕಾರ ಕಲ್ಪಿಸಿದೆ ಎಂದು ಇಲ್ಲಿಯ ನ್ಯಾಯಾಧೀಶರಾದ ಎನ್.ಪಿ. ಅನಿತಾ ಹೇಳಿದರು.

ತಾಲ್ಲೂಕಿನ ಕೌಡಹಳ್ಳಿ ಜೆಎಸ್ಎಸ್ ಬಿ.ಇಡಿ ಕಾಲೇಜಿನಲ್ಲಿ ಶನಿವಾರ ಏರ್ಪಡಿಸಿದ್ದ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಶಿಕ್ಷಣದಿಂದ ಮಾತ್ರವೇ ಮಹಿಳೆಯರ ಅಭಿವೃದ್ಧಿ ಸಾಧ್ಯ ಎಂದ ಅವರು, ಹೆಣ್ಣು ಮಕ್ಕಳಿಗೆ ಕಡ್ಡಾಯವಾಗಿ ಶಿಕ್ಷಣ ಕೊಡಿಸುವಂತೆ ಸಲಹೆ ನೀಡಿದರು.

ಸಿವಿಲ್ ನ್ಯಾಯಾಧೀಶರಾದ ಎಚ್.ಎ. ಶಿಲ್ಪಾ ಮಹಿಳಾ ದೌರ್ಜನ್ಯ ತಡೆ ಕಾಯಿದೆ ಬಗ್ಗೆ ಮಾತನಾಡಿದರು.

ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲ ಡಾ. ಎನ್.ಎಸ್. ಸುರೇಶ್, ಜೆಎಸ್ಎಸ್ ನರ್ಸಿಂಗ್ ಕಾಲೇಜಿನ ಪ್ರಾಂಶುಪಾಲರಾದ ವಿನೋಲಿಯಾ ರಾಜ್, ಉಪನ್ಯಾಸಕರಾದ ಎಸ್.ಎಂ. ಮೀನಾಕ್ಷಿ ಖಾದರ್ ಇದ್ದರು.

## ಸಾಂಸ್ಕೃತಿಕ ಚಟುವಟಿಕೆಯಿಂದ

PRINCIPAL
J.S.S. Institute of Education
P.B. 26, SAKALESHPUR-573 134
Hassan Dist

...ವಿರ ರಾಷ್ಟ್ರೀಯ
...ಗಳು

## ಚನ್ನರಾಯಪಟ್ಟಣ ತಾಲೂಕು ಪ್ರತಿಭಾ ಕಾರಂಜಿ: ಶ್ರವಣೇರಿ ವಿದ್ಯಾರ್ಥಿಗಳು ಪ್ರಥಮ

### ಎನ್‌ಡಿಆರ್‌ಕೆ ಪ್ರಥಮ ದರ್ಜೆ ಕಾಲೇಜಿನಲ್ಲಿ 'ವ್ಯಕ್ತಿತ್ವ ಮತ್ತು ಹೊಂದಾಣಿಕೆ' ಉಪನ್ಯಾಸ

# ಸಂಸ್ಕೃತಿ ಉಳಿವು ಯುವಕರಿಂದ ಸಾಧ್ಯ

**ವಿಕ ಸುದ್ದಿಲೋಕ** ಹಾಸನ

ಮನುಷ್ಯನ ವ್ಯಕ್ತಿತ್ವ ಒಬ್ಬರಿಗಿಂತ ಮತ್ತೊಬ್ಬರಿಗೆ ಭಿನ್ನವಾಗಿರುವುದರಿಂದ ತಮ್ಮ ವ್ಯಕ್ತಿತ್ವದಿಂದ ಬೇರೆಯವರಿಗೆ ತೊಂದರೆ ಉಂಟಾಗುವ ರೀತಿ ಇದ್ದರೆ ಹೊಂದಾಣಿಕೆಯಿಂದ ಅದನ್ನು ಸರಿಪಡಿಸಿಕೊಳ್ಳಬೇಕು ಎಂದು ಸಕಲೇಶಪುರ ಜೆಎಸ್‌ಎಸ್ ಶಿಕ್ಷಣ ಕಾಲೇಜಿನ ಪ್ರೊ. ವಿಕ್ರಮ್ ಸಲಹೆ ನೀಡಿದರು.

ಕ್ಯಾಂಪಸ್

ನಗರದ ಎನ್‌ಡಿಆರ್‌ಕೆ ಪ್ರಥಮ ದರ್ಜೆ ಕಾಲೇಜಿನ ಸ್ನಾತಕೋತ್ತರ ವಿಭಾಗದ ಎಂ.ಕಾಂ. ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ 'ವ್ಯಕ್ತಿತ್ವ ಮತ್ತು ಹೊಂದಾಣಿಕೆ' ಎಂಬ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದರು.

ನಕಾರಾತ್ಮಕ ವಿಚಾರಗಳಿಂದ ವಿದ್ಯಾರ್ಥಿಗಳು ಹೊರ ಬಂದು ಸಕಾರಾತ್ಮಕ ಚಿಂತನೆಗಳನ್ನು ಅಳವಡಿಸಿಕೊಳ್ಳಬೇಕು. ವಿಶ್ವಕ್ಕೆ ಮಾದರಿಯಾದ ಭಾರತೀಯ ಸಂಸ್ಕೃತಿಯತ್ತ, ಪಾಶ್ಚಾತ್ಯ ಸಂಸ್ಕೃತಿಯ ವಾರಸುದಾರರು ಭಾರತೀಯ ಸಂಸ್ಕೃತಿಯ ಕಡೆ ದಿನದಿಂದ ದಿನಕ್ಕೆ ಹೊರಳುತ್ತಿದ್ದಾರೆ. ಇಂಥ ಸಂಸ್ಕೃತಿಯನ್ನು ಉಳಿಸುವ ಜವಾಬ್ದಾರಿ ಯುವಜನಾಂಗದ ಕೆಲಸವಾಗಿದೆ ಎಂದರು.

ವಿಕ ಚಿತ್ರಲೋಕ



ಹಾಸನದ ಎನ್‌ಡಿಆರ್‌ಕೆ ಪ್ರಥಮ ದರ್ಜೆ ಕಾಲೇಜಿನ ಸ್ನಾತಕೋತ್ತರ ವಿಭಾಗದ ಎಂ.ಕಾಂ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ 'ವ್ಯಕ್ತಿತ್ವ ಮತ್ತು ಹೊಂದಾಣಿಕೆ' ಎಂಬ ಉಪನ್ಯಾಸ ಕಾರ್ಯಕ್ರಮವನ್ನು ಬಿಸಿಕೆಎಸ್ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಕೆ.ಪಿ.ವಿಜಯಕುಮಾರ್ ಉದ್ಘಾಟಿಸಿದರು.

ವ್ಯಕ್ತಿತ್ವ ವಿಕಸನ ಹೊಂದುವುದು ವ್ಯಕ್ತಿಗೆ ಬಹಳ ಪ್ರಮುಖವಾದುದು. ಎಲ್ಲವನ್ನೂ ಸಾಕಾರಗೊಳಿಸುವ ಶಕ್ತಿಯನ್ನು ಹೊಂದಿರುವ ಯುವಜನತೆ ವ್ಯಕ್ತಿತ್ವ ವಿಕಸನವನ್ನು ಸಮಾಜದ ವ್ಯಕ್ತಿಯಲ್ಲಿ ಮೂಡಿಸುವಲ್ಲಿ ಸಹಕರಿಸಬೇಕು ಎಂದು ಹೇಳಿದರು.

ಬಿಸಿಕೆಎಸ್ ವಿದ್ಯಾ ಸಂಸ್ಥೆಯ ಕಾರ್ಯದರ್ಶಿ ಕೆ.ಪಿ.ವಿಜಯಕುಮಾರ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಯಾವುದೇ ವ್ಯಕ್ತಿ ಸಮಾಜದಲ್ಲಿ ಗುರುತಿಸಿಕೊಳ್ಳಬೇಕಾದರೆ ಪ್ರತಿಯೊಬ್ಬರೂ ಉತ್ತಮ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಬೇಕು. ಇದರಿಂದಾಗಿ ಸಮಾಜದಲ್ಲಿರುವ ನ್ಯೂನತೆಗಳನ್ನು ತೊಡೆದು ಹಾಕಲು ಸಹಕಾರಿಯಾಗುವುದು ಎಂದರು.

ಇಂದಿನ ಬಹುತೇಕ ವಿದ್ಯಾರ್ಥಿಗಳಿಗೆ ಕೌಶಲ್ಯದ ಸಮಸ್ಯೆ ಕಾಡುತ್ತಿದೆ. ಇದರಿಂದ ವಿದ್ಯಾರ್ಥಿಗಳು ಓದು ಮುಗಿಸಿದ ನಂತರ ಉದ್ಯೋಗ ಕ್ಷೇತ್ರದಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ, ಹೀಗಾಗಿ ವಿದ್ಯಾರ್ಥಿಗಳು ಕಲಿಕೆಯ ಸಂದರ್ಭದಲ್ಲಿ ವ್ಯಕ್ತಿತ್ವ ಮತ್ತು ಕೌಶಲ್ಯವನ್ನು ರೂಢಿಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

> ಯಾವುದೇ ವ್ಯಕ್ತಿ ಸಮಾಜದಲ್ಲಿ ಗುರುತಿಸಿಕೊಳ್ಳಬೇಕಾದರೆ ಉತ್ತಮ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಬೇಕು. ಇದರಿಂದಾಗಿ ಸಮಾಜದಲ್ಲಿರುವ ನ್ಯೂನತೆಗಳನ್ನು ತೊಡೆದು ಹಾಕಲು ಸಹಕಾರಿಯಾಗುವುದು.
>
> **-ಕೆ.ಪಿ.ವಿಜಯಕುಮಾರ್,**
> ಕಾರ್ಯದರ್ಶಿ, ಬಿಸಿಕೆಎಸ್ ವಿದ್ಯಾಸಂಸ್ಥೆ

ಕಾಲೇಜಿನ ಪ್ರಾಂಶುಪಾಲ ಕೆ.ಯು. ಬಸಪ್ಪ ಅಧ್ಯಕ್ಷತೆ ವಹಿಸಿ ಮಾತನಾಡಿ, ವಿದ್ಯಾರ್ಥಿಗಳಲ್ಲಿ ವ್ಯಕ್ತಿತ್ವದ ಕೊರತೆ ಇತ್ತೀಚಿನ ದಿನಗಳಲ್ಲಿ ಹೆಚ್ಚಾಗುತ್ತಿದೆ. ಆದ್ದರಿಂದ ತಮ್ಮ ಸ್ನೇಹಿತರೊಂದಿಗೆ, ಮನೆಯವರೊಂದಿಗೆ ಹೊಂದಾಣಿಕೆಯನ್ನು ಬೆಳಸಿಕೊಳ್ಳುವ ಮೂಲಕ ತಮ್ಮ ವ್ಯಕ್ತಿತ್ವವನ್ನು ವಿಕಸನ ಪಡಿಸಿಕೊಂಡು ಸಮಾಜದಲ್ಲಿ ಉತ್ತಮ ಪ್ರಜೆಯಾಗಿ ಬಾಳಬೇಕು ಎಂದು ಸಲಹೆ ನೀಡಿದರು.

JSS Institute of Education * Sakaleshpura, Hassan Dist. *

PRINCIPAL
J.S.S. Institute of Education
P.B. 26, SAKALESHPUR-573 134
Hassan Dist

**Dr.C.B.Vikram**

Assistant Professor, JSS Institute of Education



## *"Elite School Gateway for success"*

As a parent, it is my immense pleasure to say some words about Elite school.Every parent dreams for the all-round development of their children. An education system with morale and values helps for the overall development of the children. Elite school, Hassan is trying its best to make the dreams of many parents come true. To become an educated is not just to become a literate. It is also about developing the qualities of a good citizen for the country. It comes by the quality of education which the children are provided with.

Elite school is one of the best educational institution in Hassan City.

I am very thankful to the teaching staff for their best efforts in educating the children. The teachers of this school are very creative, hardworking and studious in their teaching, always striving for their student betterment and academic excellence. Their teaching strategies, methods and interest will definitely benefit in the all-round development of children.

Non-teaching staff are definitely doing very good job they are taking very good care and concern of our children and make feel them homely at school. Thanks for their dedicated service mind.

JSS Institute of Education * Sakaleshpura, Hassan Dist. *

**PRINCIPAL**
**J.S.S. Institute of Education**
**P.B. 26, SAKALESHPUR-573 134**
**Hassan Dist**

# ಮಾನವೀಯ ಮೌಲ್ಯ ಬೆಳೆಸಿಕೊಳ್ಳಿ

## ಶಿಕ್ಷಕರ ದಿನಾಚರಣೆ: ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಯೋಗಾ ರಮೇಶ್

ಸಕಲೇಶಪುರ: ಸೊನ್ನೆಯ ಹಿಂದೆ ಅಂಕಿ ಬಂದಾಗ ಮಾತ್ರ ಸೊನ್ನೆಗೆ ಹೇಗೆ ಬೆಲೆ ಬರುತ್ತದೆಯೋ ಅದೇ ರೀತಿ ಪ್ರತಿಯೊಬ್ಬರ ಬದುಕಿನಲ್ಲಿಯೂ ಗುರು ಎಂಬ ಅಂಕಿ ಇದ್ದಾಗ ಮಾತ್ರ ಒಂದು ಒಳ್ಳೆಯ ವ್ಯಕ್ತಿತ್ವ ರೂಪುಗೊಳ್ಳುವುದಕ್ಕೆ ಸಾಧ್ಯವಾಗುತ್ತದೆ ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಯೋಗಾ ರಮೇಶ್ ಹೇಳಿದರು.

ಕೌಡಹಳ್ಳಿ ಜೆಎಸ್‌ಎಸ್ ಬಿಇಡಿ ಕಾಲೇಜಿನಲ್ಲಿ ಬುಧವಾರ ನಡೆದ ಶಿಕ್ಷಕರ ದಿನಾಚರಣೆಯಲ್ಲಿ ಮಾತನಾಡಿದರು.

ಜಗತ್ತಿನ ಕೋಟ್ಯಂತರ ಜೀವಿಗಳಲ್ಲಿ ಮನುಷ್ಯ ಜೀವಿಯಾಗಿ ಹುಟ್ಟಿರುವ ನಾವುಗಳು ಮನುಷ್ಯತ್ವದ ಗುಣಗಳನ್ನು ಮೈಗೂಡಿಸಿಕೊಳ್ಳಬೇಕು. ಅದರಲ್ಲಿಯೂ ಶಿಕ್ಷಕ ವೃತ್ತಿಗೆ ಹೋಗುವಂತಹ ಪ್ರಶಿಕ್ಷಣಾರ್ಥಿಗಳು ಆಸೆಗಳನ್ನು ಬದಿಗಿಟ್ಟು, ಮೌಲ್ಯಗಳಿಗೆ ಹೆಚ್ಚು ಒತ್ತುಕೊಡಬೇಕು.



ಸಕಲೇಶಪುರ ತಾಲ್ಲೂಕಿನ ಕೌಡಹಳ್ಳಿ ಜೆಎಸ್‌ಎಸ್ ಕಾಲೇಜಿನಲ್ಲಿ ಬುಧವಾರ ನಡೆದ ಶಿಕ್ಷಕರ ದಿನಾಚರಣೆಯಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಯೋಗಾ ರಮೇಶ್ ಉಪನ್ಯಾಸ ನೀಡಿದರು

ಆಗ ಮಾತ್ರ ಮೌಲ್ಯಾಧಾರಿತ ವಿದ್ಯಾರ್ಥಿಗಳನ್ನು ರೂಪುಗೊಳಿಸಲು ಸಾಧ್ಯವಾಗುತ್ತದೆ ಎಂದರು.

ಸಹ ಪ್ರಾಧ್ಯಾಪಕ ಗೊರೂರು ಶಿವೇಶ್ ಮಾತನಾಡಿ, ಶಾಲೆ- ಕಾಲೇಜುಗಳಲ್ಲಿ ಪಾಠ ಮಾಡುವವರು ಮಾತ್ರವೇ ಗುರುಗಳಾಗುವುದಿಲ್ಲ. ಬದುಕಿನ ಪಾಠ ಹೇಳಿಕೊಡುವ, ತಂದೆ, ತಾಯಿ, ಸ್ನೇಹಿತ, ಸಂಬಂಧಿ ಪ್ರತಿಯೊಬ್ಬರೂ ಗುರುಗಳಾಗುತ್ತಾರೆ. ಸನ್ನಡತೆಯ ಬದುಕಿನದಾರಿ ತೋರಿಸುವ ಪ್ರತಿಯೊಬ್ಬರಿಗೂ ಗುರು ವಿನ ಸ್ಥಾನ ನೀಡಿ ಗೌರವಿಸುವುದರಿಂದ ಸಾರ್ಥಕತೆ ಕಂಡು ಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ ಎಂದರು.


ಪ್ರಾಂಶುಪಾಲ ಡಾ. ಎನ್.ಎಸ್. ಸುರೇಶ್ ಅಧ್ಯಕ್ಷತೆ ವಹಿಸಿ ದ್ದರು. ಹಿರಿಯ ಉಪನ್ಯಾಸಕ ಬಿ. ವೀರಯ್ಯ, ಕಾಳೇಗೌಡ, ಅಬ್ದುಲ್ ಖಾದರ್, ಎಸ್.ಎಂ. ಮೀನಾಕ್ಷಿ ಖಾದರ್, ಡಾ. ನಂಜುಂಡಪ್ಪ, ಎಂ.ಕೆ. ದಿನೇಶ್ ಡಾ. ಸಿ.ಬಿ. ವಿಕ್ರಂ, ಕೆ.ಎಸ್. ನಂಜುಂಡಸ್ವಾಮಿ, ಡಾ. ಎಂ. ಪ್ರಭುಸ್ವಾಮಿ, ಆರ್. ಮಂಜುನಾಥ್ ಇದ್ದರು.

**ಮುಖ್ಯಾಂಶಗಳು**

- ಮಾನವೀಯ ಗುಣಗಳನ್ನು ಮೈಗೂಡಿಸಿಕೊಳ್ಳಿ
- ಶಾಲೆ- ಕಾಲೇಜುಗಳಲ್ಲಿ ಪಾಠ ಮಾಡುವವರು ಮಾತ್ರ ಗುರುಗಳಲ್ಲ

PRINCIPAL
.S. Institute of Education
P.B. 26, SAKALESHPUR-573 134
Hassan Dist

# ಹಾಸನ



**ಉದ್ಘಾಟನೆ...**
ಕೌಡಹಳ್ಳಿಯ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಯಲ್ಲಿ ಏರ್ಪಡಿಸಿದ್ದ ಮೈಸೂರು ವಿವಿ ಮಟ್ಟದ ಅಂತರ ಬಿ.ಇಡಿ ಕಾಲೇಜು ಗೀತಗಾಯನ ಮತ್ತು ಚರ್ಚಾ ಸ್ಪರ್ಧೆಯನ್ನು ಪುರಸಭಾ ಅಧ್ಯಕ್ಷ ಸಂತೋಷ್ ಜೈನ್ ಉದ್ಘಾಟಿಸಿದರು.

## ಗೀತಗಾಯನ ಸ್ಪರ್ಧೆಗೆ ಚಾಲನೆ



ಜೆಎಸ್‌ಎಸ್ ಕಾಲೇಜಿನಲ್ಲಿ ಆಯೋಜಿಸಿದ್ದ ಗೀತ ಗಾಯನ ಸ್ಪರ್ಧೆ ಸಮಾರಂಭದ ಉದ್ಘಾಟನಾ ದೃಶ್ಯ.

ಸಕಲೇಶಪುರ: ವಿದ್ಯಾರ್ಥಿಗಳು ಕ್ರೀಡಾ ಮನೋಭಾವನೆಯಿಂದ ಸ್ಪರ್ಧೆಗಳಲ್ಲಿ ಭಾಗ ವಹಿಸಿಬೇಕೆಂದು ಪುರಸಭೆ ಅಧ್ಯಕ್ಷ ಸಂತೋಷ್ ಜೈನ್ ಹೇಳಿದರು.

ತಾಲೂಕಿನ ಕೌಡಹಳ್ಳಿ ಗ್ರಾಮದಲ್ಲಿ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ವತಿಯಿಂದ ಏರ್ಪಡಿಸಲಾಗಿದ್ದ ಮೈಸೂರು ವಿವಿ ಮಟ್ಟದ ಅಂತರ ಬಿಇಡಿ ಕಾಲೇಜುಗಳ ಗೀತಗಾಯನ ಮತ್ತು ಚರ್ಚಾ ಸ್ಪರ್ಧೆ ಉದ್ಘಾಟಿಸಿ ಮಾತ ನಾಡಿದರು. ಪ್ರಾಂಶುಪಾಲ ಎನ್.ಎಸ್. ಸುರೇಶ್, ಪುರಸಭೆ ಉಪಾಧ್ಯಕ್ಷ ಮುಖೇಶ್ ಶೆಟ್ಟಿ, ಸಂಗೀತ ಶಿಕ್ಷಕಿ ಕೃಷ್ಣವೇಣಿ ಶಿವಶಂಕರ್, ಶಕುಂತಲಾ, ಸರ್ಕಾರಿ ಪದವಿ ಪೂರ್ವ ಕಾಲೇಜು ಉಪನ್ಯಾಸಕ ನಾಗರಾಜು, ಮುಖ್ಯ ಶಿಕ್ಷಕ ದೇವರಾಜು ಉಪಸ್ಥಿತರಿದ್ದರು.

PRINCIPAL
J.S.S. Institute of Education
P.B. 26, SAKALESHPUR-573 134
Hassan Dist

# ದುರುಳರಿಗೆ ಎನ್ ಕೌಂಟರ್ ದಂಡನೆ ಸರಿಯಾದ ಶಿಕ್ಷೆ: ವಿವಿಧ ಕ್ಷೇತ್ರಗಳ ಗಣ್ಯರ ಅಭಿಪ್ರಾಯ



ಪಶು ವೈದ್ಯೆ ಪ್ರಿಯಾಂಕಾ ರೆಡ್ಡಿಯನ್ನು ಕೊಂದ ಕೊಲೆ ಪಾತಕರಿಗೆ ಕೆಲವೇ ದಿನಗಳಲ್ಲಿ ದೇವರು ಪೊಲೀಸರ ರೂಪದಲ್ಲಿ ಶಿಕ್ಷೆ ನೀಡಿದ್ದಾನೆ. ಇಂಥ ವಿಷಯಗಳಲ್ಲಿ ಕಾನೂನು ಇನ್ನಷ್ಟು ಕಠಿಣವಾಗಬೇಕು. ಹೆಣ್ಣು ಮಕ್ಕಳ ವಿಷಯದಲ್ಲಿ ಮೃಗೀಯ ವರ್ತನೆ ತೋರುವ ಕಾಮುಕರಿಗೆ ತಕ್ಷಣವೇ ಶಿಕ್ಷೆ ನೀಡಿದರೆ ಅಪರಾಧ ಕಡಿಮೆಯಾಗಲಿದೆ.

-ಪೂರ್ಣಿಮ, ಸಾಹಿತಿ



ಅತ್ಯಾಚಾರಿಗಳನ್ನು ಎನ್ ಕೌಂಟರ್ ಮಾಡಿರುವ ಉದ್ದೇಶ ಒಳ್ಳೆಯದಾಗಿದೆ. ಈ ಹಿಂದೆ ನಡೆದ ನಿರ್ಭಯಾ ಪ್ರಕರಣದ ಆರೋಪಿಗಳಿಗೆ 7 ವರ್ಷ ಕಳೆದರೂ ಇನ್ನೂ ಶಿಕ್ಷೆಯಾಗಿಲ್ಲ. ಈ ರೀತಿಯ ಶಿಕ್ಷೆ ನೀಡುವುದರಿಂದ ಅತ್ಯಾಚಾರಿಗಳಲ್ಲಿ ಭಯ ಹುಟ್ಟುವುದಲ್ಲದೆ ಸಂತ್ರಸ್ತ ಹೆಣ್ಣು ಮಕ್ಕಳಿಗೆ ನ್ಯಾಯ ಸಿಗಲಿದೆ.

- ಡಾ. ಸಿ.ಬಿ ವಿಕ್ರಂ, ಉಪನ್ಯಾಸಕರು, ಜೆಎಸ್ಎಸ್ ವಿದ್ಯಾಸಂಸ್ಥೆ



ಅತ್ಯಾಚಾರ ಆರೋಪಿಗಳನ್ನು ಎನ್ ಕೌಂಟರ್ ಮಾಡಿರುವ ಪೊಲೀಸರ ಕಾರ್ಯ ಶ್ಲಾಘನೀಯ, ಇದರಿಂದ ಸಂತ್ರಸ್ತ ಕುಟುಂಬದವರಿಗೆ ನ್ಯಾಯ ಸಿಕ್ಕಿದೆಯಲ್ಲದೆ ದೇಶಕ್ಕೆ ಒಂದು ಉತ್ತಮ ಸಂದೇಶ ರವಾನೆಯಾಗಿದೆ. ದೇಶದಲ್ಲಿ ಅತ್ಯಾಚಾರ ಕೊಲೆ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥಗೊಳಿಸಲು ವಿಶೇಷ ನ್ಯಾಯಾಲಯ ಸ್ಥಾಪನೆ ಮಾಡುವ ಅಗತ್ಯವಿದೆ.

-ನವಿಲೆ ಅಣ್ಣಪ್ಪ, ಬಿಜೆಪಿ ಜಿಲ್ಲಾಧ್ಯಕ್ಷ.



ಅತ್ಯಾಚಾರಿಗಳಿಗೆ ನ್ಯಾಯಾಲಯದಲ್ಲಿ ಕಠಿಣ ಶಿಕ್ಷೆಯಾಗದ ಕಾರಣ ಕಾನೂನಿನ ಭಯವಿಲ್ಲದೆ, ಅತ್ಯಾಚಾರ ಪ್ರಕರಣ ಸಂಖ್ಯೆ ಹೆಚ್ಚುತ್ತಿದ್ದವು. ಇದೀಗ ಹೈದ್ರಾಬಾದ್ ಪೊಲೀಸರು ನಾಲ್ವರು ಅತ್ಯಾಚಾರಿಗಳನ್ನು ಎನ್ ಕೌಂಟರ್ ಮಾಡುವ ಮೂಲಕ ಅತ್ಯಾಚಾರಿಗಳ ಎದೆಯಲ್ಲಿ ನಡುಕ ಹುಟ್ಟಿಸಿದ್ದಾರೆ.

-ಜೆ.ಟಿ. ಮೋಹನ್, ಅಧ್ಯಕ್ಷರು ಸತ್ಯಮಂಗಲ ಗ್ರಾ.ಪಂ



ಎನ್‌ಕೌಂಟರ್ ಒಂದು ರೀತಿಯಲ್ಲಿ ದುಷ್ಟರದ್ದಲ್ಲ ದುಷ್ಟ ಚಿಂತನೆಯ ನಿಗ್ರಹಕ್ಕೆ ನಾಂದಿ ಹಾಡಿದಂತಿದೆ. ಕ್ಷಣಿಕ ಸುಖಕ್ಕಾಗಿ ಕುಟುಂಬದ ಹಿತ ಚಿಂತನೆ ಮಾಡದೆ ಕುಕೃತ್ಯ ಮಾಡುವವರಿಗೆ ಮುಂದೆ ಆಗುವ ಪರಿಣಾಮ ಸೂಚಿಸುವ ಪಾಠದಂತಿದೆ. ನ್ಯಾಯಾಂಗ ಈ ಕಾರ್ಯ ಎಚ್ಚರಿಕೆ ಗಂಟೆಯಂತಿದೆ.

-ಜೆ.ಎಸ್. ಮಂಜುನಾಥ್, ಮುಖ್ಯೋಪಧ್ಯಾಯರು ವಾಸವಿ ವಿದ್ಯಾಸಂಸ್ಥೆ.



ಎನ್ ಕೌಂಟರ್ ಮಾಡಿದ್ದು ಸರಿ! ಏಕೆಂದರೆ ತಪ್ಪು ಮಾಡಿದವರಿಗೆ ನ್ಯಾಯಾಲಯ ಶಿಕ್ಷೆ ವಿಧಿಸುವುದು ಖಚಿತ. ಆದರೆ ಇಂತಹ ಪ್ರಕರಣಗಳಲ್ಲಿ ಈ ಹಿಂದೆಕೊಟ್ಟಂಥ ತೀರ್ಪು ಇಂದಿನ ವರೆಗೆ ಇಂತಹ ಕೃತ್ಯಗಳನ್ನು ತಡೆಯುವ ಕೆಲಸ ಮಾಡಿಲ್ಲ.

ಆದ್ದರಿಂದ ಇಂತ ಕೃತ್ಯ ಮಾಡಿದ ಆ ಪಾಪಿಗಳಿಗೆ ಎನ್. ಕೌಂಟರ್ ಎಂಬ ಶಿಕ್ಷೆಯೇ ಸರಿ.

- ಅಶೋಕ್ ಗೌಡ, ಚಪ್ಪರದಹಳ್ಳಿ.

JSS Institute of Education * Sakaleshpura Hassan Dist. *

PRINCIPAL
J.S.S. Institute of Education
P.B. 26, SAKALESHPUR-573 134
Hassan Dist

## ಪಿ.ಹೆಚ್.ಡಿ. ಪದವಿ ಪ್ರದಾನ



ಸಕಲೇಶಪುರ: ಮೈಸೂರು ವಿಶ್ವ ವಿದ್ಯಾಲಯದ ಶಿಕ್ಷಣ ವಿಭಾಗದ ಹಿರಿಯ ಪ್ರಾಧ್ಯಾಪಕ ಡಾ. ಎನ್. ಎನ್. ಪ್ರಹ್ಲಾದ್ ಅವರ ಮಾರ್ಗ ದರ್ಶನದಲ್ಲಿ ಸಕಲೇಶಪುರ ತಾಲ್ಲೂಕಿನ ಜೆ.ಎಸ್. ಎಸ್. ಶಿಕ್ಷಣ ಮಹಾ ವಿದ್ಯಾಲಯದ ಪ್ರಾಧ್ಯಾಪಕ ಡಾ. ವೀರಯ್ಯ. ಬಿ. ಮಾರಲ್ ಜಡ್ಜ್‌ಮೆಂಟ್ ಅಂಡ್ ಇಟ್ಸ್ ಕಾರೀಲೇಟ್ಸ್ ಅಮಾಂಗ್ ಸೆಕಂಡರಿ ಸ್ಕೂಲ್ ಟೀಚರ್ಸ್ ಆಫ್ ಕರ್ನಾಟಕ ಎಂಬ ವಿಷಯದ ಕುರಿತು ಮಂಡಿಸಿದ ಮಹಾಪ್ರಬಂಧಕ್ಕೆ ಮೈಸೂರು ವಿಶ್ವ ವಿದ್ಯಾಲಯ ಪಿಹೆಚ್‌ಡಿ ಪದವಿ ಪ್ರದಾನ ಮಾಡಿದೆ.

## ಪಿಎಚ್.ಡಿ

ಸಕಲೇಶಪುರ: ಇಲ್ಲಿಯ ಕೌಡಹಳ್ಳಿ ಜೆಎಸ್‌ಎಸ್ ಬಿ.ಇಡಿ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಬಿ. ವೀರಯ್ಯ ಅವರಿಗೆ ಮೈಸೂರು ವಿಶ್ವ ವಿದ್ಯಾನಿಲಯ ಪಿಎಚ್‌ಡಿ ಪದವಿ ನೀಡಿ ಗೌರವಿಸಿದೆ.



ಬಿ. ವೀರಯ್ಯ

ಮೈಸೂರು ವಿಶ್ವವಿದ್ಯಾನಿಲಯ ಶಿಕ್ಷಣ ವಿಭಾಗ ಮತ್ತು ಮೈಸೂರಿನ ಪ್ರಾದೇಶಿಕ ಶಿಕ್ಷಣ ಸಂಸ್ಥೆಯ ಹಿರಿಯ ಪ್ರಾಧ್ಯಾಪಕ ಡಾ. ಎನ್.ಎನ್. ಪ್ರಹ್ಲಾದ್ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ ಸಾದರ ಪಡಿಸಿದ 'ಮಾರಲ್ ಜಡ್ಜ್‌ಮೆಟ್ ಅಂಡ್ ಇಟ್ಸ್ ಕಾರಿಲೇಟ್ಸ್ ಅಮಾಂಗ್ ಸೆಕೆಂಡರಿ ಸ್ಕೂಲ್ ಟೀಚಸ್ಸ್ ಆಫ್ ಕರ್ನಾಟಕ' ಎಂಬ ಮಹಾ ಪ್ರಬಂಧಕ್ಕೆ ಪಿಎಚ್‌ಡಿ ಗೌರವ ಸಂದಿದೆ.

## ಪಿಎಚ್‌ಡಿ ಪದವಿ



ಸಕಲೇಶಪುರ: ಪಟ್ಟಣದ ಕೌಡಹಳ್ಳಿ ಜೆಎಸ್‌ಎಸ್ ಬಿಇಡಿ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಬಿ.ವೀರಯ್ಯ ಅವರಿಗೆ ಮೈಸೂರು ವಿಶ್ವ ವಿದ್ಯಾನಿಲಯ ಪಿಎಚ್‌ಡಿ ಪದವಿ ನೀಡಿ ಗೌರವಿಸಿದೆ.

ಮೈಸೂರು ವಿಶ್ವವಿದ್ಯಾನಿಲಯ ಶಿಕ್ಷಣ ವಿಭಾಗ ಮತ್ತು ಮೈಸೂರಿನ ಪ್ರಾದೇಶಿಕ ಶಿಕ್ಷಣ ಸಂಸ್ಥೆಯ ಹಿರಿಯ ಪ್ರಾಧ್ಯಾಪಕ ಡಾ.ಎನ್.ಎನ್. ಪ್ರಹ್ಲಾದ್ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ ಸಾದರ ಪಡಿಸಿದ 'ಮಾರಲ್ ಜಡ್ಜ್‌ಮೆಂಟ್ ಅಂಡ್ ಇಟ್ಸ್ ಕಾರಿಲೇಟ್ಸ್ ಅಮಾಂಗ್ ಸೆಕೆಂಡರಿ ಸ್ಕೂಲ್ ಟೀಚರ್ಸ್ ಆಫ್ ಕರ್ನಾಟಕ' ಎಂಬ ಮಹಾ ಪ್ರಬಂಧಕ್ಕೆ ಪಿಎಚ್‌ಡಿ ಗೌರವ ಸಂದಿದೆ.

## ವೀರಯ್ಯಗೆ ಪಿಎಚ್ ಡಿ ಪದವಿ

ಸಕಲೇಶಪುರ: ಪಟ್ಟಣದ ಜೆಎಸ್‌ಎಸ್ ಬಿಎಡ್ ಕಾಲೇಜಿನ ಉಪನ್ಯಾಸಕ ಬಿ.ವೀರಯ್ಯ ಮಂಡಿಸಿದ ಪ್ರಬಂಧ ವನ್ನು ಮೈಸೂರು ವಿಶ್ವವಿದ್ಯಾ ಲಯ ಪಿಎಚ್ ಡಿ ಪದವಿಗೆ ಅಂಗೀಕರಿಸಿದೆ. ಮೈಸೂರು ಪ್ರಾದೇಶಿಕ ಶಿಕ್ಷಣ ಸಂಸ್ಥೆಯ ಪ್ರಾಧ್ಯಾಪಕ ಎನ್.ಎನ್.ಪ್ರಹ್ಲಾದ್ ಮಾರ್ಗದರ್ಶನದಲ್ಲಿ ವೀರಯ್ಯ ಅವರು ಸಂಶೋಧನೆ ನಡೆಸಿ ಮ್ಯೂರೇಲ್ ಜಡ್ಜ್‌ಮೆಂಟ್ ಆ್ಯಂಡ್ ಇಟ್ಸ್ ಕಾರಿಲೇಟ್ಸ್ ಅಮಾಂಗ್ ಸೆಕೆಂಡರಿ ಸ್ಕೂಲ್ ಟೀಚರ್ಸ್ ಆಫ್ ಕರ್ನಾಟಕ ಎಂಬ ಇಂಗ್ಲಿಷ್ ಪ್ರಬಂಧವನ್ನು ಮಂಡಿಸಿದ್ದರು.



ನಡೆಯಲಿದೆ.

## ಮಿನಿ ಸುದ್ದಿ

### ■ ಉಪನ್ಯಾಸಕ ಬಿ.ವೀರಯ್ಯಗೆ ಡಾಕ್ಟರೇಟ್

ಸಕಲೇಶಪುರ: ಪಟ್ಟಣದ ಜೆಎಸ್‌ಎಸ್ ಬಿಎಡ್ ಕಾಲೇಜಿನ ಉಪನ್ಯಾಸಕ ಬಿ. ವೀರಯ್ಯ ಅವರು ಮಂಡಿಸಿದ 'ಮಾರೇಲ್ ಜಡ್ಜಮೆಂಟ್ ಅಂಡ್ ಇಟ್ಸ್ ಕಾರಿಲೇಟ್ಸ್ ಅಮಾಂಗ್ ಸೆಕೆಂಡರಿ ಸ್ಕೂಲ್ ಟೀಚರ್ಸ್ ಆಫ್ ಕರ್ನಾಟಕ' ಎಂಬ ಇಂಗ್ಲಿಷ್ ಪ್ರಬಂಧಕ್ಕೆ ಮೈಸೂರು ವಿಶ್ವವಿದ್ಯಾನಿಲಯ ಡಾಕ್ಟರೇಟ್ ನೀಡಿದೆ. ಇವರು ಮೈಸೂರು ಪ್ರಾದೇಶಿಕ ಶಿಕ್ಷಣ ಸಂಸ್ಥೆಯ ಪ್ರಾಧ್ಯಾಪಕ ಎನ್. ಎನ್. ಪ್ರಹ್ಲಾದ್ ಅವರ ಮಾರ್ಗದರ್ಶನದಲ್ಲಿ ವೀರಯ್ಯ ಸಂಶೋಧನೆ ನಡೆಸಿದ್ದರು.



ಬಿ. ವೀರಯ್ಯ

PRINCIPAL
J.S.S. Institute of Education
P.B. 26, SAKALESHPUR-573 134
Hassan Dist

ಪ್ರಜಾವಾಣಿ 23/7/2016 ಪುಟ-2

# ಮನೆಗಷ್ಟೆ ಅಲ್ಲ; ಸಮಾಜಕ್ಕೂ ಆಸ್ತಿ ಆಗಿ

ಪ್ರಜಾವಾಣಿ ವಾರ್ತೆ



ಸಕಲೇಶಪುರದ ಜೆಎಸ್‌ಎಸ್ ಪಿಯು ಕಾಲೇಜಿನ ವಿದ್ಯಾರ್ಥಿ ಸಂಘವನ್ನು ಉಪವಿಭಾಗಾಧಿಕಾರಿ ಪಿ. ಶಿವರಾಜ್ ಉದ್ಘಾಟಿಸಿದರು

ಸಕಲೇಶಪುರ: ಪಠ್ಯ ವಿಷಯಗಳನ್ನು ಕಲಿತು, ಹೆಚ್ಚು ಅಂಕ ಗಳಿಸುವುದೇ ಶಿಕ್ಷಣ ಅಲ್ಲ, ಸಮಾಜದ ನಿತ್ಯ ಆಗು ಹೋಗುಗಳ ಬಗ್ಗೆ ತಿಳಿವಳಿಕೆ ಬೆಳೆಸಿ ಕೊಂಡು ಸಮಾಜದೊಂದಿಗೆ ಸ್ಪಂದಿಸಿ ಬದುಕುವುದನ್ನು ಕಲಿಯುವುದು ಶಿಕ್ಷಣ ಎಂದು ಉಪ ವಿಭಾಗಾಧಿಕಾರಿ ಪಿ.ಶಿವರಾಜ್ ಹೇಳಿದರು.

ಇಲ್ಲಿಯ ಜೆಎಸ್‌ಎಸ್ ಪದವಿಪೂರ್ವ ಕಾಲೇಜಿನಲ್ಲಿ ಸೋಮವಾರ 2016-17ನೇ ಸಾಲಿನ ವಿದ್ಯಾರ್ಥಿ ಸಂಘ ಉದ್ಘಾಟಿಸಿ ಅವರು ಮಾತನಾಡಿದರು.

ಉನ್ನತ ವ್ಯಾಸಂಗ ಮಾಡಿದ ನಂತರ ಬಹುತೇಕ ಜನ ತಮ್ಮ ಖಾಸಗಿ ಬದುಕಿಗೆ ಸೀಮಿತ ಆಗಿಬಿಡುತ್ತಾರೆ. ಇಂತಹ ಮನೋಭಾವ ದೂರವಾಗಿ ತನ್ನ ಮನೆಗೆ ಮಾತ್ರವಲ್ಲ ಸಮಾಜಕ್ಕೂ ಆಸ್ತಿ ಆಗಬೇಕು ಎಂದು ಕಿವಿಮಾತು ಹೇಳಿದರು.

ಮಲೆನಾಡು ವೀರಶೈವ ಸಮಾಜದ ಕಾರ್ಯದರ್ಶಿ ಧರ್ಮಪ್ಪ, ಜೆಎಸ್‌ಎಸ್ ಬಿ.ಇಡಿ ಕಾಲೇಜಿನ ಪ್ರಾಂಶುಪಾಲ ಡಾ.ಎನ್.ಎಸ್. ಸುರೇಶ್, ಪಿಯು ಕಾಲೇಜಿನ ಪ್ರಾಂಶುಪಾಲ ನಾಗೇಂದ್ರ ಪ್ರಸಾದ್, ಅಧೀಕ್ಷಕ ಮಂಜುನಾಥ್ ಹಾಗೂ ಇತರರು ಇದ್ದರು.

ಆಶಿಕಾ ಪ್ರಾರ್ಥಿಸಿದರು. ರೋಹಿಣಿ ಸ್ವಾಗತಿಸಿದರು. ಮೋದಿತಾ ನಿರೂಪಿಸಿದರು. ಜೀವಿಕಾ ವಂದಿಸಿದರು.

ಜ್ಯೋತಿಯಾತ್ರೆ: ಸುತ್ತೂರು ಜಗದ್ಗುರು ಡಾ.ಶಿವರಾತ್ರಿ ರಾಜೇಂದ್ರ ಸ್ವಾಮಿಗಳವರ ಜನ್ಮ ಶತಮಾನೋತ್ಸವದ ಅಂಗವಾಗಿ ಆರಂಭವಾಗಿರುವ ಶಿವರಾತ್ರಿ ರಾಜೇಂದ್ರ ಜ್ಯೋತಿಯಾತ್ರೆ ಆ. 3ರಂದು ಪಟ್ಟಣಕ್ಕೆ ಆಗಮಿಸಲಿದೆ ಇಲ್ಲಿಯ ಜೆಎಸ್‌ಎಸ್ ಬಿ.ಇಡಿ ಕಾಲೇಜಿನ ಅಧೀಕ್ಷಕ ಮಂಜುನಾಥ್ ತಿಳಿಸಿದ್ದಾರೆ.

ಜ್ಯೋತಿ ಯಾತ್ರೆಯನ್ನು ಇಲ್ಲಿಯ ಹೇಮಾವತಿ ಸೇತುವೆ ಬಳಿ ಪೂರ್ಣ ಕುಂಭ, ವಾದ್ಯಮೇಳ, ವಿವಿಧ ಕಲಾ ತಂಡಗಳೊಂದಿಗೆ ರಾಜಬೀದಿ ಯಲ್ಲಿ ಭವ್ಯ ಮೆರವಣಿಗೆ ನಡೆಯಲಿದೆ.

PRINCIPAL
J.S.S. Institute of Education
P.B. 26, SAKALESHPUR-573 134
Hassan Dist

ವಿಜಯ ಕರ್ನಾಟಕ VK

ಹುಬ್ಬಳ್ಳಿ ...ಯು ಪರೀಕ್ಷೆಯಲ್ಲಿ ಕಪ್ಪು ಪಟ್ಟಿ ಧರಿಸಿ
ಪ್ರತಿಭಟನೆ ನಡೆಸಲು ರಾಜ್ಯದ ಪದವಿ ಪೂರ್ವ ಕಾಲೇಜು
ಉಪನ್ಯಾಸಕರ ನಿರ್ಧಾರ

ಉಮಾಭಾರತಿ ಹೇಳಿಕೆ ಖಂಡಿಸಿ
ನವಲಗುಂದ ಬಂದ್: ಉತ್ತಮ ಪ್ರತಿಕ್ರಿಯೆ

ಬೆಂಗಳೂರು ದಿನಾಂಕ 02-02-2016 P/N 2

# 5 ರಿಂದ ಸುತ್ತೂರು ಜಾತ್ರೆ

ವಿಕ ಚಿತ್ರಲೋಕ



ಸುತ್ತೂರು ಜಾತ್ರೆಗೆ ಸಿದ್ಧಗೊಳ್ಳುತ್ತಿರುವ ವಸ್ತುಪ್ರದರ್ಶನದ ಮಳಿಗೆಗಳು.

■ **ವಿಕ ಸುದ್ದಿಲೋಕ,** ನಂಜನಗೂಡು



ಹಳೇ ಮೈಸೂರು ಭಾಗದ ಪ್ರಸಿದ್ಧ ಸುತ್ತೂರು ಜಾತ್ರಾ ಮಹೋ ತ್ಸವ ಕಾರ್ಯಕ್ರಮ ಫೆ. 5ರಿಂದ 10ರವರೆಗೆ ಆರು ದಿನಗಳ ಕಾಲ ನಡೆಯಲಿದ್ದು, ರಾಜ್ಯ ಹಾಗೂ ಹೊರ ರಾಜ್ಯಗಳಿಂದ ಅಂದಾಜು 20 ಲಕ್ಷ ಜನರು ಭಾಗವಹಿಸುವ ನಿರೀಕ್ಷೆ ಇದೆ ಎಂದು ಜಾತ್ರಾ ಮಹೋತ್ಸವದ ಸಂಘಟಕರು ತಿಳಿಸಿದರು.

ಸೋಮವಾರ ಸುತ್ತೂರಿನಲ್ಲಿ ಜಾತ್ರಾ ಮಹೋತ್ಸವದ ಸಿದ್ಧತೆಗಳ ಕುರಿತು ಸುದ್ದಿಗೋಷ್ಠಿ ನಡೆಸಿ ಮಾಹಿತಿ ನೀಡಿದ ಜಾತ್ರಾ ಮಹೋತ್ಸವ ಸಮಿತಿಯ ಅಧ್ಯಕ್ಷ ಹಾಗೂ ಮಾಜಿ ಶಾಸಕ ಸಿ.ಎಚ್.ಗಂಗಾಧರನ್ ಈ ಬಾರಿಯ ಜಾತ್ರಾ ಮಹೋತ್ಸವದಲ್ಲಿ ಕಳೆದ ಬಾರಿಗಿಂತ ಹೆಚ್ಚಿನ ಸಂಖ್ಯೆಯ ಜನರು ಭಾಗವಹಿಸುವ ನಿರೀಕ್ಷೆ ಇದೆ. ಜಾತ್ರೆಯ ಪ್ರಯುಕ್ತ ಜರುಗುವ ವಸ್ತು ಪ್ರದರ್ಶನ, ಕೃಷಿ ಮೇಳಗಳು ಹಿಂದೆಂದಿಗಿಂತ ಹೆಚ್ಚು ಆಕರ್ಷಣೀಯವಾಗಿವೆ. ಜಾತ್ರೆಯ ಭಜನಾ ಮೇಳದಲ್ಲಿ ಮಹಿಳೆಯರು, ಪುರುಷರು ಹಾಗೂ ಮಕ್ಕಳಿಗಾಗಿ ಪ್ರತ್ಯೇಕ ಸ್ಪರ್ಧೆಗಳನ್ನು ನಡೆಸಲಾಗುತ್ತಿದ್ದು, ರಾಜ್ಯದ ನಾನಾ ಭಾಗಗಳಿಂದ ಕಲಾವಿದರು ಆಗಮಿಸಲಿದ್ದಾರೆ. ವಿಶೇಷವಾಗಿ ಉತ್ತರ ಕರ್ನಾಟಕ ಭಾಗದಿಂದ ನೂರಾರು ಸಂಖ್ಯೆಯ ಭಜನಾ ತಂಡಗಳು ಆಗಮಿಸಲಿವೆ. ಜತೆಗೆ ಪ್ರಮುಖ ಆಕರ್ಷಣೆಯಾದ ದನಗಳ ಜಾತ್ರೆ ಹಾಗೂ ದೇಸೀ ಕ್ರೀಡಾ ಸ್ಪರ್ಧೆಗಳು ಜನರ ಮನ ಗೆಲ್ಲುವ ನಿರೀಕ್ಷೆ ಇದೆ ಎಂದು ತಿಳಿಸಿದರು.

**ಊಟ, ವಸತಿ:** ಸಂಚಾಲಕ ಪ್ರೊ.ಸುಬ್ಬಪ್ಪ ಮಾತನಾಡಿ, ಕಳೆದ ಬಾರಿ 13 ಲಕ್ಷ ಜನರು ಜಾತ್ರೆಗೆ ಭೇಟಿ ನೀಡಿದ್ದರು. ಈ ಬಾರಿ 20 ಲಕ್ಷ ಮಂದಿ ಭಾಗವಹಿಸುವ ನಿರೀಕ್ಷೆ ಇದೆ. ಜಾತ್ರೆಯ 6 ದಿನಗಳಲ್ಲಿ ದಿನದ ಮೂರೂ ಹೊತ್ತು ಪ್ರಸಾದ ವಿತರಿಸಲಾಗುತ್ತಿದ್ದು, ಇದಕ್ಕಾಗಿ 5 ಕಡೆ ದಾಸೋಹ ವಿತರಣಾ ಕೇಂದ್ರಗಳನ್ನು ತೆರೆಯಲಾಗಿದೆ. ಇನ್ನು ಗದ್ದುಗೆ ಸಮೀಪದಲ್ಲಿರುವ ಮಹಾ ದಾಸೋಹ ಕೇಂದ್ರದಲ್ಲಿ ಮಹಿಳೆಯರು ಹಾಗೂ ಪುರುಷರಿಗೆ ಪ್ರತ್ಯೇಕವಾಗಿ ಪ್ರಸಾದ ವಿತರಣೆ ಕೌಂಟರ್‌ಗಳನ್ನು ತೆರೆಯಲಾಗಿದೆ ಹಾಗೂ ಜಾತ್ರೆಯಲ್ಲಿ ಭಾಗವಹಿಸುವ ಸಾಂಸ್ಕೃತಿಕ ಹಾಗೂ ಜಾನಪದ ಕಲಾ ತಂಡಗಳ ಕಲಾವಿದರು ಮತ್ತು ಸ್ವಯಂ ಸೇವಕರಿಗೆ ಉಳಿದುಕೊಳ್ಳಲು ತಾತ್ಕಾಲಿಕ ಕುಟೀರಗಳನ್ನು ಜಾತ್ರೆ ಆವರಣದಲ್ಲಿ ತೆರೆಯಲಾಗಿದ್ದು ಸುಮಾರು 20 ಸಾವಿರ ಮಂದಿಗೆ ವಸತಿ ಸೌಲಭ್ಯ ಕಲ್ಪಿಸಲಾಗುತ್ತದೆ ಎಂದರು.

## ಚಿತ್ರಸಂತೆ ಹೊಸ ಆಕರ್ಷಣೆ

ಜೆಎಸ್‌ಎಸ್ ಮಹಾ ವಿದ್ಯಾಪೀಠದ ಶಿವಕುಮಾರಸ್ವಾಮಿ ಮಾತನಾಡಿ, ಇದೇ ಮೊದಲ ಬಾರಿಗೆ ಚಿತ್ರಸಂತೆ ಆಯೋಜಿಸಿದ್ದು, ಫೆ. 7ರಂದು ನಡೆಯಲಿದೆ. ಇದರಲ್ಲಿ ಸುಮಾರು 200 ಕ್ಕೂ ಹೆಚ್ಚು ಕಲಾವಿದರು ಭಾಗವಹಿಸುವ ನಿರೀಕ್ಷೆ ಇದೆ. ಜತೆಗೆ ಮೈಸೂರಿನ ಪತಂಜಲಿ ಯೋಗ ಕೇಂದ್ರದ ಸಾಧಕರ ಮಾರ್ಗದರ್ಶನದೊಂದಿಗೆ ಸಾಮೂಹಿಕ ಸೂರ್ಯ ನಮಸ್ಕಾರವನ್ನು ಅಂದು ಬೆಳಗ್ಗೆ 6 ಕ್ಕೆ ಆಯೋಜಿಸಲಾಗಿದೆ. ಸುಮಾರು 3 ಸಾವಿರಕ್ಕೂ ಹೆಚ್ಚು ಮಂದಿ ಭಾಗವಹಿಸುವ ನಿರೀಕ್ಷೆ ಇದೆ ಎಂದು ತಿಳಿಸಿದರು.

**ಸಾಮೂಹಿಕ ವಿವಾಹ :** ಜಾತ್ರೆ ಅಂಗವಾಗಿ ಜರುಗುವ ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಈಗಾಗಲೇ 150 ಕ್ಕೂ ಹೆಚ್ಚು ಜೋಡಿಗಳು ನೋಂದಾಯಿಸಿಕೊಂಡಿದ್ದು ಎಲ್ಲಾ ಧರ್ಮದ ಜನರೂ ಮುಕ್ತವಾಗಿ ಭಾಗವಹಿಸಲು ಅವಕಾಶವಿದ್ದು ಅವರಿಗೆ ವಧುವಿಗೆ ಸೀರೆ, ಮಾಂಗಲ್ಯ, ಕಾಲುಂಗುರ ಹಾಗೂ ವರನಿಗೆ ಪಂಚೆ, ಶಲ್ಯ ಹಾಗೂ ಷರ್ಟ್ ನೀಡಲಾಗುವುದು ಎಂದು ತಿಳಿಸಿದರು.

ಸುತ್ತೂರು ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಆಡಳಿತಾಧಿಕಾರಿ ಎಸ್.ಪಿ.ಉದಯಶಂಕರ್ ಮಾತನಾಡಿ, ತಂತ್ರಜ್ಞಾನದ ಕುರಿತು ಮಾಹಿತಿ ನೀಡುವ ಜತೆಗೆ ಸುತ್ತೂರು ಮಠ ಹಾಗೂ ಶಿಕ್ಷಣ ಸಂಸ್ಥೆಗಳ ಮಾಹಿತಿಯನ್ನು ನೀಡುವ ಡಿಜಿಟಲ್ ಪ್ರದರ್ಶನದ ವ್ಯವಸ್ಥೆಯನ್ನು ಜಾತ್ರೆಯಲ್ಲಿ ಮಾಡಲಾಗುತ್ತಿದೆ. ಇನ್ನು ಜಾತ್ರೆಗೆ ರಾಜ್ಯದ ನಾನಾ ಭಾಗಗಳಿಂದ ಜನರು ಆಗಮಿಸಿ ತೆರಳಲು ಅನುಕೂಲವಾಗುವಂತೆ ಬೆಂಗಳೂರು, ಮೈಸೂರು, ಮಂಡ್ಯ, ಚಾಮರಾಜನಗರ ಸೇರಿದಂತೆ ವಿವಿಧ ಜಿಲ್ಲಾ ಕೇಂದ್ರಗಳಿಂದ ಕೆಎಸ್‌ಆರ್‌ಟಿಸಿ ಬಸ್ ಸೌಕರ್ಯ ಕಲ್ಪಿಸಲಾಗುತ್ತಿದೆ ಎಂದು ತಿಳಿಸಿದರು.

ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಸಂಯೋಜಕ ಜಿ.ಎಲ್. ತ್ರಿಪುರಾಂತಕ ಹಾಜರಿದ್ದರು.

PRINCIPAL
J.S.S. Institute of Education
P.B. 26, SAKALESHPUR-573 134
Hassan Dist

## ಮಿನಿ ಸುದ್ದಿ

### ■ ಶಿಕ್ಷಕರ ಸೌಲಭ್ಯ: ರಾಜ್ಯದ ಕಾಯ್ದೆಯೇ ರದ್ದು

1ನೇ ಪುಟದಿಂದ ▶ 'ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಬೋಧಕ ಸಿಬ್ಬಂದಿಗೆ, ಅವರು ನೇಮಕಗೊಂಡ ದಿನದಿಂದ ಅನ್ವಯವಾಗುವಂತೆ ವೇತನ, ಪಿಂಚಣಿ, ವಾರ್ಷಿಕ ವೇತನ ಹೆಚ್ಚಳ ಮತ್ತು ಹಿಂಬಾಕಿ ಸೇರಿದಂತೆ ಎಲ್ಲಾ ಸೇವಾ ಸವಲತ್ತುಗಳನ್ನು ನೀಡುವಂತೆ ರಾಜ್ಯ ಹೈಕೋರ್ಟ್ ಮತ್ತು ಸುಪ್ರೀಂಕೋರ್ಟ್ ಆದೇಶಿಸಿದೆ. ಹೀಗಿದ್ದರೂ ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳ ಬೋಧಕ ಸಿಬ್ಬಂದಿ ನೇಮಕಗೊಂಡ ದಿನದಿಂದ ಬದಲಾಗಿ ಶಿಕ್ಷಣ ಸಂಸ್ಥೆಗೆ ಅನುದಾನ ಮಂಜೂರಾತಿ ದೊರೆತ ದಿನದಿಂದ ಅನ್ವಯವಾಗುವಂತೆ ಸೇವಾ ಸವಲತ್ತು ನೀಡಲು ಈ ಕಾಯ್ದೆ ರೂಪಿಸಲಾಗಿದೆ' ಎಂದು ಆದೇಶದಲ್ಲಿ ಪೀಠ ಅಭಿಪ್ರಾಯಪಟ್ಟಿದೆ. ಅಲ್ಲದೆ, ಕೋರ್ಟ್ ಆದೇಶ ಉಲ್ಲಂಘಿಸಿ ಸರ್ಕಾರ ರೂಪಿಸಿದ ಕಾಯ್ದೆಯನ್ನು ರದ್ದುಗೊಳಿಸಿ ಆದೇಶಿಸಿದೆ.

PRINCIPAL
J.S.S. Institute of Education
P.B. 26, SAKALESHPUR-573 134
Hassan Dist

# ಜಾತ್ರೆಯಲ್ಲಿ ಹಲವು ಹೊಸತನ...

ಪ್ರಜಾವಾಣಿ ವಾ...

ಮೈಸೂರು: ಕಪಿಲಾ ನದಿ ತಟದಲ್ಲಿರುವ ಸುತ್ತೂರಿನಲ್ಲಿ ನಡೆಯುವ ಜಾತ್ರಾ ಸಂಭ್ರಮ ಹಲವು ವೈಶಿಷ್ಟ್ಯಗಳನ್ನು ಈ ಬಾರಿ ಅಳವಡಿಸಿಕೊಂಡಿದೆ. ಎಲ್ಲ ವಯೋಮಾನದವರಿಗೂ ಮನರಂಜನೆ ಜತೆಗೆ ಜ್ಞಾನಾರ್ಜನೆಗೆ ಅವಕಾಶ ಕಲ್ಪಿಸುವ ಕಾರ್ಯಕ್ರಮ ವೈವಿಧ್ಯವಿದೆ.

## ವಸ್ತುಪ್ರದರ್ಶನ

ಶೈಕ್ಷಣಿಕ ಮತ್ತು ವಿಜ್ಞಾನ ವಸ್ತು ಪ್ರದರ್ಶನದ ಭಾಗವಾಗಿ ನಡೆಯುವ ಈ ಕಾರ್ಯಕ್ರಮದಲ್ಲಿ ಪ್ರೌಢಶಾಲಾ ವಿದ್ಯಾರ್ಥಿಗಳು ತಯಾರಿಸಿರುವ 200 ಉತ್ತಮ ಮಾದರಿಗಳನ್ನು ಅನಾವರಣ ಗೊಳಿಸಲಾಗುವುದು. ಕರಕುಶಲ, ಕೈಮಗ್ಗ, ಗೃಹೋಪಯೋಗಿ ವಸ್ತುಗಳ ಪ್ರದರ್ಶನ, ಮಾರಾಟಕ್ಕೂ ಅವಕಾಶ ಇದೆ. ಸರ್ಕಾರದ ಇಲಾಖೆಗಳು, ಕೈಗಾರಿಕೆಗಳು ಹಾಗೂ ಮಹಿಳಾ ಉದ್ಯಮಿಗಳು ವಸ್ತುಪ್ರದರ್ಶನದಲ್ಲಿ ಪಾಲ್ಗೊಳ್ಳುವರು ಎಂದರು.


## ಕೃಷಿ ಮೇಳ

ಕೃಷಿಗೆ ಸಂಬಂಧಿಸಿದ ತಂತ್ರಜ್ಞಾನದ ಮಾಹಿತಿ ನೀಡುವ ಮತ್ತು ಅವರಲ್ಲಿ ಸ್ಥೈರ್ಯ ತುಂಬುವ ಉದ್ದೇಶದಿಂದ ನಡೆಯುವ ಕೃಷಿಮೇಳದಲ್ಲಿ ಸಮಗ್ರ ಬೆಳೆ ನಿರ್ವಹಣೆ, ಪಶುಸಂಗೋಪಣೆಯ ಪ್ರಾತ್ಯಕ್ಷಿಕೆಯೂ ನಡೆಯಲಿದೆ. ನೂತನವಾಗಿ ಕೀನೋವಾ ಎಂಬ ಏಕದಳ ಧಾನ್ಯ ಬೆಳೆಯ ಪ್ರಾತ್ಯಕ್ಷಿಕೆಯೂ ನಡೆಯಲಿದೆ. ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದಿಂದ ವಿವಿಧ ಜಾತಿಯ ಗಿಡಮೂಲಿಕೆಗಳನ್ನೂ ವಿತರಿಸಲಾಗುತ್ತದೆ ಎಂದು ಅವರು ಮಾಹಿತಿ ನೀಡಿದರು.

ದನಗಳ ಜಾತ್ರೆಯಲ್ಲಿ ಉತ್ತಮ ರಾಸುಗಳಿಗೆ ಬಹುಮಾನ ನೀಡಲಾಗುವುದು. ದೇಸಿ ಹಸುಗಳು, ಎಮ್ಮೆ, ಬಂಡೂರು ಕುರಿಗಳ ತಳಿಗಳ ಪ್ರದರ್ಶನ, ಸ್ಪರ್ಧೆಯೂ ನಡೆಯಲಿದೆ ಎಂದು ಅವರು ವಿವರಿಸಿದರು.

## ಚಿತ್ರಸಂತೆ

ರಾಜ್ಯದ ಎಲ್ಲ ಕಲಾವಿದರನ್ನು



ಶಿವರಾತ್ರೀಶ್ವರ ಶಿವಯೋಗಿಗಳು

ಒಂದೆಡೆ ಸೇರಿಸಿ ಅವರ ಕಲಾಕೃತಿಗಳ ಪ್ರದರ್ಶನ ಮತ್ತು ಮಾರಾಟ ಮಾಡುವ ಚಿತ್ರಸಂತೆ ಕಾರ್ಯಕ್ರಮವನ್ನು ಈ ಬಾರಿ ಹಮ್ಮಿಕೊಳ್ಳಲಾಗಿದೆ. ಫೆ. 7ರಂದು ನಡೆಯುವ ಚಿತ್ರಸಂತೆಯಲ್ಲಿ ರಾಜ್ಯದ ಸುಮಾರು 200 ಕಲಾವಿದರು ಭಾಗವಹಿಸುವರು. ಪತಂಜಲಿ ಯೋಗಶಿಕ್ಷಣ ಸಂಸ್ಥೆಯಿಂದ ಅಂದು 6.30ಕ್ಕೆ ಸೂರ್ಯನಮಸ್ಕಾರ ಕಾರ್ಯಕ್ರಮ ನಡೆಯಲಿದೆ ಎಂದು ಜೆಎಸ್‌ಎಸ್ ವಿದ್ಯಾಪೀಠದ ಗೌರವ ಕಾರ್ಯದರ್ಶಿ ಎಸ್. ಶಿವಕುಮಾರ್ ತಿಳಿಸಿದರು.

## ಚಿತ್ರ ರಚನಾ ಸ್ಪರ್ಧೆ

ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ವಿದ್ಯಾರ್ಥಿಗಳಿಗಾಗಿ ಸ್ಥಳದಲ್ಲೇ ಚಿತ್ರ ಬರೆಯುವ ರಾಜ್ಯಮಟ್ಟದ ಸ್ಪರ್ಧೆ ಫೆ. 7ರಂದು ನಡೆಯಲಿದೆ. ಫೆ. 9ರಂದು ಕುಸ್ತಿ ಪಂದ್ಯಾವಳಿ, ಜೆಎಸ್‌ಎಸ್ ಸಂಸ್ಥೆಯ ಬಾಲಕ, ಬಾಲಕಿಯರಿಗಾಗಿ ವಿವಿಧ ದೇಸಿ ಆಟಗಳ ಸ್ಪರ್ಧೆ ಹಮ್ಮಿಕೊಳ್ಳಲಾಗಿದೆ. ಗ್ರಾಮೀಣ ಭಾಗದ ಮಹಿಳೆಯರಿಗೆ, ಪುರುಷರಿಗಾಗಿ ದೇಸಿ ಆಟಗಳ ಸ್ಪರ್ಧೆಯನ್ನೂ ಏರ್ಪಡಿಸಲಾಗಿದೆ.

ಜೆಎಸ್‌ಎಸ್ ಅಂತರಸಂಸ್ಥೆಗಳ ಸಾಂಸ್ಕೃತಿಕ ಮೇಳದಲ್ಲಿ ಸುಮಾರು 2 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸುವರು. ಗ್ರಾಮಾಂತರ ಪ್ರದೇಶದ ಹಾಗೂ ನಗರಗಳ ವೃತ್ತಿ ರಂಗಭೂಮಿ ಹಾಗೂ ಹವ್ಯಾಸಿ ಕಲಾತಂಡಗಳಿಗೆ ನಾಟಕ ಪ್ರದರ್ಶಿಸಲು ಅವಕಾಶ ಕಲ್ಪಿಸಲಾಗಿದೆ. ಪ್ರಸಿದ್ಧ ಯಕ್ಷಗಾನ ತಂಡಗಳಿಂದ ಭಸ್ಮಾಸುರ ಮೋಹಿನಿ, ದಕ್ಷಯಜ್ಞ, ಭಕ್ತ ಮಾರ್ಕಾಂಡೇಯ ಯಕ್ಷಗಾನ ನಡೆಯಲಿದೆ. ಜತೆಗೆ ಕರ್ನಾಟಕ, ಕೇರಳ, ಮಹಾರಾಷ್ಟ್ರ ಮತ್ತು ತಮಿಳುನಾಡಿನ ತಂಡಗಳಿಂದ ಕಲಾಪ್ರದರ್ಶನಗಳು ಇವೆ. ಶಾಶ್ವತ ವಸತಿ ವ್ಯವಸ್ಥೆ ಜತೆಗೆ ಸುಮಾರು 2 ಸಾವಿರ ಮಂದಿಗೆ ಕುಟೀರಗಳಲ್ಲಿ ತಾತ್ಕಾಲಿಕ ವಸತಿ ವ್ಯವಸ್ಥೆ ಕಲ್ಪಿಸಲಾಗುತ್ತದೆ ಎಂದು ಮಾಹಿತಿ ನೀಡಿದರು.

## ಸಾರಿಗೆ ವ್ಯವಸ್ಥೆ

ಜಾತ್ರಾ ಮಹೋತ್ಸವದಲ್ಲಿ ಭಾಗವಹಿಸುವ ಭಕ್ತಾದಿಗಳಿಗೆ ಹಾಗೂ ಸಾರ್ವಜನಿಕರ ಅನುಕೂಲಕ್ಕಾಗಿ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್‌ಗಳು, ಖಾಸಗಿ ಬಸ್‌ಗಳೂ ಸಂಚರಿಸಲಿವೆ. ಮೈಸೂರು ನಗರ ಸಾರಿಗೆ ವಿಭಾಗದ ಬನ್ನಿಮಂಟಪ, ಕುವೆಂಪುನಗರ, ಸಾತಗಳ್ಳಿ, ವಿಜಯ ನಗರ ಘಟಕದಿಂದ ಬಸ್‌ಗಳು ಕಾರ್ಯಾಚರಿಸಲಿವೆ. ಜತೆಗೆ ಮೈಸೂರು, ತಿ. ನರಸೀಪುರ, ಕೊಳ್ಳೇಗಾಲ, ಹುಣಸೂರು, ಕೆ.ಆರ್ ನಗರ, ಎಚ್.ಡಿ ಕೋಟೆ, ಗುಂಡ್ಲುಪೇಟೆ, ಪಾಂಡವಪುರ ಕಡೆಯಿಂದ ಭಕ್ತರು ಹೆಚ್ಚು ಬರಲಿದ್ದು, ಆ ಪ್ರದೇಶಗಳಿಂದ ಬಸ್‌ಗಳು ಕಾರ್ಯಾಚರಣೆ ಮಾಡಲಿವೆ ಎಂದರು.

## ಸಾಮೂಹಿಕ ವಿವಾಹ

ಫೆ. 6ರಂದು ಬೆಳಿಗ್ಗೆ 10.30ಕ್ಕೆ ನಡೆಯುವ ಉಚಿತ ಸರಳ ವಿವಾಹಕ್ಕೆ ಈಗಾಗಲೇ 150 ಜೋಡಿಗಳು ಹೆಸರು ನೋಂದಾಯಿಸಿದ್ದಾರೆ. ಇದರಲ್ಲಿ ಎಲ್ಲ ಧರ್ಮದವರಿಗೂ ಮುಕ್ತ ಅವಕಾಶ ಕಲ್ಪಿಸಲಾಗಿದೆ. ಮುರುಘರಾಜೇಂದ್ರ ಸ್ವಾಮೀಜಿ, ಬಸ್ತಿಮಠದ ಲಕ್ಷ್ಮೀಸೇನ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾ ಸ್ವಾಮೀಜಿ ಭಾಗವಹಿಸುವರು. ಕೇಂದ್ರ ಸಚಿವ ಡಿ.ವಿ. ಸದಾನಂದ ಗೌಡ ಕಾರ್ಯಕ್ರಮ ಉದ್ಘಾಟಿಸಲಿದ್ದು, ತೋಟಗಾರಿಕೆ ಸಚಿವ ಶಾಮನೂರು ಶಿವಶಂಕರಪ್ಪ ಅಧ್ಯಕ್ಷತೆ ವಹಿಸುವರು ಎಂದರು.

ಜೆಎಸ್‌ಎಸ್ ವಿದ್ಯಾಪೀಠದ ಆಡಳಿತಾಧಿಕಾರಿ ಎಸ್. ಉದಯಶಂಕರ್ ಹಾಜರಿದ್ದರು.

ಪ್ರಜಾವಾಣಿ ಮಂಗಳವಾರ
ದಿನಾಂಕ 02-02-2016 P/no 3B

PRINCIPAL
J.S.S. Institute of Education
P.B. 26, SAKALESHPUR-573 134
Hassan Dist

1/10 ಕನ್ನಡ ಪ್ರಭ ದಿನಾಂಕ 28-12-2015

# ಸುತ್ತೂರು ಜಾತ್ರಾ ಮಹೋತ್ಸವ ರಥಕ್ಕೆ ನಗರದಲ್ಲಿ ಅದ್ದೂರಿ ಸ್ವಾಗತ

## ಸುತ್ತೂರು ಶ್ರೀಕ್ಷೇತ್ರದಲ್ಲಿ ಫೆಬ್ರವರಿ 5 ರಿಂದ 10ರ ವರೆಗೆ ನಡೆಯುವ ಜಾತ್ರೆ

• ಕನ್ನಡಪ್ರಭ ವಾರ್ತೆ ಹಾಸನ

ಸುತ್ತೂರು ಶ್ರೀಕ್ಷೇತ್ರದಲ್ಲಿ ಫೆಬ್ರವರಿ 5 ರಿಂದ 10ರ ವರೆಗೂ ನಡೆಯಲಿರುವ ಜಾತ್ರಾ ಮಹೋತ್ಸವದ ಅಂಗವಾಗಿ ಶನಿವಾರ ಸಂಜೆ ನಗರಕ್ಕೆ ಆಗಮಿಸಿದ ರಥವನ್ನು ಸ್ವಾಗತಿಸಲಾಯಿತು.

ಶ್ರೀ ವೀರಸಿಂಹಾಸನ ಮಹಾಸಂಸ್ಥಾಪನ ಸಂಸ್ಥಾಪನಾಚಾರ್ಯ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವ 6 ದಿವಸ ನಡೆಯಲಿದೆ. ಧಾರ್ಮಿಕ ಕಾರ್ಯಕ್ರಮಗಳಾದ ಫೆಬ್ರವರಿ 5 ರಂದು ಉತ್ಸವಮೂರ್ತಿಯನ್ನು ಶ್ರೀ ಮಠದಿಂದ ಕರ್ತೃಗದ್ದುಗೆಗೆ ಬಿಜಯಂಗೈಸಲಾಗುವುದು.

**ಲಕ್ಷದೀಪೋತ್ಸವ:** 6ರ ಶನಿವಾರ ಹಾಲರವಿ ಉತ್ಸವ, 7 ರಂದು ಭಾನುವಾರ ರಥೋತ್ಸವ ಮತ್ತು ಲಕ್ಷದೀಪೋತ್ಸವ, 8ರ ಸೋಮವಾರ ಶ್ರೀ ಮಹದೇಶ್ವರ ಕೆಂಡೋತ್ಸವ, 9ರ ಮಂಗಳವಾರ ರಂದು ಶ್ರೀ ವೀರಭದ್ರೇಶ್ವರ ಉತ್ಸವ ಹಾಗೂ ಕೆಂಡೋತ್ಸವ ಹಾಗೂ ತೆಪ್ಪೋತ್ಸವ 10ರ ಬುಧುವಾರ ರಂದು ಅನ್ನಬ್ರಹ್ಮೋತ್ಸವ ನಡೆಯಲಿದೆ.

ಈ ವೇಳೆ ನಾನಾ ಸ್ಪರ್ಧೆಗಳನ್ನು ಕೂಡ ಏರ್ಪಡಿಸಲಾಗಿದೆ. ಗ್ರಾಮೀಣ ಕಲೆಗಳಾದ, ಸೋಬಾನೆಪದ, ರಂಗೋಲಿ ಸ್ಪರ್ದೆ, ಮಕ್ಕಳಿಗೆ ಗಾಳಿಪಟ ಸ್ಪರ್ದೆ, ಕುಸ್ತಿ ಪಂದ್ಯಾವಳಿ, ಸ್ಥಳದಲ್ಲಿಯೇ ಚಿತ್ರ ಬಿಡಿಸುವುದು, ಮುಖ್ಯವಾಗಿ ರಾಜ್ಯಮಟ್ಟದ ಭಜನಾ ಸ್ಪರ್ದೆ ಹಮ್ಮಿಕೊಳ್ಳಲಾಗಿದೆ.

**ವಿವಿಧ ಕಾರ್ಯಕ್ರಮ:** ಪ್ರತಿ ವರ್ಷದಂತೆ ದನಗಳ ಜಾತ್ರೆ ಏರ್ಪಡಿಸಲಾಗಿದೆ. ದೇಸಿ ಆಟಗಳನ್ನು ಮಕ್ಕಳಿಗೆ ಹಮ್ಮಿಕೊಳ್ಳಲಾಗಿದೆ. ಸಂಸ್ಕೃತಿಕ ಮೇಳಗಳು, ವಸ್ತುಪ್ರದರ್ಶನ, ಸಾಮೂಹಿಕ ವಿವಾಹ, ಕೃಷಿ ಮೇಳ ಸೇರಿದಂತೆ ಇನ್ನು ವೈವಿಧ್ಯಮಯವಾದ ಕಾರ್ಯಕ್ರಮ ನಡೆಸಲಾಗುತ್ತದೆ.

ಸುತ್ತೂರು ಕ್ಷೇತ್ರದ ಜಾತ್ರಾ ಮಹೋತ್ಸವ ರಥ ನಗರಕ್ಕೆ ಬಂದ ವೇಳೆ ಶ್ರೀ ವೀರಶೈವ ಸಮಿತಿಯ ಉಪಾಧ್ಯಕ್ಷ ವೈ.ಎಸ್. ವೀರಭದ್ರಪ್ಪ, ಕಾರ್ಯದರ್ಶಿ ಬಿ.ಎಂ. ಭುವನಾಕ್ಷ, ನಿರ್ದೇಶಕರು ಅನ್ನಪೂರ್ಣಮ್ಮ, ಎಸ್.ಎನ್. ಪಾಲಾಕ್ಷ, ಅಖಿಲ ಭಾರತ ವೀರಶೈವ ಮಹಾ ಸಭಾದ ಜಿಲ್ಲಾ ಕಾರ್ಯದರ್ಶಿ ಕಟ್ಟಾಯಶಿವಕುಮಾರ್, ರಥೋತ್ಸವ ಸಂಚಾಲಕ ಪಂಚಾಕ್ಷರಿ, ಪುಷ್ಪಗಿರಿ ಆಡಳಿತ ಮಂಡಳಿಯ ಹಿರಣಯ್ಯ, ಕುಮಾರ್, ಕೀರ್ತಿಕುಮಾರ್ ಇತರರು ಇದ್ದರು.

KP



ಹಾಸನಕ್ಕೆ ಆಗಮಿಸಿದ ಸುತ್ತೂರು ಕ್ಷೇತ್ರ ಜಾತ್ರಾ ಮಹೋತ್ಸವ ರಥ.

PRINCIPAL
J.S.S. Institute of Education
P.B. 26, SAKALESHPUR-573 134
Hassan Dist

## ಫೆ. 5 ರಿಂದ ಸುತ್ತೂರು ಜಾತ್ರೆ

ಸಕಲೇಶಪುರ: ಸುತ್ತೂರಿನಲ್ಲಿ ಈ ಬಾರಿ ಫೆ.5 ರಿಂದ 10ರವರೆಗೆ ಜಗದ್ಗುರು ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯದಲ್ಲಿ ಡಿಜಿಟಲ್ ಜಾತ್ರೆ ನಡೆಯಲಿದೆಂದು ಕಾರ್ಯಕ್ರಮದ ಸಂಯೋಜಕ ಡಾ. ನಂದೀಶ್ ಹಂಚೆ ತಿಳಿಸಿದರು.

ಪಟ್ಟಣದ ಕೌಡಹಳ್ಳಿ ಗ್ರಾಮದಲ್ಲಿರುವ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಯಲ್ಲಿ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿ, ಆದಿಗುರುಗಳಾದ ಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವದ ಅಂಗವಾಗಿ ಶ್ರೀಕ್ಷೇತ್ರದಲ್ಲಿರುವ ಸೋಮೇಶ್ವರ, ವೀರಭದ್ರೇಶ್ವರ, ಮಹದೇಶ್ವರ, ನಾರಾಯಣಸ್ವಾಮಿ, ಗ್ರಾಮದೇವತೆ ಹಾಗೂ ಇತರೆಡೆಗಳಲ್ಲಿ ಕಾಲಕಾಲಕ್ಕೆ ವಿಶೇಷ ಪೂಜಾ ಮಹೋತ್ಸವಗಳನ್ನು ಹಮ್ಮಿಕೊಳ್ಳಲಾಗಿದೆ. ಇದರ ಜೊತೆಗೆ ರಥೋತ್ಸವ, ತೆಪ್ಪೋತ್ಸವ, ಲಕ್ಷ ದೀಪೋತ್ಸವ, ಕೆಂಡೋತ್ಸವ ಆಯೋಜಿಸಲಾಗಿದೆ.

ಪ್ರಜಾಪ್ರಗತಿ ಪತ್ರಿಕೆ ದಿನಾಂಕ 3-2-2016 P/N 4

## ಸುತ್ತೂರು ಜಾತ್ರೆ: ಚಿತ್ರಸಂತೆ

ಪ್ರಜಾವಾಣಿ ವಾರ್ತೆ

ಸಕಲೇಶಪುರ: ಫೆ. 5 ರಿಂದ 10ರ ವರೆಗೆ ಸುತ್ತೂರಿನಲ್ಲಿ ನಡೆಯಲಿರುವ ಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವ ಅಂಗವಾಗಿ ರಾಜ್ಯಮಟ್ಟದ ಚಿತ್ರಸಂತೆ, ಸ್ಥಳದಲ್ಲೇ ಚಿತ್ರ ರಚಿಸುವ ಸ್ಪರ್ಧೆ, ವಸ್ತುಪ್ರದರ್ಶನ ಸೇರಿದಂತೆ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಜಾತ್ರೆಯ ಪ್ರಚಾರ ಸಮಿತಿ ಸಂಚಾಲಕ ಡಾ.ನಂದೀಶ್ ಹಂಚೆ ಹೇಳಿದರು.

ಇಲ್ಲಿಯ ಕೌಡಹಳ್ಳಿ ಜೆಎಸ್‌ಎಸ್ ಬಿ.ಇಡಿ ಕಾಲೇಜಿನಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾಜಿ ರಾಷ್ಟ್ರಪತಿ ಅಬ್ದುಲ್ ಕಲಾಂ ಅವರ ನೆನಪಿಗಾಗಿ ಈ ಬಾರಿ ವಿಶೇಷವಾಗಿ ಕರಕುಶಲ, ಕೈಮಗ್ಗ, ಗೃಹೋಪಯೋಗಿ ಪದಾರ್ಥಗಳ ಪ್ರದರ್ಶನ ಹಾಗೂ ಮಾರಾಟ, ವಸ್ತುಪ್ರದರ್ಶನ ನಡೆಯಲಿದೆ.

ಇದೇ ಮೊದಲ ಬಾರಿಗೆ ರಾಜ್ಯದ ಕಲಾವಿದರನ್ನು ಒಂದೇ ಸೂರಿನಡಿ ಸೇರಿಸಿ ಅವರ ಕಲಾಕೃತಿಗಳ ಪ್ರದರ್ಶನ ಮತ್ತು ಮಾರಾಟಕ್ಕೆ ಅವಕಾಶ ಕಲ್ಪಿಸಲಾಗಿದೆ. ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ವಿದ್ಯಾರ್ಥಿಗಳಿಗೆ ಸ್ಥಳದಲ್ಲಿಯೇ ಚಿತ್ರ ಬರೆಯುವ ರಾಜ್ಯಮಟ್ಟದ ಸ್ಪರ್ಧೆ ಏರ್ಪಡಿಸಲಾಗಿದೆ.

ಸುದ್ದಿಗೋಷ್ಠಿಯಲ್ಲಿ ವಿ. ನಾಗರಾಜ್, ಮಂಜುನಾಥ್, ಪ್ರಾಂಶುಪಾಲರಾದ ವಿನೋಲಿಯಾ ರಾಜ್, ಡಾ.ಎನ್.ಎಸ್. ಸುರೇಶ್, ನಾಗೇಂದ್ರ ಪ್ರಸಾದ್, ಉಪ ಪ್ರಾಂಶುಪಾಲ ಆರ್.ಕೆ. ಮಹದೇವಸ್ವಾಮಿ, ಮುಖ್ಯಶಿಕ್ಷಕ ಆರಾಧ್ಯ ಇದ್ದರು.

ಪ್ರಜಾವಾಣಿ ದಿನಾಂಕ 3-2-2016 P/N 3

PRINCIPAL
J.S.S. Institute of Education
P.B. 26, SAKALESHPUR-573 134
Hassan Dist


ಊರು ಮಂಗಳವಾರ | ಫೆಬ್ರವರಿ | 2 | 2016

# 5ರಿಂದ ಸುತ್ತೂರಿನಲ್ಲಿ ಜಾತ್ರೆ: ಡಾ.ನಂದೀಶ್

ಸಕಲೇಶಪುರ: ಸುತ್ತೂರಿನಲ್ಲಿ ಈ ಬಾರಿ ಫೆ.5 ರಿಂದ 10ರವರೆಗೆ ಜಗದ್ಗುರು ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯದಲ್ಲಿ ಡಿಜಿಟಲ್ ಜಾತ್ರೆ ನಡೆಯಲಿದೆಂದು ಕಾರ್ಯಕ್ರಮದ ಸಂಯೋಜಕ ಡಾ. ನಂದೀಶ್ ಹಂಚೆ ತಿಳಿಸಿದರು.

ಪಟ್ಟಣದ ಕೌಡಹಳ್ಳಿ ಗ್ರಾಮದಲ್ಲಿರುವ ಜೆಎಸ್ ಎಸ್ ಶಿಕ್ಷಣ ಸಂಸ್ಥೆಯಲ್ಲಿ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿ, ಆದಿಗುರುಗಳಾದ ಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವದ ಅಂಗವಾಗಿ ಶ್ರೀಕ್ಷೇತ್ರದಲ್ಲಿರುವ ಸೋಮೇಶ್ವರ, ವೀರಭದ್ರೇಶ್ವರ, ಮಹದೇಶ್ವರ, ನಾರಾಯಣಸ್ವಾಮಿ, ಗ್ರಾಮದೇವತೆ ಹಾಗೂ ಇತರೆಡೆಗಳಲ್ಲಿ ಕಾಲಕಾಲಕ್ಕೆ ವಿಶೇಷ ಪೂಜಾ ಮಹೋತ್ಸವಗಳನ್ನು ಹಮ್ಮಿಕೊಳ್ಳಲಾಗಿದೆ. ಇದರ ಜೊತೆಗೆರಥೋತ್ಸವ, ತೆಪ್ಪೋತ್ಸವ, ಲಕ್ಷದೀಪೋತ್ಸವ, ಕೊಂಡೋತ್ಸವ ಆಯೋಜಿಸಲಾಗಿದೆ.

# ಸುತ್ತೂರು ಜಾತ್ರಾ ಮಹೋತ್ಸವ: ಫೆ. 5 ರಿಂದ 10



ಸಕಲೇಶಪುರ: ಆದಿ ಜಗದ್ಗುರು ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವವು ಫೆ. 5ರಿಂದ 10ರವರೆಗೆ ಸುತ್ತೂರು ಶ್ರೀಕ್ಷೇತ್ರದಲ್ಲಿ ಜಗದ್ಗುರು ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆಯಲಿದೆ ಎಂದು ಡಾ.ನಂದೀಶ್ ಅಂಚೆ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಾತ್ರಾ ಮಹೋತ್ಸವದಲ್ಲಿ ರಥೋತ್ಸವ, ತೆಪ್ಪೋತ್ಸವ, ಕೊಂಡೋತ್ಸವ ಮುಂತಾದ ಧಾರ್ಮಿಕ ಕಾರ್ಯಕ್ರಮಗಳು ಜರುಗಲಿದೆ ಎಂದರು.

ಜಾತ್ರಾ ಮಹೋತ್ಸವದ ಅಂಗವಾಗಿ ರಾಜ್ಯಮಟ್ಟದ ಭಜನಾ ಮೇಳ, ಕರಕುಶಲ ಕೈಮಗ್ಗ, ಗೃಹಪಯೋಗಿ ಪದಾರ್ಥಗಳ ಪ್ರದರ್ಶನ ಹಾಗೂ ಮಾರಾಟ, ರೈತರಿಗೆ ಕೃಷಿ ಹಾಗೂ ಅದಕ್ಕೆ ಸಂಬಂಧಿಸಿದ ತಾಂತ್ರಿಕತೆ ಬಗ್ಗೆ ಮಾಹಿತಿ ನೀಡಲು ಕೃಷಿ ಮೇಳ, ಜೆಎಸ್ ಎಸ್ ಕೃಷಿ ಜ್ಞಾನ ಕೇಂದ್ರದಿಂದ ವಿವಿಧ ಜಾತಿಯ ಗಿಡಮೂಲಿಕೆ, ಸಸಿಗಳ ವಿತರಣೆ, ಚಿತ್ರಸಂತೆ, ಸ್ಥಳದಲ್ಲೇ ಚಿತ್ರ ರಚಿಸುವ ರಾಜ್ಯಮಟ್ಟದ ಸ್ಪರ್ಧೆ, ಸಾಮೂಹಿಕ ವಿವಾಹ, ಸ್ಪರ್ಧೆಗಳು, ಕುಸ್ತಿ ಪಂದ್ಯಾವಳಿ, ದೇಸಿ ಆಟಗಳು, ಗ್ರಾಮೀಣ ಆಟಗಳ ಸ್ಪರ್ಧೆ, ದನಗಳ ಜಾತ್ರೆ, ದೇಸಿ ಹಸುಗಳ ಪ್ರದರ್ಶನ ಹಾಗೂ ಸ್ಪರ್ಧೆ, ಸಾಂಸ್ಕೃತಿಕ ಮೇಳ, ಡಿಜಿಟಲ್ ಜಾತ್ರೆ, ಸಾಂಸ್ಕೃತಿಕ ಕಾರ್ಯಕ್ರಮಗಳು, ಯಕ್ಷಗಾನ, ಕಲಾ ತಂಡಗಳಿಂದ ಕಲಾಪ್ರದರ್ಶನ ನಡೆಯಲಿದೆ ಎಂದು ವಿವರಿಸಿದರು.

ಸುದ್ದಿಗೋಷ್ಠಿಯಲ್ಲಿ ಜೆಎಸ್ ಎಸ್ ಸಂಸ್ಥೆಯ .ನಾಗರಾಜ್, ಸಂಯೋಜಕ ಮಂಜುನಾಥ್, ಬಿಇಡಿ ಕಾಲೇಜು ಪ್ರಾಂಶುಪಾಲ ಡಾ.ಸುರೇಶ್, ನರ್ಸಿಂಗ್ ಕಾಲೇಜು ಪ್ರಾಂಶುಪಾಲ ನೋಲಿಯಾ ರಾಜ್, ಮಹದೇವ್ ಸ್ವಾಮಿ ಮುಂತಾದವರು ಹಾಜರಿದ್ದರು.

PRINCIPAL
J.S.S. Institute of Education
P.B. 26, SAKALESHPUR-573 134
Hassan Dist

ಪೊಲೀಸರು ಕಾನೂನು ಕ್ರಮ ಕೈಗೊಂಡಿದ್ದಾರೆ. | ಆಹ್ವಾನಿಸಲಾಗಿದೆ. ಸಂಗೀತ ನಿರ್ದೇಶಕ | ಎರಡೂ ಪಟ್ಟಣಗಳಿಗೆ ಸಮಾನ ಅವಕಾಶ | ಸುಗಮವಾಗಿರುತ್ತದೆ ಎಂದು ಜಿಲ್ಲಾಧಿಕಾರಿ | ಮಲ್ಲಿಕಾರ್ಜುನ, ಕೆ.ಪಿ.ಕುಮಾರ್ ಇದ್ದರು.

ಶಿಕ್ಷಣ ಕಾರ್ಯಾಗಾರ

■ ಶಿಕ್ಷಕ ವೃತ್ತಿ ಕೈಗೊಳ್ಳುವವರು ಮೊದಲಿಗೆ ಉತ್ತಮ ವಾಕ್‌ಚಾತುರ್ಯ ಹೊಂದಿರಬೇಕು

# ಶಿಕ್ಷಕರಿಂದ ದೇಶದ ಚಿತ್ರಣ ಬದಲಿಸಲು ಸಾಧ್ಯ: ಡಾ.ಪ್ರಹ್ಲಾದ್

ಸಕಲೇಶಪುರ: ದೇಶದ ಸಂಪೂರ್ಣ ಚಿತ್ರಣವನ್ನು ಬದಲಾಯಿಸಲು ಶಿಕ್ಷಕರುಗಳಿಂದ ಮಾತ್ರ ಸಾಧ್ಯವೆಂದು ಮೈಸೂರಿನ ರೀಜನಲ್ ಇನ್ಸ್‌ಸ್ಟಿಟ್ಯೂಟ್ ಕಾಲೇಜಿನ ನಿವೃತ್ತ ಪ್ರಾಧ್ಯಾಪಕ ಡಾ.ಪ್ರಹ್ಲಾದ್ ಹೇಳಿದರು.

ಪಟ್ಟಣದ ಕೌಡಹಳ್ಳಿ ಗ್ರಾಮದಲ್ಲಿರುವ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಯಲ್ಲಿ ಬಿಎಡ್ ವಿದ್ಯಾರ್ಥಿಗಳಿಗಾಗಿ ಹಮ್ಮಿಕೊಳ್ಳಲಾಗಿದ್ದ ಮೈಸೂರು ವಿಶ್ವವಿದ್ಯಾನಿಲಯದ ಎರಡು ವರ್ಷಗಳ ಬಿಎಡ್ ಭಾಷಾ ವಿಷಯಗಳ ನೂತನ ಕೈಪಿಡಿ ಕುರಿತ ಒಂದು ದಿನದ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು ಬೋಧನೆ ಎಂಬುದು ಕಲೆ. ಇದನ್ನು ಎಲ್ಲರು ಮಾಡಲು ಸಾಧ್ಯವಾಗುವುದಿಲ್ಲ, ಶಿಕ್ಷಕ ವೃತ್ತಿ ಕೈಗೊಳ್ಳುವರು ಮೊದಲಿಗೆ ಉತ್ತಮ ವಾಕ್ ಚಾತುರ್ಯ ಹೊಂದಿರಬೇಕು. ಉತ್ತಮ ವಾಕ್ ಚಾತುರ್ಯವನ್ನು ಹೊಂದಿರದವನು ಶಿಕ್ಷಕನಾಗಲು ಸಾಧ್ಯವಿಲ್ಲ ಎಂದರು.

**ಸ್ಪಷ್ಟ ಅರಿವು:** ಶಿಕ್ಷಕರಿಗೆ ಮೊದಲಿಗೆ ಏನು ಹೇಳಬೇಕು, ಯಾವ ಸಮಯದಲ್ಲಿ ಹೇಳಬೇಕು ಎಂಬುದರ ಬಗ್ಗೆ ಸ್ಪಷ್ಟ ಅರಿವು ಇರಬೇಕು. ಇದರಿಂದ ಮಾತ್ರ ಮಕ್ಕಳ ಮನಸ್ಸಿನಲ್ಲಿ ವಿಷಯವನ್ನು ಕೂರಿಸಲು ಸಾಧ್ಯ. ಪ್ರತಿಯೊಬ್ಬ ಶಿಕ್ಷಕ ಮಕ್ಕಳು ಸ್ವತಂತ್ರವಾಗಿ ಯೋಚಿಸುವಂತೆ ಮಾಡಬೇಕು. ಇದರಿಂದ ಮಕ್ಕಳು ಬುದ್ಧಿವಂತರಾಗಲು ಸಾಧ್ಯ ಎಂದರು. ಮಕ್ಕಳಿಗೆ ಕೊಡುವ ಉತ್ತಮ ಶಿಕ್ಷಣದಿಂದ ಜಗತ್ತನ್ನೇ ಬದಲಾಯಿಸಬಹುದಾಗಿದೆ. ಜ್ಞಾನ ಹಾಗೂ ಶಿಕ್ಷಣವು ಒಂದು ರೀತಿಯ ಶಕ್ತಿ. ಉತ್ತಮ ಶಿಕ್ಷಕನಾಗಿ ಹೊರಹೊಮ್ಮಬೇಕಾದರೆ ಹಳೇ ವಿಷಯಗಳಿಗೆ ಮಾತ್ರ ಗಂಟು ಬೀಳದೆ ಪ್ರತಿ ಕ್ಷಣವು ತನ್ನ ಜ್ಞಾನ ಭಂಡಾರವನ್ನು ಹೆಚ್ಚಿಸಿಕೊಂಡು ವಿದ್ಯಾರ್ಥಿಗಳಿಗೆ ತಿಳಿಸಿಕೊಡಬೇಕಾಗಿದೆ ಎಂದರು.




ಸಕಲೇಶಪುರ ಪಟ್ಟಣದ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಬಿಎಡ್ ವಿದ್ಯಾರ್ಥಿಗಳಿಗಾಗಿ ಹಮ್ಮಿಕೊಳ್ಳಲಾಗಿದ್ದ ಎರಡು ವರ್ಷಗಳ ಬಿಎಡ್ ಭಾಷಾ ವಿಷಯಗಳ ನೂತನ ಕೈಪಿಡಿ ಕುರಿತ ಒಂದು ದಿನದ ಕಾರ್ಯಾಗಾರವನ್ನು ಮೈಸೂರಿನ ರೀಜನಲ್ ಇನ್ಸ್‌ಸ್ಟಿಟ್ಯೂಟ್ ಕಾಲೇಜಿನ ನಿವೃತ್ತ ಪ್ರಾಧ್ಯಾಪಕ ಡಾ.ಪ್ರಹ್ಲಾದ್ ಉದ್ಘಾಟಿಸಿದರು.

**ವಿಸ್ತರಣೆ:** ಜೆಎಸ್‌ಎಸ್ ಬಿಎಡ್ ಕಾಲೇಜಿನ ಪ್ರಾಂಶುಪಾಲ ಸುರೇಶ್ ಮಾತನಾಡಿ, ಇಲ್ಲಿವರೆಗೆ ಒಂದು ವರ್ಷದ ಅವಧಿಗೆ ಇದ್ದ ಬಿಎಡ್ ಶಿಕ್ಷಣದ ಅವಧಿಯನ್ನು ಎರಡು ವರ್ಷಗಳ ಕಾಲಾವಧಿಗೆ ವಿಸ್ತರಿಸಲಾಗಿರುವುದರಿಂದ ಭಾಷಾ ವಿಷಯಗಳಲ್ಲಿ ಹಲವಾರು ಬದಲಾವಣೆಗಳನ್ನು ಮಾಡಲಾಗಿದೆ. ಈ ಹಿನ್ನೆಲೆಯಲ್ಲಿ ಶಿಕ್ಷಕರುಗಳಿಗೆ ತರಬೇತಿ ಅರಿವು ಮೂಡಿಸಲು ಕಾಲೇಜಿನಲ್ಲಿ ಕಾರ್ಯಾಗಾರ ಏರ್ಪಡಿಸಲಾಗಿದೆ. ರಾಜ್ಯದ ವಿವಿಧ ಭಾಗಗಳಿಂದ ತಜ್ಞರು ಆಗಮಿಸಿ ತರಬೇತಿ ನೀಡುತ್ತಿದ್ದಾರೆಂದು ಹೇಳಿದರು.

ಈ ಸಂದರ್ಭದಲ್ಲಿ ಶಿಕ್ಷಣ ತಜ್ಞರಾದ ಡಾ.ರಾಜು, ಪ್ರೊ. ನಾಗರತ್ನಮ್ಮ, ಡಾ. ಮೋಹನ್ ಕುಮಾರ್, ಜೆಎಸ್‌ಎಸ್ ಶಿಕ್ಷಣ ಸಂಸ್ಥೆಯ ಸಿಬ್ಬಂದಿಗಳಾದ ಡಾ. ಪ್ರಭುಸ್ವಾಮಿ, ಡಾ. ವೀರಯ್ಯ, ವಿನೋಲಿಯಾ ರಾಜ್, ಮಂಜುನಾಥ್, ನಾಗೇಂದ್ರ ಪ್ರಸಾದ್ ಸೇರಿದಂತೆ ಮತ್ತಿತರರು ಹಾಜರಿದ್ದರು.

ಉದಯವಾಣಿ 23/3/2016

PRINCIPAL
J.S.S. Institute of Education
P.B. 26, SAKALESHPUR-573 1
Hassan Dist




ಸಕಲೇಶಪುರದ ಕೌಡಹಳ್ಳಿ ಜೆಎಸ್‌ಎಸ್ ಬಿ.ಇಡಿ ಕಾಲೇಜಿನಲ್ಲಿ ಮಂಗಳವಾರ ನಡೆದ ಮೈಸೂರು ವಿ.ವಿ ಮಟ್ಟದ ಬಿ.ಇಡಿ ಕಾಲೇಜುಗಳ ಉಪನ್ಯಾಸಕರ ಅಭಿವಿನ್ಯಾಸ ಕಾರ್ಯಾಗಾರದಲ್ಲಿ ಮೈಸೂರು ಆರ್‌ಐಇ ನಿವೃತ್ತ ಪ್ರಾಧ್ಯಾಪಕ ಡಾ.ಪ್ರಹಲ್ಲಾದ್ ಮಾತನಾಡಿದರು

# ವಿದ್ಯಾರ್ಥಿಗಳಲ್ಲಿ ಪ್ರಶ್ನಿಸುವ ಗುಣ ಬೆಳೆಸಿ

ಸಕಲೇಶಪುರ: ಶಿಕ್ಷಕರು ತರಗತಿಯಲ್ಲಿ ವಿದ್ಯಾರ್ಥಿಗಳಿಗೆ ಕೇವಲ ಪಠ್ಯದಲ್ಲಿರುವ ವಿಷಯ ತಿಳಿಸುವುದಲ್ಲ. ಪ್ರತಿ ವಿದ್ಯಾರ್ಥಿಯಲ್ಲೂ ಆಲೋಚಿಸುವ ಶಕ್ತಿ ಮತ್ತು ಪ್ರಶ್ನಿಸುವ ಗುಣ ಬೆಳೆಸಬೇಕು ಎಂದು ಮೈಸೂರು ಆರ್‌ಐಇ ನಿವೃತ್ತ ಪ್ರಾಧ್ಯಾಪಕ ಡಾ.ಪ್ರಹಲ್ಲಾದ್ ಹೇಳಿದರು.

ಡಾ.ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಶತಮಾನೋತ್ಸವ ಅಂಗವಾಗಿ ತಾಲ್ಲೂಕಿನ ಕೌಡಹಳ್ಳಿ ಜೆಎಸ್‌ಎಸ್ ಬಿ.ಇಡಿ ಕಾಲೇಜಿನಲ್ಲಿ ಮಂಗಳವಾರ ಏರ್ಪಡಿಸಿದ್ದ 'ಬಿ.ಇಡಿ ಎರಡು ವರ್ಷದ ಕೋರ್ಸ್‌ಗೆ ಸಂಬಂಧಿಸಿದ ಭಾಷಾ ವಿಷಯದ ಪಠ್ಯಕ್ರಮ' ಕುರಿತ ಮೈಸೂರು ವಿಶ್ವವಿದ್ಯಾನಿಲಯ ವ್ಯಾಪ್ತಿಯ ಅಭಿವಿನ್ಯಾಸ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

ಭಾಷಾ ಅಧ್ಯಯನ ಎಂಬುದು ಬೋಧನೆಯ ಒಂದು ಕಲೆ. ಶಿಕ್ಷಕರಾದವರಿಗೆ ಸಂವಹನ ಅತಿ ಮುಖ್ಯ. ಶಿಕ್ಷಕರು ಸದಾ ಎಲ್ಲಾ ಕ್ಷೇತ್ರಗಳಲ್ಲಿಯೂ ಆಸಕ್ತಿ ಹೊಂದಿರಬೇಕು. ಸಂಶೋಧಕರಂತೆ, ವಿಶ್ಲೇಷಕರಂತೆ, ಆಳವಾಗಿ ಅಧ್ಯಯನ ಮಾಡಿ, ಕಲಿತದ್ದನ್ನು ವಿದ್ಯಾರ್ಥಿಗಳಿಗೆ ಕಲಿಸಿದರೆ ಮಾತ್ರ ಶಿಕ್ಷಕ ವೃತ್ತಿಗೆ ಗೌರವ ಎಂದರು.


ಮೈಸೂರು ವಿಶ್ವವಿದ್ಯಾನಿಲಯ ವ್ಯಾಪ್ತಿಯ ವಿವಿದ ಬಿ.ಇಡಿ ಕಾಲೇಜುಗಳಿಂದ ಕನ್ನಡ ಮತ್ತು ಇಂಗ್ಲಿಷ್ ಭಾಷೆಯ ಸುಮಾರು 70 ಮಂದಿ ಅಧ್ಯಾಪಕರು ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು. ಸಂಪನ್ಮೂಲ ವ್ಯಕ್ತಿಗಳಾಗಿ ನಿವೃತ್ತ ಪ್ರಾಧ್ಯಾಪಕ ಪ್ರೊ.ನಾಗರಾಜ್, ಮೈಸೂರಿನ ನಿವೃತ್ತ ಪ್ರಾಧ್ಯಾಪಕರಾದ ಪ್ರೊ.ನಾಗರತ್ನಾ ತರಬೇತಿ ನೀಡಿದರು.

ಕಾಲೇಜಿನ ಪ್ರಾಂಶುಪಾಲ ಡಾ.ಎನ್.ಎಸ್. ಸುರೇಶ್ ಅಧ್ಯಕ್ಷತೆ ವಹಿಸಿದ್ದರು. ಹಾಸನದ ಎನ್‌ಡಿಆರ್‌ಕೆ ಬಿ.ಇಡಿ ಕಾಲೇಜಿನ ಪ್ರಾಂಶುಪಾಲ ಡಾ.ಮೋಹನ್‌ಕುಮಾರ್, ಪ್ರಾಧ್ಯಾಪಕರಾದ ಡಾ.ವೀರಯ್ಯ, ಡಾ. ಪ್ರಭುಸ್ವಾಮಿ, ಖಾದರ್, ಡಾ.ನಂಜುಂಡಪ್ಪ, ಕಾಳೇಗೌಡ, ಡಾ.ವಿಕ್ರಂ, ಡಾ.ದಿನೇಶ್, ಮೀನಾಕ್ಷಿ ಖಾದರ್ ಇದ್ದರು.

ಪ್ರಜಾವಾಣಿ 23/3/2016.

PRINCIPAL
J.S.S. Institute of Education
P.B. 26, SAKALESHPUR-573 13
Hassan Dist

# ಆ. 3 ರಂದು ಸಕಲೇಶಪುರಕ್ಕೆ ಶ್ರೀ ಶಿವರಾತ್ರಿ ರಾಜೇಂದ್ರ ಜ್ಯೋತಿ ಯಾತ್ರೆ



ಸಕಲೇಶಪುರ : ಜಗದ್ಗುರು ಶ್ರೀಮತ್ಸುತ್ತೂರು ವೀರಸಿಂಹಾಸನ ಮಹಾಸಂಸ್ಥಾನ ಮಠಾಧೀಶ್ವರ ಪರಮ ಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಜನ್ಮ ಶತಮಾನೋತ್ಸವದ ಅಂಗವಾಗಿ ಶ್ರೀ ಶಿವರಾತ್ರಿ ರಾಜೇಂದ್ರ ಜ್ಯೋತಿ ಯಾತ್ರೆಯು ಮೇ 5 ರಂದು ಮೈಸೂರಿನಿಂದ ಪ್ರಾರಂಭವಾಗಿ ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳು ಆಂಧ್ರಪ್ರದೇಶ, ತೆಲಂಗಾಣ, ಮಹಾರಾಷ್ಟ್ರ, ತಮಿಳುನಾಡು ಹಾಗೂ ಕೇರಳ ರಾಜ್ಯಗಳಲ್ಲಿ ಸಂಚರಿಸುತ್ತಿದ್ದು, ಆಗಸ್ಟ್ 3 ರಂದು ಸಕಲೇಶಪುರಕ್ಕೆ ಆಗಮಿಸುತ್ತದೆ.

ಈ ಸಂಬಂಧ ಪಟ್ಟಣದ ಶ್ರೀ ಗುರುವೇಗೌಡ ಕಲ್ಯಾಣ ಮಂಟಪದಲ್ಲಿ ಮಲೆನಾಡು ವೀರಶೈವ ಸಮಾಜದ ಅಧ್ಯಕ್ಷರಾದ ಶ್ರೀ ಶಶಿಧರ್ ರವರ ಅಧ್ಯಕ್ಷತೆಯಲ್ಲಿ ಪೂರ್ವಭಾವಿ ಸಭೆಯನ್ನು ನಡೆಸಲಾಯಿತು. ಜನತಾ ಮಾಧ್ಯಮ

ಆಗಸ್ಟ್ 3 ರಂದು ಬೆಳಗ್ಗೆ 10 ಗಂಟೆಗೆ ಪಟ್ಟಣದ ಶ್ರೀ ಸಕಲೇಶ್ವರಸ್ವಾಮಿ ದೇವಸ್ಥಾನದ ಮುಂಭಾಗದಲ್ಲಿ ಜ್ಯೋತಿ ಯಾತ್ರೆಯನ್ನು ಪೂರ್ಣಕುಂಭ ಮಂಗಳ ವಾದ್ಯ ವಿವಿಧ ಕಲಾ ತಂಡಗಳ ಮೂಲಕ ಸ್ವಾಗತಿಸಿ ನಂತರ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ ಶ್ರೀಗುರುವೇಗೌಡ ಕಲ್ಯಾಣ ಮಂಟಪದಲ್ಲಿ ಧಾರ್ಮಿಕ ಸಭೆಯನ್ನು ನಡೆಸಲಾಗುವುದು ಎಂದು ನಿರ್ಣಯಿಸಲಾಯಿತು.

ಪೂರ್ವ ಭಾವಿ ಸಭೆಯಲ್ಲಿ ಮಲೆನಾಡು ವೀರಶೈವ ಸಮಾಜ ಹಾಗೂ ಇತರ ಅಂಗಸಂಸ್ಥೆಗಳ ಪದಾಧಿಕಾರಿಗಳು ಸಮಾಜದ ಮುಖಂಡರು ಭಾಗವಹಿಸಿದ್ದರು. 23/7/16

PRINCIPAL
J.S.S. Institute of Education
P.B. 26, SAKALESHPUR-573 134
Hassan Dist

ಕನ್ನಡ ಪ್ರಭ 11/8/16 P12

# ಜಾತಿ ಮೀರಿ ಬೆಳೆದ ಸುತ್ತೂರು ಮಠ: ಶಾಸಕರ ಶ್ಲಾಘನೆ

## ಶಿವರಾತ್ರಿ ರಾಜೇಂದ್ರ, ಜ್ಯೋತಿ ಯಾತ್ರೆಗೆ ಸ್ವಾಗತ ಕೋರಿದ ಶಾಸಕ ಎಚ್.ಕೆ. ಕುಮಾರಸ್ವಾಮಿ

• ಕನ್ನಡಪ್ರಭ ವಾರ್ತೆ ಸಕಲೇಶಪುರ

ಜಾತಿ ಮೀರಿ ಬೆಳೆದಿರುವುದು ಸುತ್ತೂರು ಮಠ ಎಂದು ಶಾಸಕ ಎಚ್.ಕೆ ಕುಮಾರಸ್ವಾಮಿ ಹೇಳಿದರು. ಬುಧವಾರ ಪಟ್ಟಣದಲ್ಲಿ ಮಲೆನಾಡು ವೀರಶೈವ ಸಮಾಜ ಹಾಗೂ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಸಹಯೋಗದೊಂದಿಗೆ ಹಮ್ಮಿಕೊಳ್ಳಲಾಗಿದ್ದ ಶಿವರಾತ್ರಿ ರಾಜೇಂದ್ರ ಜ್ಯೋತಿಯಾತ್ರೆಗೆ ಸ್ವಾಗತಕೋರಿ ಮಾತನಾಡಿದರು.

ಸುತ್ತೂರು ಮಠಕ್ಕೆ ಎಲ್ಲಾ ಸಮುದಾಯದವರು, ಭಕ್ತರು ಇರುವುರಿಂದ ಶ್ರೀಮಠ ಜಾತಿಮೀರಿ ಬೆಳೆದಿದೆ. ಇಲ್ಲಿ ವಿದ್ಯಾಭ್ಯಾಸ ಮಾಡಿದವರು ಇಂದು ರಾಜ್ಯ ಅಂತರ್‌ರಾಜ್ಯದಲ್ಲಿದ್ದಾರೆ. ಜಾತಿಮತ ಪಂಥದ ಭೇದವಿಲ್ಲದೆ ಶಿಕ್ಷಣ ಪಡೆದಿರುವ ಹಲವರು ಇಂದು ರಾಜ್ಯ ಹಾಗೂ ರಾಷ್ಟ್ರದ ಹಲವು ಆಯಾಕಟ್ಟಿನ ಪ್ರದೇಶಗಳಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದರು.ಜೆಎಸ್‌ಎಸ್ ಶಿಕ್ಷಣ ಸಂಸ್ಥೆಯಲ್ಲಿ ಶಿಕ್ಷಣ ಪಡೆದ ಎಲ್ಲರು ಇಂತಹ ಕಾರ್ಯಕ್ರಮಗಳಲ್ಲಿ ಭಾಗಿಯಾಗುವ ಮೂಲಕ ಶ್ರೀಗಳಿಗೆ ನಿಜವಾದ ನಮನ ಸಲ್ಲಿಸೋಣ ಎಂದು ಹೇಳಿದರು.

ಕಲ್ಮಠದ ಮಹಂತ ಸ್ವಾಮೀಜಿ ಮಾತನಾಡಿ, ಧರ್ಮ ಜಾಗೃತಿಯೇ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿಯವರ ಜನ್ಮಶತಮಾನೋತ್ಸವದ ಅಂಗವಾಗಿ ಹಮ್ಮಿಕೊಂಡಿರುವ ಜ್ಯೋತಿಯಾತ್ರೆಯ ಮೂಲ ಉದ್ದೇಶವಾಗಿದ್ದು, ಸಮಾಜದಲ್ಲಿರುವ ಪ್ರತಿಯೊಂದು ಮಠವು ಯಾವುದೊದರೊಂದು ರೂಪದಲ್ಲಿ ದರ್ಮ ಜಾಗೃತಿ ಹುಟ್ಟುಹಾಕುವ ನಿಟ್ಟಿನಲ್ಲಿ ಮಠಗಳು ನಿರತವಾಗಿವೆ. ಅದರಲ್ಲಿ ಸುತ್ತೂರು ಮಠ ಒಂದು ಹೆಜ್ಜೆ ಮುಂದೆ ಇದ್ದು ದರ್ಮ ಜಾಗೃತಿಯೊಂದಿಗೆ ಶೈಕ್ಷಣಿಕ ಕ್ಷೇತ್ರದಲ್ಲೂ ತನ್ನ ಸೇವೆಯನ್ನು ಹಮ್ಮಿಕೊಂಡಿದೆ ಎಂದರು. ಕಿರಿಕೊಡ್ಲಿಮಠದ ಸದಾಶಿವ ಸ್ವಾಮೀಜಿ ಈ ವೇಳೆ ಮಾತನಾಡಿದರು. ಉಪವಿಭಾಗಾಧಿಕಾರಿ ಶಿವರಾಜ್‌ಕಾರ್ಯಕ್ರಮ ಉದ್ಘಾಟಿಸಿದರು. ವೇದಿಕೆಯಲ್ಲಿ ಪುರಸಭೆ ಅಧ್ಯಕ್ಷೆ ಪುಷ್ಪಾವತಿ, ಮಲೆನಾಡು ವೀರಶೈವ ಸಮಾಜದ ಅಧ್ಯಕ್ಷ ಎಚ್.ಎಂ ಶಶಿಧರ್, ಕಾರ್ಯದರ್ಶಿ ಧರ್ಮಪ್ಪ, ಅಕ್ಕಮಹಾದೇವಿ ಮಹಿಳಾ ಸಮಾಜದ ಅಧ್ಯಕ್ಷೆ ಶ್ಯಾಮಲ, ವೀರಶೈವ ಯುವ ವೇದಿಕೆ ಅಧ್ಯಕ್ಷ ನರೇಶ್ ಇತರರು ಇದ್ದರು.



ಶ್ರೀ ಶಿವರಾತ್ರಿ ರಾಜೇಂದ್ರ ಜ್ಯೋತಿಯಾತ್ರೆ ಕಾರ್ಯಕ್ರಮವನ್ನು ಉಪವಿಭಾಗಾಧಿಕಾರಿ ಶಿವರಾಜ್ ಉದ್ಘಾಟಿಸಿದರು.

PRINCIPAL
J.S.S. Institute of Education
P.B. 26, SAKALESHPUR-573 134
Hassan Dist

ಪ್ರಜಾವಾಣಿ 02/8/16 P/2

# 5ರಂದು ಅರಕಲಗೂಡಿಗೆ ಜ್ಯೋತಿ ಯಾತ್ರೆ ಪ್ರವೇಶ

ಪ್ರಜಾವಾಣಿ ವಾರ್ತೆ

ಅರಕಲಗೂಡು: ಸುತ್ತೂರು ಮಠದ ಡಾ.ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರ ಜನ್ಮ ಶತಮಾನೋತ್ಸವದ ಅಂಗವಾಗಿ ರಾಜ್ಯದಾದ್ಯಂತ ಸಂಚರಿಸುತ್ತಿರುವ ಜ್ಯೋತಿಯ ರಥಯಾತ್ರೆ ಆ. 5 ರಂದು ತಾಲ್ಲೂಕಿಗೆ ಬರಲಿದೆ ಎಂದು ತಾಲ್ಲೂಕು ವೀರಶೈವ ಮಹಾಸಭಾ ಅಧ್ಯಕ್ಷ ಎನ್.ರವಿಕುಮಾರ್ ತಿಳಿಸಿದರು.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕೊಡಗು ಜಿಲ್ಲೆಯಿಂದ ಬರುವ ಜ್ಯೋತಿ ರಥಯಾತ್ರೆಯನ್ನು ಗಡಿಭಾಗ ಶಿರಂಗಾಲ ಗೇಟ್‌ನಲ್ಲಿ ಸ್ವಾಗತಿಸಿ ತಾಲ್ಲೂಕಿಗೆ ಬರಮಾಡಿಕೊಳ್ಳಲಾಗುವುದು. ಬಳಿಕ ಕೊಣನೂರು, ರಾಮನಾಥಪುರ ಪಟ್ಟಣಗಳಲ್ಲಿ ಸಂಚರಿಸುವ ಯಾತ್ರೆ ಸಂಜೆ 4 ಗಂಟೆಗೆ ಅರಕಲಗೂಡಿಗೆ ಬರಲಿದೆ ಎಂದರು.

ವೀರಗಾಸೆ, ನಂದಿಕುಣಿತ, ವಿವಿಧ ವಾದ್ಯ ವೃಂದಗಳೊಂದಿಗೆ ಪಟ್ಟಣದ ಚಿಲುಮೆ ಮಠದಿಂದ ಹೊರಡುವ ಯಾತ್ರೆಯು ಮುಖ್ಯ ರಸ್ತೆಗಳಲ್ಲಿ ಸಂಚರಿಸಿ ಹೊಳೆನರಸೀಪುರ ರಸ್ತೆಯ ಚನ್ನಬಸವೇಶ್ವರ ಕಲ್ಯಾಣ ಮಂಟಪದಲ್ಲಿ ತಂಗಲಿದೆ.

ನಂತರ ಧಾರ್ಮಿಕ, ಸಭೆ ನಡೆಯಲಿದ್ದು ಇದರಲ್ಲಿ ತಾಲ್ಲೂಕಿನ ಎಲ್ಲ ಮಠಾಧೀಶರು ಭಾಗವಹಿಸಲಿದ್ದಾರೆ. ಎಲ್ಲ ಜನ ಪ್ರತಿನಿಧಿಗಳು, ಸಂಘ ಸಂಸ್ಥೆಗಳು, ಅಧಿಕಾರಿಗಳು ಮೆರವಣಿಗೆಯಲ್ಲಿ ಪಾಲ್ಗೊಳ್ಳುವಂತೆ ಕೋರಲಾಗಿದೆ. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಮನವಿ ಮಾಡಿದರು.

ಸಮಾಜದ ಮುಖಂಡರಾದ ಯೋಗೇಶ್, ಷಡಕ್ಷರಿ, ಬಿ.ಪಿ.ವೀರೇಶ್, ಜಗದೀಶ್, ಲೋಕೇಶ್, ವಿರೂಪಾಕ್ಷ, ಚಂದ್ರು ಪತ್ರಿಕಾಗೋಷ್ಠಿಯಲ್ಲಿದ್ದರು.

# ರಾಜೇಂದ್ರ ಸ್ವಾಮೀಜಿ ಜ್ಯೋತಿಯಾತ್ರೆಗೆ ಅದ್ದೂರಿ ಸ್ವಾಗತ

ಪ್ರಜಾವಾಣಿ ವಾರ್ತೆ

ಬೇಲೂರು: 'ನಾಡಿನ ಪ್ರಸಿದ್ಧ ಮಠಗಳಲ್ಲಿ ಒಂದಾದ ಸುತ್ತೂರು ಮಠವೂ ಸಮಾಜಿಕ ಕೈಂಕರ್ಯಗಳನ್ನು ತೊಡಗಿಸಿ ಕೊಳ್ಳುವಲ್ಲಿ ಮುಂಚೂಣಿಯಲ್ಲಿದೆ' ಎಂದು ಪುರಸಭೆ ಅಧ್ಯಕ್ಷ ಟಿ.ಎ. ಶ್ರೀನಿಧಿ ಹೇಳಿದರು.

ಸುತ್ತೂರು ಮಠದ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರ ಶತಮಾನೋತ್ಸವ ಜ್ಯೋತಿಯಾತ್ರೆಗೆ ಸೋಮವಾರ ಮಾಲಾರ್ಪಣೆ ಮಾಡಿ ಸ್ವಾಗತಿಸಿದ ಬಳಿಕ ಮಾತನಾಡಿದ ಅವರು ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ನಾಡಿನ ಅಭಿವೃದ್ಧಿಗಾಗಿ ಸದಾ ಮಗ್ನರಾಗಿದ್ದರು. ಬಡವರ ಪರ ಕಾಳಜಿ ಹೊಂದಿದ್ದರು. ಅವರ ಸೇವೆ ಇಂದಿಗೂ ಅನನ್ಯ ಎಂದರು.

ವೀರಶೈವ ಮಹಾಸಭಾದ ತಾಲ್ಲೂಕು ಘಟಕದ ಅಧ್ಯಕ್ಷ ಬಿ.ಎಸ್. ರಾಜಶೇಖರ್, ಶರಣ ಸಾಹಿತ್ಯ ಪರಿಷತ್ತಿನ ತಾಲ್ಲೂಕು ಘಟಕದ ಅಧ್ಯಕ್ಷ ಸಿ.ಎಂ. ನಿಂಗರಾಜು, ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಎಚ್.ಎಂ.ದಯಾನಂದ್, ಪುರಸಭೆ ಮುಖ್ಯಾಧಿಕಾರಿ ಬಿ.ಸಿ. ಬಸವರಾಜು, ವೀರಶೈವ ಮುಖಂಡರಾದ ಯೋಗೇಶ್, ಹಬ್ಬಾಳು ಹಾಲಪ್ಪ, ಕೆ.ಎಂ. ವಿರೂಪಾಕ್ಷ ಇದ್ದರು.



ಬೇಲೂರಿಗೆ ಸೋಮವಾರ ಬಂದ ಸುತ್ತೂರು ಮಠದ ಶಿವರಾತ್ರಿ ರಾಜೇಂದ್ರರ ಶತಮಾನೋತ್ಸವ ಜ್ಯೋತಿಯಾತ್ರೆಗೆ ಪುರಸಭಾಧ್ಯಕ್ಷ ಟಿ.ಎ. ಶ್ರೀನಿಧಿ ಮಾಲಾರ್ಪಣೆ ಮಾಡಿ ಸ್ವಾಗತಿಸಿದರು. ಎಚ್.ಎಂ.ದಯಾನಂದ್, ಬಿ.ಎಸ್. ರಾಜಶೇಖರ್, ಬಿ.ಸಿ. ಬಸವರಾಜು, ಸಿ.ಎಂ. ನಿಂಗರಾಜು ಇದ್ದಾರೆ.

## ಸಕಲೇಶಪುರಕ್ಕೆ ಇಂದು

ಸಕಲೇಶಪುರ: ಸುತ್ತೂರಿನಿಂದ ಹೊರಟಿರುವ ಶಿವರಾತ್ರಿ ರಾಜೇಂದ್ರ ಜ್ಯೋತಿ ಯಾತ್ರೆ ಆ. 2ರಂದು ತಾಲ್ಲೂಕು ಪ್ರವೇಶಿಸಲಿದೆ ಎಂದು ಮಲೆನಾಡು ವೀರಶೈವ ಸಮಾಜದ ಅಧ್ಯಕ್ಷ ಎಚ್.ಎಂ. ಶಶಿಧರ್ ಹೇಳಿದರು.

ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸೇರಿದಂತೆ ಪಕ್ಕದ ರಾಜ್ಯಗಳಲ್ಲಿ ಸಂಚರಿಸುತ್ತಿರುವ ಜ್ಯೋತಿ ರಥಯಾತ್ರೆಯು ಮಂಗಳವಾರ ಮಧ್ಯಾಹ್ನ ಬಾಳ್ಳುಪೇಟೆಗೆ ಬರಲಿದೆ. ಸಿದ್ದಣ್ಣಯ್ಯ ಪ್ರೌಢಶಾಲೆ ಮುಂಭಾಗ ಮಂಗಳವಾದ್ಯಗಳು ಹಾಗೂ ಕಲಾ ತಂಡಗಳೊಂದಿಗೆ ಸ್ವಾಗತಿಸಿ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಲಾಗುವುದು ಎಂದರು.

ಬುಧವಾರ ಬೆಳಗ್ಗೆ 10ಕ್ಕೆ ಪಟ್ಟಣ ಪ್ರವೇಶಿಸುತ್ತದೆ. ಗುರುವೇಗೌಡ ಕಲ್ಯಾಣ ಮಂಟಪದಲ್ಲಿ ನಡೆಯುವ ಸಭಾ ಕಾರ್ಯಕ್ರಮವನ್ನು ಶಾಸಕ ಎಚ್.ಕೆ. ಕುಮಾರಸ್ವಾಮಿ ಉದ್ಘಾಟಿಸಲಿದ್ದಾರೆ.

ಸ್ವಾಮೀಜಿಗಳು, ಗಣ್ಯರು, ಅಧಿಕಾರಿಗಳು, ವೀರಶೈವ ಸಮಾಜದ ಮುಖಂಡರು ಭಾಗವಹಿಸುತ್ತಾ... ಎಂದರು. ಸುದ್ದಿಗೋಷ್ಠಿಯಲ್ಲಿ ಸಮಾಜದ ಕಾರ್ಯದರ್ಶಿ ಎಚ್.ಎಸ್. ... ಬಿ.ಡಿ. ಬಸವಣ್ಣ, ಮಂಜುನಾ...

PRINCIPAL
J.S.S. Institute of Education
P.B. 26, SAKALESHPUR-573 1..
Hassan Dist

# 'ಶಿಕ್ಷಣ ಕ್ಷೇತ್ರಕ್ಕೆ ಸುತ್ತೂರು ಮಠದ ಕೊಡುಗೆ ದೊಡ್ಡದು'

**ಬೇಲೂರು:** ಕನ್ನಡನಾಡಿನ ಧಾರ್ಮಿಕ ಇತಿಹಾಸದಲ್ಲಿ ಸಾವಿರ ವರ್ಷಗಳಿಗೂ ಹೆಚ್ಚಿನ ಸುದೀರ್ಘ ಪರಂಪರೆ ಹೊಂದಿರುವ ಸುತ್ತೂರು ಜಗದ್ಗುರು ಶ್ರೀ ವೀರಸಿಂಹಾಸನ ಮಠವು ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ರಾಜೇಂದ್ರ ಮಹಾಸ್ವಾಮಿಗಳ ಜನ್ಮ ಶತಮಾನೋತ್ಸವ ಜ್ಯೋತಿಯಾತ್ರೆ ನಾಡಿನ ವಿವಿಧ ಭಾಗದಲ್ಲಿ ಸಂಚರಿಸಿ ವಿಶ್ವ-ವಿಖ್ಯಾತ ಬೇಲೂರಿಗೆ ಆಗಮಿಸಿತು.

ಈ ಸಂದರ್ಭದಲ್ಲಿ ಬೇಲೂರು ಪುರಸಭೆ ಹಾಗೂ ವಿವಿಧ ಸಂಘ-ಸಂಸ್ಥೆಗಳ ಮುಖಂಡರು ಆತ್ಮೀಯವಾಗಿ ರಥವನ್ನು ಬರಮಾಡಿಕೊಂಡರು. ಅಲ್ಲದೇ ಇದೇ ಸಂದರ್ಭದಲ್ಲಿ ಶ್ರೀ ಶಿವರಾತ್ರಿ ಸ್ವಾಮೀಜಿಗಳ ಪುತ್ಥಳಿಗೆ ಮಾಲಾರ್ಪಣೆ ಮಾಡಲಾಯಿತು.

ಈ ವೇಳೆ ಮಾತನಾಡಿದ ಬೇಲೂರು ಪುರಸಭಾ ಅಧ್ಯಕ್ಷ ಟಿ.ಎ.ಶ್ರೀನಿಧಿ, ನಾಡಿನ ವೀರಶೈವ ಮಠಗಳಲ್ಲಿ ತನ್ನದೆ ಆದ ಛಾಪು ಮೂಡಿಸಿದ ಸುತ್ತೂರು ಮಠವು ಶಿಕ್ಷಣ, ಆರೋಗ್ಯ ಕ್ಷೇತ್ರದಲ್ಲಿ ತನ್ನದೆಯಾದ ಕೊಡುಗೆಯನ್ನು ನಾಡಿಗೆ ನೀಡಿದೆ. ಜಾತಿ, ಮತ, ಧರ್ಮ, ವರ್ಗ, ಭೇದ ಮರೆತು ಅವಿರತ ಕೆಲಸ ಮಾಡುತ್ತಾ ಬಂದಿರುವ ಜ್ಯೋತಿಯಾತ್ರೆ ಬೇಲೂರಿಗೆ ಆಗಮಿಸಿದ್ದು ಪುರಸಭೆಯ ಹಿರಿಮೆ ಹೆಚ್ಚಿಸಿದೆ ಎಂದರು.

**ಪುಣ್ಯಾವಕಾಶ:** ಕನ್ನಡ ಸಾಹಿತ್ಯ ಪರಿಷತ್ತಿನ ತಾಲೂಕು ಅಧ್ಯಕ್ಷ ಹೆಚ್.ಎಂ.ದಯಾನಂದ ಮಾತನಾಡಿ, ಧರ್ಮ ಗುರುಗಳು ಹೇಗಿರಬೇಕು ಎನ್ನುವುದಕ್ಕೆ ಬಹು ದೊಡ್ಡ ನಿದರ್ಶನವಾಗಿದ್ದ ಪೂಜ್ಯರು, ನಮ್ಮೆಲ್ಲರ ಮಧ್ಯೆ ಇದ್ದರೂ ಲೋಕದ ಹಂಗನ್ನೆಲ್ಲ ಮೀರಿ ನಿಂತ ಮಹಂತರು. ಈಗ ಅವರ ಜನ್ಮ ಶತಮಾನೋತ್ಸವದ ಆಚರಣೆ ನಡೆಯುತ್ತಿದೆ. ಇದು ಲೋಕ ಸೇವೆಗೆ ತಮ್ಮನ್ನು ಸಮರ್ಪಿಸಿಕೊಂಡಿದ್ದ ಈ ದಿವ್ಯ ಚೇತನಕ್ಕೆ ನಾಡು ತನ್ನ ಕೃತಜ್ಞತೆ ಸಲ್ಲಿಸುವ ಒಂದು ಪುಣ್ಯಾವಕಾಶ ನಮಗೆ ಬಂದಿದೆ ಎಂದರು. ಧರ್ಮ ಸಮನ್ವಯ, ಕಾಯಕ ದಾಸೋಹ ಮತ್ತು ಶಿಕ್ಷಣ ಪ್ರಸಾರ ಈ ಮೂರು ಮೌಲ್ಯಗಳ ಮಹಾಮನೆಯಾದ ಶ್ರೀಮಠವು ತನ್ನ ಕಾರ್ಯಕ್ಷೇತ್ರವನ್ನು ಸಾಮಾಜಿಕ ವಲಯಕ್ಕೆ ಮತ್ತಷ್ಟು ವಿಸ್ತರಿಸಿ, ಶ್ರೀಗಳು ಮಂತ್ರಮಹರ್ಷಿ ಎಂದು ಖ್ಯಾತಿ ಪಡೆದಿದ್ದಾರೆಂದರು.

ಸುತ್ತೂರು, ನಾಡಿನ ಸಾಹಿತ್ಯ ಲೋಕಕ್ಕೆ ತನ್ನದೆಯಾದ ಕಾಣಿಕೆ ನೀಡಿದೆ. ಪುಸ್ತಕಗಳ ಸಂಗ್ರಹ ಮತ್ತು ಸಾಹಿತ್ಯಗಳಿಗೆ ಪ್ರೋತ್ಸಾಹ ನೀಡುತ್ತಾ ಸಾಹಿತ್ಯದ ಬಲವರ್ಧನೆಗೂ ನಿರಂತರವಾಗಿ ಕೆಲಸ ಮಾಡುತ್ತಿದೆ ಎಂದರು.

ತಾಲೂಕು ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸಿ.ಎಂ. ನಿಂಗರಾಜು ಮಾತನಾಡಿ, ಸಾವಿರ ವರ್ಷಗಳ ಗತ ಇತಿಹಾಸ ಹೊಂದಿರುವ ಸುತ್ತೂರು ಮಠ ಮೈಸೂರು ಭಾಗಕ್ಕೆ ಮಾತ್ರ ಸೀಮಿತವಾಗಿತ್ತು. ಶ್ರೀ ಮಠದ ಸೇವೆ ಇಂದು ದೇಶ-ವಿದೇಶಗಳಲ್ಲಿ ತನ್ನ ಕಾರ್ಯ ಚಟುವಟಿಕೆಗಳನ್ನು ಅತ್ಯಂತ ಕ್ರಿಯಾಶೀಲತೆಯಿಂದ ಮಾಡುತ್ತಿದೆ ಎಂದರು.

ಅಖಿಲ ಭಾರತ ವೀರಶೈವ ಮಹಾಸಭಾದ ತಾಲೂಕು ಅಧ್ಯಕ್ಷ ಬಿ.ಎಸ್.ರಾಜಶೇಖರ್, ಪುರಸಭಾ ಮುಖ್ಯಾಧಿಕಾರಿ ಬಿ.ಸಿ.ಬಸವರಾಜು, ವೀರಶೈವ ಸಂಘದ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ್, ಡಿಸಿಸಿ ಬ್ಯಾಂಕ್ ನಿವೃತ್ತ ಅಧಿಕಾರಿ ಯೋಗೀಶ್ ಹಾಜರಿದ್ದರು.




ಶ್ರೀ ಶಿವರಾತ್ರಿ ರಾಜೇಂದ್ರ ಜನ್ಮ ಶತಮಾನೋತ್ಸವ ಜ್ಯೋತಿ ಯಾತ್ರೆ ಬೇಲೂರಿಗೆ ಆಗಮಿಸಿದ ಸಂದರ್ಭದಲ್ಲಿ ಪುರಸಭಾ ಅಧ್ಯಕ್ಷ ಟಿ.ಎ.ಶ್ರೀನಿಧಿ ಹಾಗೂ ವಿವಿಧ ಸಂಘ-ಸಂಸ್ಥೆಗಳು ಆತ್ಮೀಯವಾಗಿ ಬರ ಮಾಡಿಕೊಂಡರು.

02/8/16 P/2

# ಸುತ್ತೂರು ಶ್ರೀಗಳ ಜ್ಯೋತಿಯಾತ್ರೆಗೆ ಸ್ವಾಗತ



**ಚನ್ನರಾಯಪಟ್ಟಣ:** ತಾಲೂಕಿನ ನಾಗರನವಿಲೆಯಿಂದ ನುಗ್ಗೇಹಳ್ಳಿಗೆ ಆಗಮಿಸಿದ ಸುತ್ತೂರು ಮಠದ ಶಿವರಾತ್ರಿ ರಾಜೇಂದ್ರ ಸ್ವಾಮೀಜಿಯವರ ಜನ್ಮ ಶತಮಾನೋತ್ಸವದ ಜ್ಯೋತಿ ಯಾತ್ರೆ ರಥವನ್ನು ನುಗ್ಗೇಹಳ್ಳಿ ಸುತ್ತ-ಮುತ್ತಲ ಗ್ರಾಮಸ್ಥರು ಸ್ವಾಗತಿಸಿ, ಶ್ರೀ ಗಳ ಪುತ್ಥಳಿಗೆ ಮುಖಂಡರು ಮಾಲಾರ್ಪಣೆ ಮಾಡಿದರು. ಈ ಸಂದರ್ಭದಲ್ಲಿ ಗ್ರಾಮಪಂಚಾಯಿತಿ ಅಧ್ಯಕ್ಷ ವಿ.ಎನ್. ಧನಂಜಯ, ತಾಲೂಕು ವೀರಶೈವ ಸಮಾಜದ ಅಧ್ಯಕ್ಷ ಎನ್. ಪರಮೇಶ್, ತಾಲೂಕು ಪಂಚಾಯಿತಿ ಮಾಜಿ ಉಪಾಧ್ಯಕ್ಷ ಹೆಚ್.ಜೆ.ಕಿರಣ್, ಗ್ರಾಮಪಂಚಾಯಿತಿ ಉಪಾಧ್ಯಕ್ಷ ಶಿವರಾಜ್, ಗ್ರಾಮಪಂಚಾಯಿತಿ ಮಾಜಿ ಅಧ್ಯಕ್ಷರಾದ ಎನ್.ಎಸ್.ಲಕ್ಷ್ಮಣ್, ವಿಕ್ಟರ್, ಮುಖಂಡರಾದ ಸಿ.ಬಿ.ಶಂಕರ್, ಎನ್.ಸಿ.ವಿಶ್ವನಾಥ್, ಪ್ರದೀಪ್, ಎನ್. ಎಸ್.ಪ್ರಕಾಶ್, ರುದ್ರಸ್ವಾಮಿ, ಗ್ರಾಪಂ ಸದಸ್ಯ ಶಾಂತಪ್ಪ ಎನ್.ಡಿ.ನವೀನ್, ಪಂಚಾಕ್ಷರಿ, ಮಹೇಶ್, ಪಿ.ವೀರೇಶ್, ಬಿ.ಬಾಬು, ಗ್ರಾಮದ ಜನಪ್ರತಿನಿಧಿಗಳು ಹಾಜರಿದ್ದರು.

2/8/16 P/2

PRINCIPAL
J.S.S. Institute of Education
P.B. 26, SAKALESHPUR-573 134
Hassan Dist

ಉದಯವಾಣಿ 02/8/16 P/2

## ಜ್ಯೋತಿ ಯಾತ್ರೆ...



ಹಾಸನಕ್ಕೆ ಸೋಮವಾರ ಆಗಮಿಸಿದ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿ ಅವರ ಜನ್ಮ ಶತಮಾನೋತ್ಸವದ ಜ್ಯೋತಿಯಾತ್ರೆಗೆ ತಹಶೀಲ್ದಾರ್ ಮಂಜುನಾಥ್, ನಗರಸಭೆ ಅಧ್ಯಕ್ಷ ಅನೀಲ್‌ಕುಮಾರ್, ವೀರಶೈವ ಸಂಘದ ಅಧ್ಯಕ್ಷ ಬಿ.ಪಿ.ಐ ಸ್ವಾಮಿಗೌಡರ ನೇತೃತ್ವದಲ್ಲಿ ಭವ್ಯ ಸ್ವಾಗತ ನೀಡಲಾಯಿತು.

ಕೆ ವಿ ಮಾತು

PRINCIPAL
J.S.S. Institute of Education
P.B. 26, SAKALESHPUR-573
Hassan Dist

# ಶಿವರಾತ್ರಿ ರಾಜೇಂದ್ರ ಜ್ಯೋತಿಯಾತ್ರೆ ಇಂದು

**ವಿಕ ಸುದ್ದಿಲೋಕ** ಸಕಲೇಶಪುರ

ಶ್ರೀಕ್ಷೇತ್ರ ಸುತ್ತೂರಿನಿಂದ ಹೊರಟಿರುವ ಶಿವರಾತ್ರಿ ರಾಜೇಂದ್ರ ಜ್ಯೋತಿಯಾತ್ರೆ ಆ.2 ರಂದು ತಾಲೂಕು ಪ್ರವೇಶಿಸಲಿದ್ದು ಎರಡು ದಿನದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಮಲೆನಾಡು ವೀರಶೈವ ಸಮಾಜದ ಅಧ್ಯಕ್ಷ ಎಚ್.ಎಂ.ಶಶಿಧರ್ ಹೇಳಿದರು.

ಪಟ್ಟಣದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ದೇಶಾದ್ಯಂತ ಸಂಚರಿಸುತ್ತಿರುವ ಜ್ಯೋತಿಯಾತ್ರೆಯು ಆ.2 ರ ಮಧ್ಯಾಹ್ನ ಬಾಳ್ಳುಪೇಟೆಗೆ ಆಗಮಿಸಲಿದೆ. ಸಿದ್ದಣ್ಣಯ್ಯ ಪ್ರೌಢಶಾಲೆ ಮುಂಭಾಗ ಮಂಗಳ ವಾದ್ಯಗಳು ಹಾಗೂ ಕಲಾ ತಂಡಗಳೊಂದಿಗೆ ಸ್ವಾಗತಿಸಿ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಲಾಗುವುದು ಎಂದು ತಿಳಿಸಿದರು.

ಇದೇ ದಿನ ಸಂಜೆ 4 ಕ್ಕೆ ಭಾಗೆ ಗ್ರಾಮದಲ್ಲಿರುವ ಜೆಎಸ್‌ಎಸ್ ಪಬ್ಲಿಕ್ ಶಾಲೆ ಆವರಣದಲ್ಲಿ ಸ್ವಾಗತ ಕೋರಲಾಗುವುದು. ಸಂಜೆ ಅಲ್ಲಿಯೇ ವಾಸ್ತವ್ಯ ಹೂಡಿ, ಮರುದಿನ ಬೆಳಗ್ಗೆ 10 ಕ್ಕೆ ಪಟ್ಟಣ ಪ್ರವೇಶಿಸುವುದು. ಸಕಲೇಶ್ವರಸ್ವಾಮಿ ದೇವಸ್ಥಾನದ ಮುಂಭಾಗದಿಂದ ಪೂರ್ಣಕುಂಭ, ನಾನಾ ಕಲಾ ತಂಡಗಳು, ಮಂಗಳ ವಾದ್ಯಗಳು ಹಾಗೂ ಭಕ್ತಾದಿಗಳೊಂದಿಗೆ ಪ್ರಮುಖ ಬೀದಿಗಳಲ್ಲಿ ಉತ್ಸವ ನಡೆಸಲಾಗುವುದು.

ನಂತರ ಗುರುವೇ ಗೌಡ ಕಲ್ಯಾಣ ಮಂಟಪದಲ್ಲಿ ನಡೆಯುವ ಸಭಾ ಕಾರ್ಯಕ್ರಮವನ್ನು ಶಾಸಕ ಎಚ್.ಕೆ.ಕುಮಾರಸ್ವಾಮಿ ಉದ್ಘಾಟಿಸಲಿದ್ದಾರೆ. ವಿವಿಧ ಗಣ್ಯರು, ಅಧಿಕಾರಿಗಳು, ವೀರಶೈವ ಸಮಾಜದ ಮುಖಂಡರು, ವಿದ್ಯಾರ್ಥಿಗಳು, ಭಕ್ತಾದಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದು ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಮನವಿ ಮಾಡಿದರು.

ಕಾರ್ಯದರ್ಶಿ ಎಚ್.ಎಸ್.ಧರ್ಮಪ್ಪ, ಬಿ.ಡಿ.ಬಸವಣ್ಣ, ಜೆಎಸ್‌ಎಸ್ ವಿದ್ಯಾ ಸಂಸ್ಥೆ ಅಧೀಕ್ಷಕ ಮಂಜುನಾಥ್ ಇದ್ದರು.

## ಅರಕಲಗೂಡಿಗೆ 5 ಕ್ಕೆ

**ವಿಕ ಸುದ್ದಿಲೋಕ** ಅರಕಲಗೂಡು

ಮೈಸೂರು ಸುತ್ತೂರು ಜಗದ್ಗುರು ಡಾ.ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಜ್ಯೋತಿಯಾತ್ರೆ ತಾಲೂಕಿಗೆ ಆ.5ರಂದು ಆಗಮಿಸಲಿದ್ದು, ಈ ಸಂದರ್ಭದಲ್ಲಿ ಎಲ್ಲಾ ಸಮಾಜದವರು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ತಾಲೂಕು ವೀರಶೈವ ಮಹಾಸಭಾ ಅಧ್ಯಕ್ಷ ಎನ್.ರವಿಕುಮಾರ್ ಮನವಿ ಮಾಡಿದರು.


ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರ ಜನ್ಮಶತಮಾನೋತ್ಸವ ಅಂಗವಾಗಿ ಮೇ 5ರಿಂದಲೂ ರಾಜ್ಯದೆಲ್ಲಡೆ ಜ್ಯೋತಿಯಾತ್ರೆ ಸಂಚರಿಸಿ ಧಾರ್ಮಿಕ, ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ಕೃಷಿ ಕ್ಷೇತ್ರದಲ್ಲಿ ಅನುಪಮಾ ಸೇವೆ ಸಲ್ಲಿಸುತ್ತಿರುವ ಸುತ್ತೂರು ಮಠದ ವೈಶಿಷ್ಟ್ಯಗಳನ್ನು ಭಕ್ತರಿಗೆ ತಿಳಿಸುವ ಮಹಾನ್ ಕೆಲಸವನ್ನು ನಿರ್ವಹಿಸಲಾಗುತ್ತಿದೆ. ಈ ಸಲುವಾಗಿ ತಾಲೂಕಿಗೆ ಆ.5ರಂದು ಕೊಡಗು ಗಡಿಶಿರಂಗಾಲ ಗ್ರಾಮದ ಬಳಿಯಿಂದ ಜ್ಯೋತಿಯಾತ್ರೆಯನ್ನು ಸ್ವಾಗತಿಸಿ, ಕೊಣನೂರು, ರಾಮನಾಥಪುರ, ದೊಡ್ಡಮಗ್ಗೆ ಗ್ರಾಮಗಳ ಬಳಿ ಅರ್ಥಪೂರ್ಣವಾಗಿ ಸ್ವಾಗತ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಹೇಳಿದರು.

ಅಂದು ಸಂಜೆ 4 ಕ್ಕೆ ಪಟ್ಟಣದ ಚಿಲುಮೆ ಮಠದಿಂದ ಜ್ಯೋತಿಯಾತ್ರೆಯನ್ನು ವೀರಗಾಸೆ, ನಂದಿಕುಣಿತ, ವಾದ್ಯಗಳೊಂದಿಗೆ ಪ್ರಮುಖ ಬೀದಿಯಲ್ಲಿ ಮೆರವಣಿಗೆ ಮಾಡಲಾಗುವುದು. ನಂತರ ಸಂಜೆ 6ಕ್ಕೆ ಪಟ್ಟಣದ ಶ್ರೀಚನ್ನಬಸವೇಶ್ವರ ಸಮುದಾಯ ಭವನದಲ್ಲಿ ಬೃಹತ್ ಧಾರ್ಮಿಕ ಸಭೆಯನ್ನು ಏರ್ಪಡಿಸಲಾಗಿದೆ. ಕಾರ್ಯಕ್ರಮದಲ್ಲಿ ದೊಡ್ಡಮಠಾಧೀಶ ಶ್ರೀ ಮಲ್ಲಿಕಾರ್ಜುನ ಸ್ವಾಮೀಜಿ, ಚಿಲುಮೆ ಮಠಾಧೀಶ ಜಯದೇವ ಸ್ವಾಮೀಜಿ ಸೇರಿದಂತೆ ತಾಲೂಕಿನ ಎಲ್ಲಾ ಮಠಾಧೀಶರು ಸಾನ್ನಿಧ್ಯ ವಹಿಸುವರು. ಜತೆಗೆ ಜಿಲ್ಲಾ ಉಸ್ತುವಾರಿ ಸಚಿವ ಮಂಜು, ಜಿ.ಪಂ. ಸದಸ್ಯರು, ತಾ.ಪಂ. ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು, ಪಪಂ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರು, ಎಲ್ಲಾ ಸಮಾಜದ ಪ್ರಮುಖರು ಪಾಲ್ಗೊಳ್ಳುವರು ಎಂದು ತಿಳಿಸಿದರು.

ಧಾರ್ಮಿಕ ಕಾರ್ಯಕ್ರಮದ ಬಳಿಕ ದೊಡ್ಡ ಮಠದಲ್ಲಿ ಪ್ರಸಾದ ವಿನಿಯೋಗ ಇರುತ್ತದೆ. ಎಲ್ಲಾ ಅಧಿಕಾರಿ ವರ್ಗದವರು, ಸಂಘ ಸಂಸ್ಥೆಗಳು ಹಾಗೂ ಎಲ್ಲಾ ಕೋಮಿನ ಮತ ಬಾಂಧವರು ಸಕ್ರಿಯವಾಗಿ ಭಾಗವಹಿಸಿ, ಈ ಐತಿಹಾಸಿಕ ಜ್ಯೋತಿ ಯಾತ್ರೆಗೆ ಭಕ್ತಿ ಪೂರ್ವಕ ಗೌರವ ಸಲ್ಲಿಸಬೇಕೆಂದು ಮನವಿ ಮಾಡಿದರು.

ಅಖಿಲ ಭಾರತ ವೀರಶೈವ ಮಹಾಸಭೆ ಪ್ರಮುಖರಾದ ಯೋಗೇಶ್, ಷಡಕ್ಷರಿ, ವಿರೂಪಾಕ್ಷ, ಚಂದ್ರಶೇಖರ್, ಲಿಂಗರಾಜು, ಚನ್ನವೀರಪ್ಪ, ವೀರೇಶ್, ಜಗದೀಶ್, ಪರಮೇಶ್, ಲೋಕೇಶ್ ಇತರರು ಹಾಜರಿದ್ದರು.

# ಭಕ್ತಾದಿಗಳಿಗೆ ಸ್ಪಂದಿಸುತ್ತಿರುವ ಸುತ್ತೂರು ಮಠ



ನುಗ್ಗೇಹಳ್ಳಿ : ಸುತ್ತೂರು ಮಠದ ಡಾ. ಶಿವರಾತ್ರಿ ರಾಜೇಂದ್ರ ಸ್ವಾಮೀಜಿಯವರ ಜನ್ಮ ಶತಮಾನೋತ್ಸವದ ಜ್ಯೋತಿ ಯಾತ್ರೆಯ ಮೂಲಕ ರಾಜ್ಯಾದ್ಯಂತ ಸಂಚರಿಸಿ ಜನರಲ್ಲಿ ಭಕ್ತಿ ಭಾವನೆ ಮೂಡಿಸುವ ಪ್ರಯತ್ನ ಮಾಡುತ್ತಿದೆ ಎಂದು ಶಾಸಕ ಸಿ.ಎನ್.ಬಾಲಕೃಷ್ಣ ತಿಳಿಸಿದರು.

ಸುತ್ತೂರು ಮಠದ ಡಾ. ಶಿವರಾತ್ರಿ ರಾಜೇಂದ್ರ ಸ್ವಾಮೀಜಿಯವರ ಜನ್ಮ ಶತಮಾನೋತ್ಸವದ ಅಂಗವಾಗಿ ಪ್ರಸಿದ್ಧ ನಾಗರ ನವಿಲೆ ನಾಗೇಶ್ವರ ಸ್ವಾಮಿ ದೇವಾಲಯದ ಹತ್ತಿರ ಆಗಮಿಸಿದ ಜ್ಯೋತಿ ಯಾತ್ರೆಯ ಸ್ವಾಗತ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಇಂದು ಜನರ ಬದುಕಿಗೆ ಶಾಂತಿ, ನೆಮ್ಮದಿ ಬೇಕಾಗಿದೆ. ಸುತ್ತೂರು ಮಠ ಮೈಸೂರಿನಲ್ಲಿ ದಕ್ಷಿಣ ಭಾರತದಲ್ಲೆ ದೊಡ್ಡ ಆಸ್ಪತ್ರೆ ತೆರೆದು ಉಚಿತ ಆರೋಗ್ಯ ಸೌಲಭ್ಯ ನೀಡುತ್ತಿದೆ. ದೇಶದಾದ್ಯಂತ 350 ಕ್ಕೂ ಹೆಚ್ಚು ವಿದ್ಯಾಮಂದಿರಗಳ ಸೇವಾ ಸಂಸ್ಥೆಗಳನ್ನು ತೆರೆದು ಲಕ್ಷಗಟ್ಟಲೆ ವಿದ್ಯಾರ್ಥಿಗಳಿಗೆ ಶಿಕ್ಷಣ ವ್ಯವಸ್ಥೆ ಮಾಡಿದೆ. 15 ಸಾವಿರ ವಿದ್ಯಾರ್ಥಿಗಳಿಗೆ ಉಚಿತ ಪ್ರಸಾದ, ವಸತಿ, ಶಿಕ್ಷಣ ಸೌಲಭ್ಯ ನೀಡಿ, ಕೃಷಿ ಕ್ಷೇತ್ರಕ್ಕೂ ಹೆಚ್ಚು ಗಮನ ನೀಡಿದೆ. ಮಠಕ್ಕೆ ಬರುವ ಭಕ್ತರ ಕಷ್ಟ ಸುಖ ಗಳಿಗೆ ಸ್ಪಂದಿಸುತ್ತಿದೆ ಎಂದರು.

ಈಗಿನ ಶಿವರಾತ್ರಿ ರಾಜೇಂದ್ರ ಸ್ವಾಮೀಜಿಯವರು ಶಿಕ್ಷಣವೇ ಪ್ರಗತಿಯ ದಾರಿ ಎಂದು ಹೇಳಿ ಇನ್ನೂ ಅನೇಕ ಯೋಜನೆ ಕಾರ್ಯರೂಪಕ್ಕೆ ತರಲು ಶ್ರಮಿಸುತ್ತಿರುವುದು ಶ್ರೀ ಗಳ ದೊಡ್ಡ ಸಾಧನೆ ಎಂದು ತಿಳಿಸಿದರು.

ತಿಪಟೂರಿನಿಂದ ಆಗಮಿಸಿದ ಸುತ್ತೂರು ಶ್ರೀಗಳ ಜ್ಯೋತಿ ಯಾತ್ರೆಯ ರಥವನ್ನು ಶಾಸಕ ಸಿ.ಎನ್ ಬಾಲಕೃಷ್ಣ ಅವರ ಮುಖಂಡತ್ವದಲ್ಲಿ ಸ್ವಾಗತಿಸಿ ಪುತ್ಥಳಿಗೆ ಮಾಲಾರ್ಪಣೆ ಮಾಡಲಾಯಿತು. ಅಖಿಲ ಭಾರತ ವೀರಶೈವ ಮಹಾಸಭಾದ ತಾಲೂಕು ಘಟಕದ ಅಧ್ಯಕ್ಷ ಎನ್.ಪರಮೇಶ್, ರಾಜ್ಯ ಪತ್ರಕರ್ತರ ಸಂಘದ ಉಪಾಧ್ಯಕ್ಷ ಶಿವಾನಂದ ತಗಡೂರ್, ಜೆ.ಡಿ.ಎಸ್ ತಾ. ಅಧ್ಯಕ್ಷ ದೇವರಾಜೇಗೌಡ, ರಥದ ಸಂಚಾಲಕ ಪಂಚಾಕ್ಷರಿ, ಚ.ನ ಆಶೋಕ್, ಹೆಚ್.ಬಿ ಶಿವಣ್ಣ, ಎನ್. ಬಸವರಾಜು, ರೇಖಾ ಗಿರೀಶ್, ಅನಿತಾ ಪರಮೇಶ್, ಇತರರು ಇದ್ದರು.

PRINCIPAL
S.S. Institute of Education
26, SAKALESHPUR-573 134
Hassan Dist

ಉದಯವಾಣಿ 4/8/2016 P/2

## ಉದ್ಘಾಟನೆ...



ಸಕಲೇಶಪುರದಲ್ಲಿ ಮಲೆನಾಡು ವೀರಶೈವ ಸಮಾಜ ಹಾಗೂ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಸಹಯೋಗದೊಂದಿಗೆ ಹಮ್ಮಿಕೊಳ್ಳಲಾಗಿದ್ದ ಶಿವರಾತ್ರಿ ರಾಜೇಂದ್ರ ಜ್ಯೋತಿಯಾತ್ರೆ ಸ್ವಾಗತ ಕಾರ್ಯಕ್ರಮವನ್ನು ಕಲ್ಮಠದ ಮಹಂತ ಸ್ವಾಮೀಜಿ ಉದ್ಘಾಟಿಸಿದರು.

PRINCIPAL
J.S.S. Institute of Education
P.B. 26, SAKALESHPUR-573 134
Hassan Dist


ಜನತಾ ಮಾಧ್ಯಮ 4/8/16

ಜನತಾ ಮಾಧ್ಯಮ

# ಶಿವರಾತ್ರಿ ರಾಜೇಂದ್ರ ಜ್ಯೋತಿ ಯಾತ್ರೆಗೆ ಅದ್ದೂರಿ ಸ್ವಾಗತ

ಸಕಲೇಶಪುರ: ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರ ಜನ್ಮ ಶತ ಮಾನೋತ್ಸವದ ಅಂಗವಾಗಿ ನಡೆಯುತ್ತಿರುವ ಜ್ಯೋತಿಯಾತ್ರೆ ಬುಧವಾರ ಪಟ್ಟಣ ಪ್ರವೇಶಿಸಿತು. ಮಲೆನಾಡು ವೀರಶೈವ ಸಮಾಜ ಹಾಗೂ ಅಂಗ ಸಂಸ್ಥೆಗಳು ಮತ್ತು ಜೆಎಸ್‌ಎಸ್ ಶಿಕ್ಷಣ ಸಂಸ್ಥೆ ವತಿಯಿಂದ ಯಾತ್ರೆಗೆ ಅದ್ದೂರಿ ಸ್ವಾಗತ ನೀಡಲಾಯಿತು.

ಇಲ್ಲಿನ ಸಕಲೇಶ್ವರಸ್ವಾಮಿ ದೇವಸ್ಥಾನ ಬಳಿಯಿಂದ ಉತ್ಸವ ಹೊರಟ ಜ್ಯೋತಿ ಯಾತ್ರೆಗೆ ಶಾಸಕ ಎಚ್.ಕೆ. ಕುಮಾರಸ್ವಾಮಿ ಚಾಲನೆ ನೀಡಿದರು. ಜೆಎಸ್‌ಎಸ್ ಶಿಕ್ಷಣ ಸಂಸ್ಥೆಯ ಅಧಿಕಾರಿಗಳು, ಸಿಬ್ಬಂದಿ, ವಿದ್ಯಾರ್ಥಿಗಳು, ವೀರಶೈವ ಸಮೂಹದ ವಿವಿಧ ಸಂಘ ಸಂಸ್ಥೆ-ಪ್ರತಿನಿಧಿಗಳು ಹಾಗೂ ಸಾರ್ವಜನಿಕ ಭಕ್ತಾದಿಗಳು ಮೆರವಣಿಗೆ ಯುದ್ದಕ್ಕೂ ಸ್ವಾಮೀಜಿ ಅವರಿಗೆ ಜಯ ಘೋಷ ಹಾಕುತ್ತಾ ಸಾಗಿದರು. ಉತ್ಸವದಲ್ಲಿ ವಿವಿಧ ಜಾನಪದ ಕಲಾ ತಂಡಗಳು, ಮಂಗಳ ವಾದ್ಯ ವೃಂದಗಳು ಮತ್ತಷ್ಟು ಕಳೆ ತಂದುಕೊಟ್ಟಿತ್ತು. ಉತ್ಸವ ಗುರುವೇಗೌಡ ಕಲ್ಯಾಣ ಮಂಟಪ ಸಮೀಪಿಸುತ್ತಿದ್ದಂತೆ



ಪಟಾಕಿಗಳನ್ನು ಸಿಡಿಸಲಾಯಿತು. ಮಹಿಳೆಯರು ಪೂರ್ಣ ಕುಂಭ, ಆರತಿಯೊಂದಿಗೆ ಸ್ವಾಗತಿಸಿದರು.

ನಂತರ ಗುರುವೇಗೌಡ ಕಲ್ಯಾಣ ಮಂಟಪದಲ್ಲಿ ನಡೆದ ಸಭಾ ಕಾರ್ಯಕ್ರಮವನ್ನು ಉಪವಿಭಾಗಾಧಿಕಾರಿ ಪಿ.ಶಿವರಾಜ್ ಅವರು ಉದ್ಘಾಟಿಸಿ ಮಾತನಾಡಿ, ಮಠಗಳು ಸಂಕೋಲೆಗಳಿಲ್ಲದ ಸೇವಾ ಮಂದಿರಗಳಾಗಿವೆ. ಜಾತಿ, ಧರ್ಮ, ಪಂಗಡಗಳ ಎಲ್ಲೆ ಇಲ್ಲದೆ ಸಮಾನತಾವಾದದ ಧ್ಯೇಯದೊಂದಿಗೆ ನಡೆಯುವ ಮಠಮಾನ್ಯಗಳು ನಿಜವಾದ ಸೇವಾ ಮಂದಿರಗಳಾಗಿದೆ ಎಂದರು.

ಸೇವೆ, ಅರ್ಪಣಾ ಮನೋ ಭಾವದ ನೆಲೆಗಟ್ಟಿನಲ್ಲಿ ನಡೆಯುತ್ತಿರುವ ಕಾರ್ಯಕ್ರಮಗಳಿಗೆ ಯಾವುದೇ ಚೌಕಟ್ಟಿಲ್ಲದೆ ಪ್ರತಿಯೊಬ್ಬರೂ ಭಾಗವಹಿಸಬಹುದು. ಮೈಸೂರು ಭಾಗಕ್ಕೆ ಸೀಮಿತವಾಗಿದ್ದ ಸಣ್ಣ ಮಠ ಈಗ ವಿಶ್ವಕ್ಕೆ ಬೆಳಕು ನೀಡುವಷ್ಟು ಎತ್ತರಕ್ಕೆ ಬೆಳೆದಿದೆ. ಈ ಸಾಧನೆಯ ಹಿಂದೆ ಶ್ರೀಗಳ ಪರಿಶ್ರಮ, ಅರ್ಪಣಾ ಮನೋಭಾವ ಕಾರಣವಾಗಿದೆ. ಮಠದ ಆಶ್ರಯ... ನಡೆಯುತ್ತಿರುವ ವಿದ್ಯಾ ಸಂಸ್ಥೆ... ಕಲಿಯುತ್ತಿರುವ ವಿದ್ಯಾರ್ಥಿಗಳು ಆ... ಪ್ರಾಯ ಭವಿಷ್ಯ ರೂಪಿಸಿಕೊ... ಶ್ರಮಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ಕೊಡ್ಲಿಪೇ... ಕಲ್ಮಠದ ಮಹಂತ ಸ್ವಾಮೀಜಿ, ಕಿರಿಕ... ಮಠದ ಸದಾಶಿವ ಸ್ವಾಮೀಜಿ ಸಾ... ವಹಿಸಿದ್ದರು. ಡಿವೈಎಸ್ಪಿ ಮಲ್ಲಿಕಾರ್ಜು... ಬುಳ್ಳಕ್ಕನವರ್, ಪುರಸಭೆ ಅಧ್ಯಕ್ಷೆ ಪುಷ್... ರಮೇಶ್, ತಾ.ಪಂ. ಅಧ್ಯಕ್ಷೆ ಚೈತ... ಉಪಾಧ್ಯಕ್ಷ ಮಂಜುನಾಥ್, ಮಲೆನಾ... ವೀರಶೈವ ಸಮಾಜದ ಅಧ್ಯಕ್ಷ ಎಚ್.... ಶಶಿಧರ್, ಬಿ.ಡಿ.ಬಸವಣ್ಣ, ವೀರಶ... ಯುವ ವೇದಿಕೆ ಅಧ್ಯಕ್ಷ ಎಚ್.ವಿ.ನರೇ... ಅಕ್ಕ ಮಹಾದೇವಿ ಮಹಿಳಾ ವೇದಿಕೆ ಅ... ಶ್ಯಾಮಲಾ, ಅಖಿಲ ಭಾರತ ವೀರಶೈ... ಮಹಾಸಭಾ ಜಿಲ್ಲಾಧ್ಯಕ್ಷ ರೋಹಿತ... ತಾಲ್ಲೂಕು ಅಧ್ಯಕ್ಷ ಯತೀಶ್, ಜೆಎಸ್‌ಎ... ಶಿಕ್ಷಣ ಸಂಸ್ಥೆಯ ಶಿವ ಸ್ವಾಮಿ, ಎಸ್.ಎನ... ನಾಗೇಂದ್ರ ಪ್ರಸಾದ್, ಆರ್.ಮಂಜುನಾಥ... ಮೊದಲಾದವರಿದ್ದರು.

PRINCIPAL
J.S.S. Institute of Education
P.B. 26, SAKALESHPUR-573 134
Hassan Dist

# ಜ್ಯೋತಿಯಾತ್ರೆಗೆ ಸಂಭ್ರಮದ ಸ್ವಾಗತ

ಪ್ರಜಾವಾಣಿ 6/8/16 P 3A

ಪ್ರಜಾವಾಣಿ ಚಿತ್ರ



ರಾಮನಾಥಪುರ ಪಟ್ಟಣಕ್ಕೆ ಶುಕ್ರವಾರ ಬೆಳಿಗ್ಗೆ ಬಂದ ಶಿವರಾತ್ರಿ ರಾಜೇಂದ್ರಮಹಾಸ್ವಾಮೀಜಿ ಅವರ ಜನ್ಮ ಶತಮಾನೋತ್ಸವದ ಜ್ಯೋತಿಯಾತ್ರೆಯನ್ನು ಸ್ವಾಗತಿಸಲಾಯಿತು

ಕೊಣನೂರು: ಜಗದ್ಗುರು ಸುತ್ತೂರು ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರ ಜನ್ಮ ಶತಮಾನೋತ್ಸವದ ಅಂಗವಾಗಿ ಪಟ್ಟಣಕ್ಕೆ ಬಂದ ಜ್ಯೋತಿಯಾತ್ರೆಯನ್ನು ವೀರಗಾಸೆ ಮತ್ತು ಕಲಾ ತಂಡಗಳೊಂದಿಗೆ ವಿಜೃಂಭಣೆಯಿಂದ ಸ್ವಾಗತಿಸಲಾಯಿತು.

ಮರವಣಿಗೆಯಲ್ಲಿ ನೂರಾರು ಭಕ್ತರು ಜ್ಯೋತಿಯಾತ್ರೆಯನ್ನು ಸ್ವಾಗತಿಸಿ, ಜಯಘೋಷ ಕೂಗುತ್ತಾ ಸಂಭ್ರಮಿಸಿದರು.

ಶುಕ್ರವಾರ ಬೆಳಿಗ್ಗೆ ಕೊಡಗು ಜಿಲ್ಲೆಯಿಂದ ಕೊಣನೂರಿಗೆ ಪ್ರವೇಶಿಸಿದ ಸಂದರ್ಭ ಜ್ಯೋತಿಯಾತ್ರೆಗೆ ಕೆಸವತ್ತೂರು ಸಿದ್ದಲಿಂಗೇಶ್ವರ ಮಠದ ಬಸವರಾಜೇಂದ್ರ ಸ್ವಾಮೀಜಿ ಮತ್ತು ಮಾಜ ಶಾಸಕ ಎ.ಟಿ ರಾಮಸ್ವಾಮಿ ಮಾಲಾರ್ಪಣೆ ಮಾಡಿದರು.

ರಾಮನಾಥಪುರ ಪಟ್ಟಣದಲ್ಲೂ ಜ್ಯೋತಿಯಾತ್ರೆಯನ್ನು ಸಂಭ್ರಮದಿಂದ ಸ್ವಾಗತಿಸಲಾಯಿತು. ವೀರಗಾಸೆ, ಮಂಗಳವಾದ್ಯದೊಂದಿಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಯಾತ್ರೆಯ ಮೆರವಣಿಗೆ ಮಾಡಲಾಯಿತು.

ತಾಲ್ಲೂಕು ಪಂಚಾಯಿತಿ ಸದಸ್ಯ ಇಮ್ರಾನ್ ಖಾನ್, ಮಾಜಿ ಸದಸ್ಯ ಶ್ರೀನಿವಾಸಮೂರ್ತಿ, ಪುಟ್ಟಸ್ವಾಮಪ್ಪ, ಸುಂದ್ರೇಶ್, ರವಿಕುಮಾರ್, ನೂರಾರು ಭಕ್ತರು ಇದ್ದರು

PRINCIPAL
J.S.S. Institute of Education
P.B. 26, SAKALESHPUR-573 134
Hassan Dist

# ಸಮಾನತೆಗಾಗಿ ಬದುಕು ಮುಡುಪಿಟ್ಟ ಸ್ವಾಮೀಜಿ

ಪ್ರಜಾವಾಣಿ ವಾರ್ತೆ /18/9/16 P-3A



ಸಕಲೇಶಪುರದಲ್ಲಿ ಶನಿವಾರ ನಡೆದ ಸುತ್ತೂರು ಮಠದ ಡಾ. ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಜನ್ಮ ಶತಮಾನೋತ್ಸವದಲ್ಲಿ ಬಾಗೆ ಜೆಎಸ್‌ಎಸ್ ಪಬ್ಲಿಕ್ ಶಾಲೆಯ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು

ಸಕಲೇಶಪುರ: ಸ್ವಾರ್ಥವನ್ನು ತ್ಯಜಿಸಿ, ಸಮಾನತೆಗಾಗಿಯೇ ಇಡೀ ಬದುಕನ್ನು ಮುಡುಪಾಗಿಟ್ಟ ಮಹಾನ್ ವ್ಯಕ್ತಿಗಳನ್ನು ಸಮಾಜ ಸ್ಮರಿಸಲಿದೆ ಎಂದು ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಸಂಯೋಜನಾಧಿಕಾರಿ ಜೆ.ಎಲ್. ತ್ರಿಪುರಾಂತಕ ಹೇಳಿದರು.

ಇಲ್ಲಿಯ ಗುರುವೇಗೌಡ ಕಲ್ಯಾಣ ಮಂಟಪದಲ್ಲಿ ಶನಿವಾರ ಏರ್ಪಡಿಸಿದ್ದ ಡಾ.ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಯವರ ಜನ್ಮಶತಮಾನೋತ್ಸವದಲ್ಲಿ ಮಾತನಾಡಿದರು.

ಸಮಾಜಕ್ಕೆ ಜ್ಞಾನದ ಬೆಳಕು ಚೆಲ್ಲುವವರು ಗುರುಗಳೆನಿಸಿ ಕೊಳ್ಳುತ್ತಾರೆ, ಈ ನಿಟ್ಟಿನಲ್ಲಿ ಡಾ. ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿ ಸುತ್ತೂರು ಶ್ರೀಮಠದಲ್ಲಿ ವಿದ್ಯಾಭ್ಯಾಸದೊಂದಿಗೆ ಸಂಸ್ಕಾರ, ಸಂಸ್ಕೃತಿಯನ್ನು ಕಲಿಸಿಕೊಡಲು ಅಡಿಪಾಯ ಹಾಕಿದ್ದಾರೆ. ಅದರ ನೆರಳಿನಲ್ಲಿಯೇ ಇಂದಿಗೂ ಸಹ ಶಿಕ್ಷಣದ ಕ್ರಾಂತಿ ನಡೆಯುತ್ತಿದೆ ಎಂದರು.

ಶಾಸಕ ಎಚ್.ಕೆ.ಕುಮಾರಸ್ವಾಮಿ ಕಾರ್ಯಕ್ರಮ ಉದ್ಘಾಟಿಸಿದರು.

ಕಿರಿಕೊಡ್ಲಿ ಮಠದ ಸದಾಶಿವ ಸ್ವಾಮಿ ಹಾಗೂ ಕಲ್ಮಠದ ಮಹಾಂತ ಸ್ವಾಮಿ ಆಶೀರ್ವಚನ ನೀಡಿದರು.

ಪುರಸಭಾ ಅಧ್ಯಕ್ಷೆ ಪುಷ್ಪಾವತಿ, ಗುರುವೇಗೌಡ ಕಲ್ಯಾಣ ಮಂಟಪ ಅಭಿವೃದ್ಧಿ ಸಮಿತಿ ಅಧ್ಯಕ್ಷ ಬಿ.ಡಿ. ಬಸವಣ್ಣ, ಮಲೆನಾಡು ವೀರಶೈವ ಸಮಾಜದ ಅಧ್ಯಕ್ಷ ಎಚ್.ಎಂ. ಶಶಿಧರ್, ಕಾರ್ಯದರ್ಶಿ ಧರ್ಮಪ್ಪ, ಎಂ.ಎನ್. ಶಿವಪ್ರಸಾದ್, ಜೆಎಸ್‌ಎಸ್ ಬಿಇಡಿ ಕಾಲೇಜು ಪ್ರಾಂಶುಪಾಲ ಡಾ. ಎನ್.ಎಸ್. ಸುರೇಶ್, ಬಾಗೆ ಜೆಎಸ್‌ಎಸ್ ಪಬ್ಲಿಕ್ ಶಾಲೆ ಪ್ರಾಂಶುಪಾಲ ಬಿ. ಮಧುಕುಮಾರ್, ಪ್ರೌಢಶಾಲೆ ಮುಖ್ಯ ಶಿಕ್ಷಕ ರೇಣುಕಾರಾಧ್ಯ, ಕಾಫಿ ಬೆಳೆಗಾರ ವೈ.ಎಸ್. ಗಿರೀಶ್, ವೀರಶೈವ ಯುವ ವೇದಿಕೆ ಅಧ್ಯಕ್ಷ ಅರೇಕೆರೆ ನರೇಶ್, ಅಕ್ಕಮಹಾದೇವಿ ಮಹಿಳಾ ವೇದಿಕೆ ಅಧ್ಯಕ್ಷೆ ಶ್ಯಾಮಲಾ ನಾಗೇಂದ್ರ, ದೈಹಿಕ ಶಿಕ್ಷಕ ಕಾಳೇಗೌಡ ಇದ್ದರು.

ಕಾರ್ಯಕ್ರಮಕ್ಕೂ ಮುನ್ನ ಜನ್ಮ ಶತಮಾನೋತ್ಸವ ಆಚರಣೆ ಪ್ರಯುಕ್ತ ಕೌಡಹಳ್ಳಿ ಎನ್.ಕೆ. ಗಣಪಯ್ಯ ರೋಟರಿ ಶ್ರವಣ ದೋಷವುಳ್ಳ ಶಾಲೆ ಮಕ್ಕಳಿಗೆ ಮತ್ತು ಕ್ರಾಫರ್ಡ್ ಸರ್ಕಾರಿ ಆಸ್ಪತ್ರೆ ರೋಗಿಗಳಿಗೆ ಹಣ್ಣು-ಸಿಹಿ ಹಂಚಿದರು. ಪ್ರಮುಖ ಬೀದಿಗಳಲ್ಲಿ ಶ್ರೀಗಳ ಭಾವಚಿತ್ರ ಮೆರವಣಿಗೆ ನಡೆಸಲಾಯಿತು.

---

ವಿಜಯವಾಣಿ 18/9/16 P-2

# ಪ್ರಗತಿಗೆ ಜ್ಞಾನವೇ ಮೂಲ

**ವಿಜಯವಾಣಿ ಸುದ್ದಿಜಾಲ** ಸಕಲೇಶಪುರ

ಜ್ಞಾನವೇ ಮನುಷ್ಯನ ಪ್ರಗತಿಗೆ ಮೂಲ ಆಧಾರ ಎಂದು ಶಾಸಕ ಎಚ್.ಕೆ.ಕುಮಾರಸ್ವಾಮಿ ಹೇಳಿದರು. ಪಟ್ಟಣದ ಕಲ್ಯಾಣಮಂಟಪವೊಂದದಲ್ಲಿ ಶನಿವಾರ ಜೆಎಸ್‌ಎಸ್ ವಿದ್ಯಾಸಂಸ್ಥೆ ಹಾಗೂ ಮಲೆನಾಡು ವೀರಶೈವ ಸಮಾ ಜದ ವತಿಯಿಂದ ಆಯೋಜಿಸಿದ್ದ ಶಿವರಾತ್ರಿ ರಾಜೇಂದ್ರ ಶ್ರೀಗಳ ಜನ್ಮಶತಮಾನೋತ್ಸವ ಕಾರ್ಯಕ್ರಮ ಉದ್ಘಾ ಟಿಸಿ



ಮಾತನಾಡಿದರು. ಜ್ಞಾನವಿಲ್ಲದೆ ಯಾವುದೆ ಪ್ರಗತಿ ಸಾಧ್ಯವಿಲ್ಲ. ಈ ಸತ್ಯವನ್ನು ಅಂದೆ ಅರಿತಿದ್ದ ಶ್ರೀಗಳು ಕುಗ್ರಾಮಗಳಲ್ಲಿ ಶಾಲೆಗಳನ್ನು ಆರಂಭಿಸಿ ಜ್ಞಾನ ನೀಡುವ ಕಾರ್ಯ ಆರಂಭಿಸಿದರು. ಹೀಗಾಗಿ ಲಕ್ಷಾಂತರ ಕುಟುಂಬ ಸಾಕ್ಷರತೆ ಸಾಧಿಸಲು ಸಾಧ್ಯವಾಯಿತು ಎಂದರು. ಕಿರಿಕೊಡ್ಲಿ ಮಠದ ಶ್ರೀ ಸದಾ ಶಿವ ಸ್ವಾಮೀಜಿ ಮಾತನಾಡಿ, ದೇಶದ ಲಕ್ಷಾಂತರ ಯುವಕರಿಗೆ ಶಿಕ್ಷಣದ ಶಕ್ತಿ ತುಂಬಿ ದೇಶದ ಶಕ್ತಿ ಯನ್ನಾಗಿ ಮಾಡಿದ ಕೀರ್ತಿ ಸುತ್ತೂರು ಮಠಕ್ಕೆ ಸಲ್ಲುತ್ತದೆ ಎಂದರು. ಕೊಡ್ಲಿಪೇಟೆ ಕಲ್ಮಠದ ಮಹಾಂತ ಸ್ವಾಮೀಜಿ, ತ್ರಿಪುರಾಂತಕ ಮಾತನಾಡಿದರು. ರಾಜೇಂದ್ರ ಶ್ರೀಗಳ ಭಾವಚಿತ್ರವನ್ನು ಮೆರವಣಿಗೆ ಮಾಡಲಾಯಿತು.

PRINCIPAL
J.S.S. Institute of Education
P.B. 26, SAKALESHPUR-573 134
Hassan Dist



ಸಕಲೇಶಪುರ ತಾಲ್ಲೂಕಿನ ಬ್ಯಾಕರವಳ್ಳಿ ಗ್ರಾಮದಲ್ಲಿ ಜಲಸಂರಕ್ಷಣೆ ಯೋಜನೆ ಅಡಿಯಲ್ಲಿ ಒದಯ್ಯನಕೆರೆ ಹೂಳು ತೆಗೆಯುವ ಕಾರ್ಯಕ್ಕೆ ಶಾಸಕ ಎಚ್.ಕೆ. ಕುಮಾರಸ್ವಾಮಿ ಬುಧವಾರ ಚಾಲನೆ ನೀಡಿದರು

# ಕೆರೆಗೆ ನೀರು ತುಂಬಿಸಲು ಸರ್ಕಾರದೊಂದಿಗೆ ಸಹಕರಿಸಿ

ಸಕಲೇಶಪುರ: ಗ್ರಾಮಗಳಲ್ಲಿರುವ ಕೆರೆ ಕಟ್ಟೆಗಳ ಹೂಳು ತೆಗೆದು ಅಭಿವೃದ್ಧಿಗೊಳಿಸುವ ಮಹತ್ತರ ಕಾರ್ಯದಲ್ಲಿ ಗ್ರಾಮಸ್ಥರು ಸರ್ಕಾರವನ್ನು ಸಂಪೂರ್ಣವಾಗಿ ಅವಲಂಬಿಸದೆ ಹಿಂದಿನ ತಲೆಮಾರಿನವರಂತೆ ಸರ್ಕಾರದೊಂದಿಗೆ ತಾವೂ ಸಹ ಕೈಜೋಡಿಸಿದರೆ ಎಲ್ಲಾ ಗ್ರಾಮಗಳ ಕೆರೆಗಳಲ್ಲಿ ಪುನಃ ನೀರು ನಿಲ್ಲಿಸುವುದಕ್ಕೆ ಸಾಧ್ಯವಿದೆ ಎಂದು ಶಾಸಕ ಎಚ್.ಕೆ. ಕುಮಾರಸ್ವಾಮಿ ಹೇಳಿದರು.

ತಾಲ್ಲೂಕು ಆಡಳಿತ, ಬ್ಯಾಕರವಳ್ಳಿ ಗ್ರಾ.ಪಂ., ಜೆ.ಎಸ್.ಎಸ್. ಬಿ.ಇಡಿ ಕಾಲೇಜು ಹಾಗೂ ಗ್ರಾಮಸ್ಥರ ನೆರವಿನೊಂದಿಗೆ ತಾಲ್ಲೂಕಿನಲ್ಲಿಯೇ ಮೊದಲ ಬಾರಿಗೆ ಬ್ಯಾಕರವಳ್ಳಿ ಗ್ರಾಮದ ಒದಯ್ಯನಕೆರೆ ಹೂಳೆತ್ತುವ ಕಾರ್ಯಕ್ಕೆ ಬುಧವಾರ ಚಾಲನೆ ನೀಡಿ ಮಾತನಾಡಿದರು. ಹಿಂದೆ ಜನರ ಸಹಕಾರದೊಂದಿಗೆ (ಪಿಪಿಪಿ) ಸರ್ಕಾರ ಶೇ. 60 ಹಾಗೂ ಸಾರ್ವಜನಿಕರಿಂದ ಶೇ. 40ರ ಖರ್ಚಿನಲ್ಲಿ ಕೆರೆ ಕಟ್ಟೆಗಳ ಅಭಿವೃದ್ಧಿಗೊಳಿಸಲಾಗುತ್ತಿತ್ತು. ಇತ್ತೀಚಿನ ವರ್ಷಗಳಿಂದ ಜನರ ಸಹಭಾಗಿತ್ವ ಸಂಪೂರ್ಣವಾಗಿ ಇಲ್ಲವಾಗಿ, ಎಲ್ಲಾ ಸರ್ಕಾರವನ್ನೇ ಅವಲಂಭಿಸುತ್ತಿರುವುದು ಕಂಡು ಬಂದಿದೆ.



ಈ ವ್ಯವಸ್ಥೆಯಲ್ಲಿ ಸಾಕಷ್ಟು ಬದಲಾವಣೆ ಆಗಬೇಕು ಎಂದರು.

ಪಶ್ಚಿಮಘಟ್ಟ ಪ್ರದೇಶದಲ್ಲಿ ಕಳೆದ ಒಂದೂವರೆ ದಶಕದಿಂದ ವಿವಿಧ ಕಾರಣಗಳಿಂದ ಕಾಡು ಹಂತ ಹಂತವಾಗಿ ಕಡಿಮೆ ಆಗುತ್ತಿರುವ ಪರಿಣಾಮ ಮಲೆನಾಡಿನಲ್ಲಿಯೇ ಈ ಬಾರಿ ಬರ ಬಂದಿದೆ. ಸಾರ್ವಜನಿಕರು ಹೆಚ್ಚು ಮರಗಳನ್ನು ಬೆಳೆಸುವ ಜೊತೆಗೆ ಗ್ರಾಮಗಳಲ್ಲಿರುವ ಎಲ್ಲಾ ಕೆರೆಗಳನ್ನು ಅಭಿವೃದ್ಧಿಗೊಳಿಸಲು ಸರ್ಕಾರದೊಂದಿಗೆ ಕೈಜೋಡಿಸುವ ಅಗತ್ಯವಿದೆ ಎಂದರು.

ಉಪವಿಭಾಗಾಧಿಕಾರಿ ಪಿ. ಶಿವರಾಜ್ ಮಾತನಾಡಿ, ಬ್ಯಾಕರವಳ್ಳಿ ಒದಯ್ಯನಕೆರೆ ಹೂಳು ತೆಗೆಯುವ ಮೂಲಕ ತಾಲ್ಲೂಕಿನಲ್ಲಿ ಜಲ ಸಂರಕ್ಷಣೆಗೆ ಮೊದಲ ಹೆಜ್ಜೆ ಇಡಲಾಗಿದೆ. ಎಲ್ಲಾ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಆಯಾಯ ಗ್ರಾಮ ಪಂಚಾಯಿತಿ ಜನ ಪ್ರತಿನಿಧಿಗಳು, ಅಧಿಕಾರಿಗಳು ಹಾಗೂ ಗ್ರಾಮಸ್ಥರು ಕೆರೆ ಹೂಳು ತೆಗೆದು ಅಭಿವೃದ್ಧಿಗೊಳಿಸಲು ಮುಂದೆ ಬರಬೇಕು. ಅದಕ್ಕೆ ಬೇಕಾದ ಎಲ್ಲಾ ಸಹಕಾರವನ್ನು ಶಾಸಕ ಎಚ್.ಕೆ. ಕುಮಾರಸ್ವಾಮಿ ಅವರ ನೇತೃತ್ವದಲ್ಲಿ ತಾಲ್ಲೂಕು ಆಡಳಿತ ನೀಡಲು ಸದಾ ಸಿದ್ಧವಿದೆ. ಇದೊಂದು ದೊಡ್ಡ ಮಟ್ಟದ ಕ್ರಾಂತಿಯಾಗಬೇಕು ಎಂದರು.

ಬ್ಯಾಕವರಳ್ಳಿ ಗ್ರಾ.ಪಂ. ಅಧ್ಯಕ್ಷ ವಿಜಯ್‌ಕುಮಾರ್. ಉಪಾಧ್ಯಕ್ಷೆ ಗೀತಮ್ಮ, ಪಿಡಿಓ ಆದಿತ್ಯ, ತಾ.ಪಂ. ಸದಸ್ಯ ಚಂದ್ರಮತಿ, ಎಪಿಎಂಸಿ ಸದಸ್ಯ ಬಾಗರಹಳ್ಳಿ ಪುಟ್ಟಸ್ವಾಮಿಗೌಡ, ಪಿಎಸ್ಐ ಜಗದೀಶ್, ಲಯನ್ಸ್ ಸಂಸ್ಥೆಯ ಅಧ್ಯಕ್ಷ ಸಂಜಿತ್ ಶೆಟ್ಟಿ ಕೌಡಹಳ್ಳಿ ಜೆಎಸ್‌ಎಸ್ ಬಿಇಡಿ ಕಾಲೇಜಿನ ಪ್ರಾಂಶುಪಾಲ ಡಾ. ಎನ್.ಎಸ್. ಸುರೇಶ್, ಅಧೀಕ್ಷಕ ಮಂಜುನಾಥ್, ಪರಿಸರವಾದಿಗಳಾದ ಕಿಶೋರ್‌ಕುಮಾರ್, ಹಾ.ನ. ಪ್ರಸನ್ನ, ಬ್ಯಾಕರವಳ್ಳಿ ಜಯಣ್ಣ, ಬ್ಯಾಕರವಳ್ಳಿ ಮುರಾರ್ಜಿ ವಸತಿ ಶಾಲೆಯ ಪ್ರಾಂಶುಪಾಲ ಶತೇಂದ್ರ ಕುಮಾರ್ ಇದ್ದರು.

ಇದಕ್ಕೂ ಮೊದಲು ಬ್ಯಾಕರವಳ್ಳಿ ಮುರಾರ್ಜಿ ವಸತಿ ಶಾಲೆಯ ಜಲ ಸಂರಕ್ಷಣೆ ಕುರಿತ ಅಮೀರ್‌ಖಾನ್ ಪಾನಿ ಫೌಂಡೇಷನ್ ಸಾಧನೆ ಕುರಿತ ಸಾಕ್ಷ್ಯ ಚಿತ್ರವನ್ನು ಜೆಎಸ್‌ಎಸ್ ಪ್ರಶಿಕ್ಷಣಾರ್ಥಿಗಳು ಹಾಗೂ ಗ್ರಾಮಸ್ಥರಿಗೆ ಪ್ರದರ್ಶಿಸಲಾಯಿತು. ನಂತರ ಈ ಕುರಿತು ಪ್ರಶಿಕ್ಷಣಾರ್ಥಿಗೊಳೊಂದಿಗೆ ಸಂವಾದ ನಡೆಯಿತು.

Printed and Published by Dr. A.C. Munivenkategowda & Owned By Snehitaru Nirvahane, Janatha Clinic
Karnataka, Published From Snehitaru NirvahanePrintingPress, Janatha Clinic, R.C. Road
http://janathamadhyama.epapertoday.com e-mail: jm_hsn @yah

ಗುರುವಾರ ಏ 18. 2017 P-4 ಜನತಾ ಮಾಧ್ಯಮ.

PRINCIPAL
J.S.S. Institute of Education
P.B. 26, SAKALESHPUR-573134

ವಿಜಯ ಕರ್ನಾಟಕ ಬುಧವಾರ 19 ಜುಲೈ 2017 P-11

# ಕೆರೆ ಹೂಳೆತ್ತುವ ಕಾರ್ಯಕ್ಕೆ ಚಾಲನೆ

**ವಿಕ ಸುದ್ದಿಲೋಕ** ಸಕಲೇಶಪುರ

ಕೆರೆಕಟ್ಟೆಗಳ ಅಭಿವೃದ್ಧಿಪಡಿಸುವ ಮಹತ್ತರ ಕಾರ್ಯಕ್ಕೆ ಜನರು ಸರಕಾರದೊಂದಿಗೆ ಕೈಜೋಡಿಸಿದರೆ ಬಹುತೇಕ ಗ್ರಾಮಗಳ ಐತಿಹಾಸಿಕ ಕೆರೆಗಳಲ್ಲಿ ಮತ್ತೆ ನೀರು ತುಂಬಿಸಲು ಸಾಧ್ಯ ಎಂದು ಶಾಸಕ ಎಚ್.ಕೆ. ಕುಮಾರಸ್ವಾಮಿ ಹೇಳಿದರು.

ತಾಲೂಕು ಆಡಳಿತ, ಬ್ಯಾಕರಹಳ್ಳಿ ಗ್ರಾಪಂ, ಜೆಎಸ್ ಎಸ್ ಬಿಇಡಿ ಕಾಲೇಜು ಮತ್ತು ಗ್ರಾಮಸ್ಥರು, ಬ್ಯಾಕರಹಳ್ಳಿ ಗ್ರಾಮದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಓದಯ್ಯನ ಕೆರೆ ಹೂಳೆತ್ತುವ ಕಾರ್ಯಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ''ಸರಕಾರದ ಇಂತಹ ಮಹತ್ವದ ಯೋಜನೆಗಳ ಅನುಷ್ಠಾನಕ್ಕೆ ಗ್ರಾಮಸ್ಥರ ಸಹಕಾರ ಅತಿ ಮುಖ್ಯ. ಈ ಹಿಂದೆ ಜನರ ಸಹಕಾರದೊಂದಿಗೆ ಸರಕಾರ ಶೇ.60 ಹಾಗೂ ಸಾರ್ವಜನಿಕರ ಶೇ.40 ಖರ್ಚಿನಲ್ಲಿ ಕೆರೆ ಕಟ್ಟೆಗಳನ್ನು ಅಭಿವೃದ್ಧಿಗೊಳಿಸಲಾಗುತ್ತಿತ್ತು. ಇದಕ್ಕೆ ಜನರ ಸಹಭಾಗಿತ್ವದ ಕೊರತೆ ಇತ್ತೀಚಿನ ದಿನಗಳಲ್ಲಿ ಕಂಡು ಬರುತ್ತಿದೆ. ಎಲ್ಲದಕ್ಕೂ ಸರಕಾರವನ್ನೆ ಅವಲಂಬಿಸುವ ಜನರ ಮನೋಭಾವ ಬದಲಾಗಬೇಕು,'' ಎಂದರು.

''ಕಳೆದ ಒಂದೂವರೆ ದಶಕದಿಂದ ಪಶ್ಚಿಮಘಟ್ಟ ಭಾಗದಲ್ಲಿ ನಾನಾ ಕಾರಣಗಳಿಂದ ಕಾಡು ಕಡಿಮೆಯಾಗುತ್ತಿದೆ. ಇದರ ಪರಿಣಾಮ ಮಲೆನಾಡಿನಲ್ಲಿ ಬರ ಪರಿಸ್ಥಿತಿ ಎದುರಿಸುವಂತಾಗಿದೆ. ಸಾರ್ವಜನಿಕರು ಹೆಚ್ಚು ಮರಗಳನ್ನು ಬೆಳೆಸುವುದರ ಜತೆಗೆ ಎಲ್ಲಾ ಕೆರೆಗಳನ್ನು ಅಭಿವೃದ್ಧಿಪಡಿಸಲು ಸರಕಾರದೊಂದಿಗೆ ಕೈಜೋಡಿಸಬೇಕು,'' ಎಂದರು.

ಉಪವಿಭಾಗಾಧಿಕಾರಿ ಪಿ. ಶಿವರಾಜು ಮಾತನಾಡಿ, ''ತಾಲೂಕಿನಲ್ಲಿ ಜಲ ಸಂರಕ್ಷಣೆಯ ಮೊದಲ ಹೆಜ್ಜೆಯಾಗಿ ಬ್ಯಾಕರಹಳ್ಳಿಯ ಓದಯ್ಯನ ಕೆರೆ ಹೂಳು ತೆಗೆಯುವ ಕಾರ್ಯಕ್ಕೆ ಗ್ರಾಮಸ್ಥರು ಸಹಕಾರ ನೀಡಿದ್ದಾರೆ. ಇದೆ ರೀತಿ ಎಲ್ಲಾ ಗ್ರಾಪಂ ವ್ಯಾಪ್ತಿಯ ಕೆರೆಗಳ ಅಭಿವೃದ್ಧಿಪಡಿಸಲು, ಆಯಾಯ ಗ್ರಾಮದ ಜನ ಪ್ರತಿನಿಧಿಗಳು, ಅಧಿಕಾರಿಗಳು ಮತ್ತು ಸಾರ್ವಜನಿಕರು ಮುಂದಾಗಬೇಕು,'' ಎಂದರು. ಗ್ರಾಪಂ ಅಧ್ಯಕ್ಷ ವಿಜಯಕುಮಾರ್, ಉಪಾಧ್ಯಕ್ಷೆ ಗೀತಮ್ಮ, ತಾಪಂ ಸದಸ್ಯೆ ಚಂದ್ರಮತಿ, ಗ್ರಾಪಂ ಪಿಡಿಒ ಆದಿತ್ಯ, ಎಪಿಎಂಸಿ ಸದಸ್ಯ ಪುಟ್ಟಸ್ವಾಮಿಗೌಡ, ಲಯನ್ಸ್ ಸಂಸ್ಥೆ ಅಧ್ಯಕ್ಷ ಸಂಜಿತ್ ಶೆಟ್ಟಿ, ಜೆಎಸ್‌ಎಸ್ ಬಿಇಡಿ ಕಾಲೇಜು ಪ್ರಾಂಶುಪಾಲ ಡಾ.ಎನ್.ಎಸ್. ಸುರೇಶ್, ಅಧೀಕ್ಷಕ ಮಂಜುನಾಥ್, ಪರಿಸರಪ್ರೇಮಿ ಹೊಂಗಡಹಳ್ಳ ಕಿಶೋರ್, ಹಾ.ನ.ಪ್ರಸನ್ನ, ಬ್ಯಾಕರಹಳ್ಳಿ ಜಯಣ್ಣ, ಬ್ಯಾಕರಹಳ್ಳಿ ಮುರಾರ್ಜಿ ವಸತಿ ಶಾಲೆ ಪ್ರಾಂಶುಪಾಲರ ಶತೇಂದ್ರಕುಮಾರ್ ಹಾಜರಿದ್ದರು.

ಇದಕ್ಕೂ ಮೊದಲು ಜಲ ಸಂರಕ್ಷಣೆ ಕುರಿತು ಬ್ಯಾಕರಹಳ್ಳಿ ಮೊರಾರ್ಜಿ ವಸತಿ ಶಾಲೆ ಮಕ್ಕಳು ಹಾಗೂ ಅಮೀರ್ ಖಾನ್ ದಾನಿ ಫೌಂಡೇಷನ್ ಕುರಿತು ಜೆಎಸ್ ಎಸ್ ಪ್ರಶಿಕ್ಷಣಾರ್ಥಿಗಳು ಸಾಕ್ಷ್ಯಚಿತ್ರ ಪ್ರದರ್ಶಿಸಿದರು. ನಂತರ ಸಂವಾದ ನಡೆಯಿತು.

ವಿಕ ಚಿತ್ರಲೋಕ



ಸಕಲೇಶಪುರ ತಾಲೂಕಿನ ಬ್ಯಾಕರಹಳ್ಳಿ ಗ್ರಾಮದಲ್ಲಿ ಜಲಸಂರಕ್ಷಣೆ ಯೋಜನೆಯಡಿಯಲ್ಲಿ ಹಮ್ಮಿಕೊಂಡ ಕೆರೆ ಹೂಳು ತೆಗೆಯುವ ಕಾರ್ಯಕ್ಕೆ ಶಾಸಕ ಎಚ್.ಕೆ.ಕುಮಾರಸ್ವಾಮಿ ಚಾಲನೆ ನೀಡಿದರು.

PRINCIPAL
J.S.S. Institute of Education
P.B. 26, SAKALESHPUR-573134
Hassan Dist.

ಪ್ರಜಾವಾಣಿ 20-5-2017 P-2

# ಕೆರೆಕಟ್ಟೆ ಅಭಿವೃದ್ಧಿಯ ಕಾರ್ಯಕ್ಕೆ ಕೈಜೋಡಿಸಲು ಕರೆ

## ಬ್ಯಾಕರವಳ್ಳಿ ಓದಯ್ಯನಕೆರೆ ಹೂಳೆತ್ತುವ ಕಾರ್ಯಕ್ಕೆ ಚಾಲನೆ

ಸಕಲೇಶಪುರ: ಕೆರೆ ಕಟ್ಟೆಗಳ ಅಭಿವೃದ್ಧಿ ಪಡಿಸುವ ಕಾರ್ಯಕ್ಕೆ ಜನರು ಕೈಜೋಡಿಸಿದರೆ ಬಹುತೇಕ ಗ್ರಾಮಗಳ ಕೆರೆಗಳಲ್ಲಿ ಮತ್ತೆ ನೀರು ತುಂಬಿಸಲು ಸಾಧ್ಯ ಎಂದು ಶಾಸಕ ಹೆಚ್.ಕೆ.ಕುಮಾರಸ್ವಾಮಿ ಹೇಳಿದರು.

ತಾಲ್ಲೂಕು ಆಡಳಿತ, ಬ್ಯಾಕರಹಳ್ಳಿ ಗ್ರಾಮ ಪಂಚಾಯಿತಿ, ಜೆಎಸ್ಎಸ್, ಬಿಇಡಿ ಕಾಲೇಜು ಮತ್ತು ಗ್ರಾಮಸ್ಥರು, ಬ್ಯಾಕರಹಳ್ಳಿ ಗ್ರಾಮದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಓದಯ್ಯನ ಕೆರೆ ಹೂಳೆತ್ತುವ ಕಾರ್ಯಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಸರ್ಕಾರ ಇಂತಹ ಮಹತ್ವದ ಯೋಜನೆಗಳ ಅನುಷ್ಠಾನಕ್ಕೆ ಗ್ರಾಮಸ್ಥರ ಸಹಕಾರ ಅತಿ ಮುಖ್ಯ. ಈ ಹಿಂದೆ ಜನರ ಸಹಕಾರದೊಂದಿಗೆ ಸರ್ಕಾರ ಶೇ.60 ಹಾಗೂ ಸಾರ್ವಜನಿಕರ ಶೇ.40 ಖರ್ಚಿನಲ್ಲಿ ಕೆರೆ ಕಟ್ಟೆಗಳನ್ನು ಅಭಿವೃದ್ಧಿಗೊಳಿಸಲಾಗುತ್ತಿತ್ತು. ಇದಕ್ಕೆ ಜನರ ಸಹಭಾಗಿತ್ವದ ಕೊರತೆ ಇತ್ತೀಚಿನ ದಿನಗಳಲ್ಲಿ ಕಂಡು ಬರುತ್ತಿದೆ. ಎಲ್ಲದಕ್ಕೂ ಸರಕಾರವನ್ನೇ ಅವಲಂಭಿಸುವ ಜನರ ಮನೋಭಾವ ಬದಲಾಗಬೇಕು ಎಂದರು.

ಪಶ್ಚಿಮಘಟ್ಟ ಭಾಗದಲ್ಲಿ ಕಳೆದ ಒಂದೂವರೆ ದಶಕದಿಂದ ನಾನಾ ಕಾರಣಗಳಿಂದ ಕಾಡು ಕಡಿಮೆಯಾಗುತ್ತಿದೆ. ಇದರ ಪರಿಣಾಮ ಮಲೆನಾಡಿನಲ್ಲಿ ಬರ ಪರಿಸ್ಥಿತಿ ಎದುರಿಸುವಂತಾಗಿದೆ. ಸಾರ್ವಜನಿಕರು ಹೆಚ್ಚು ಮರಗಳನ್ನು ಬೆಳೆಸುವುದರ ಜೊತೆಗೆ ಎಲ್ಲಾ ಕೆರೆಗಳನ್ನು ಅಭಿವೃದ್ಧಿಪಡಿಸಲು ಸರ್ಕಾರ ದೊಂದಿಗೆ ಕೈಜೋಡಿಸಬೇಕು ಎಂದರು.

ಉಪವಿಭಾಗಾಧಿಕಾರಿ ಪಿ. ಶಿವರಾಜು ಮಾತನಾಡಿ, ತಾಲ್ಲೂಕಿನಲ್ಲಿ ಜಲ ಸಂರಕ್ಷಣೆಯ ಮೊದಲ ಹೆಜ್ಜೆಯಾಗಿ ಬ್ಯಾಕರಹಳ್ಳಿಯ ಓದಯ್ಯನಕೆರೆ ಹೂಳುತೆಗೆಯುವ ಕಾರ್ಯಕ್ಕೆ ಗ್ರಾಮಸ್ಥರು ಸಹಕಾರ ನೀಡಿದ್ದಾರೆ. ಇದೇ ರೀತಿ ಎಲ್ಲಾ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೆರೆಗಳ ಅಭಿವೃದ್ಧಿಪಡಿಸಲು, ಆಯಾಯ ಗ್ರಾಮದ ಜನ ಪ್ರತಿನಿಧಿಗಳು, ಅಧಿಕಾರಿಗಳು ಮತ್ತು ಸಾರ್ವಜನಿಕರು ಮುಂದಾಗಬೇಕು. ಅದಕ್ಕೆ ಬೇಕಾದ ಎಲ್ಲಾ ಸಹಕಾರವನ್ನು ಶಾಸಕ ಹೆಚ್.ಕೆ.ಕುಮಾರಸ್ವಾಮಿ ಅವ ನೇತೃತ್ವದಲ್ಲಿ ತಾಲ್ಲೂಕು ಆಡಳಿತ ನೀಡಲು ಸಿದ್ಧವಿದೆ. ಇದು ದೊಡ್ಡಮಟ್ಟದ ಕ್ರಾಂತಿಯಾಗಬೇಕು ಎಂದರು.

ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷ ವಿಜಯಕುಮಾರ್, ಉಪಾಧ್ಯಕ್ಷೆ ಗೀತಮ್ಮ, ತಾಲ್ಲೂಕು ಪಂಚಾಯಿತಿ ಸದಸ್ಯೆ ಚಂದ್ರಮತಿ, ಗ್ರಾಮ ಪಂಚಾಯಿತಿ ಪಿಡಿಓ ಆದಿತ್ಯ, ಎಪಿಎಂಸಿ ಸದಸ್ಯ ಪುಟ್ಟಸ್ವಾಮಿಗೌಡ, ಲಯನ್ಸ್ ಸಂಸ್ಥೆ ಅಧ್ಯಕ್ಷ ಸಂಜಿತ್ ಶೆಟ್ಟಿ, ಜೆಎಸ್ಎಸ್ ಬಿಇಡಿ ಕಾಲೇಜು ಪ್ರಾಂಶುಪಾಲ ಡಾ. ಎನ್.ಎಸ್. ಸುರೇಶ್, ಅಧೀಕ್ಷಕ ಮಂಜುನಾಥ್, ಪರಿಸರಪ್ರೇಮಿ ಹೊಂಗಡಹಳ್ಳ ಕಿಶೋರ್, ಹಾ.ನ.ಪ್ರಸನ್ನ, ಬ್ಯಾಕರಹಳ್ಳಿ ಜಯಣ್ಣ, ಬ್ಯಾಕರಹಳ್ಳಿ ಮೊರಾರ್ಜಿ ವಸತಿ ಶಾಲೆ ಪ್ರಾಂಶುಪಾಲ ಶತೇಂದ್ರಕುಮಾರ್ ಹಾಜರಿದ್ದರು.

ಇದಕ್ಕೂ ಮೊದಲು ಜಲ ಸಂರಕ್ಷಣೆ ಕುರಿತು ಬ್ಯಾಕರಹಳ್ಳಿ ಮೊರಾರ್ಜಿ ವಸತಿ ಶಾಲೆ ಮಕ್ಕಳು ಹಾಗೂ ಅಮೀರ್‌ಖಾನ್ ಫಾನಿ ಫೌಂಡೇಷನ್ ಕುರಿತು ಜೆಎಸ್ಎಸ್ ಪ್ರಶಿಕ್ಷಣಾರ್ಥಿಗಳು ಮತ್ತು ಗ್ರಾಮಸ್ಥರಿಂದ ಸಾಕ್ಷ್ಯಚಿತ್ರ ಪ್ರದರ್ಶಿಸಲಾಯಿತು. ನಂತರ ಈ ಕುರಿತು ಸಂವಾದ ನಡೆಯಿತು.



PRINCIPAL
J.S.S. Institute of Education
P.B. 26, SAKALESHPUR-573134
Hassan Dist.

# ಡಾ.ಶ್ರೀಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 102ನೇ ಗುರುಸ್ಮರಣೋತ್ಸವ

"ಯತ್ರೈವ ಯತ್ರೈವ ಮನೋ ಮದೀಯಂ
ತತ್ರೈವ ತತ್ರೈವ ತವ ಸ್ವರೂಪಂ।
ಯತ್ರೈವ ಯತ್ರೈವ ಶಿರೋ ಮದೀಯಂ
ತತ್ರೈವ ತತ್ರೈವ ಪದದ್ವಯಂ ತೇ॥"

"ಎಲ್ಲೆಲ್ಲಿ ನನ್ನ ಶಿರಸ್ಸು ಒರಗುತ್ತದೆಯೋ ಅಲ್ಲಲ್ಲಿ ನಿನ್ನ ಪಾದ ಕಮಲವಿರಿಸು. ಎಲ್ಲೆಲ್ಲಿ ನನ್ನ ಮನಸ್ಸು ಪ್ರವರ್ತಿಸುತ್ತದೆಯೋ ಅಲ್ಲೆಲ್ಲಾ ನಿನ್ನ ಸ್ವರೂಪ ದರ್ಶನ ಮಾಡಿಸು" ಎಂದು ಸಂಸ್ಕೃತ ಶ್ಲೋಕದಿಂದ ತಮ್ಮ ಆಶೀರ್ವಚನ ಪ್ರಾರಂಭಿಸುತ್ತಿದ್ದರು.

ಈ ಮಹಾ ಗುರು ಬೇರಾರು ಅಲ್ಲ ಈ ನಾಡಿನ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಿದ ಮತ್ತು ಧಾರ್ಮಿಕ, . ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಕ್ಷೇತ್ರಗಳಿಗೆ ಅರ್ಥಪೂರ್ಣ ಕೊಡುಗೆಗಳನ್ನು ನೀಡುತ್ತಾ ಬಂದಿರುವ ಗುರುಪೀಠ ಸುತ್ತೂರು ಶ್ರೀ ವೀರಸಿಂಹಾಸನ ಮಠದ ಇಪ್ಪತ್ಮೂರನೇಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ಶ್ರೀಗಳು ಲೋಕಸೇವೆ ಮಾಡಲೆಂದೆ ಅವತರಿಸಿದ ಮಹಾನ್ ಕಾಯಕ ತಪಸ್ವಿಗಳು.

ಶ್ರೀಮತ್ಸುತ್ತೂರು ವೀರಸಿಂಹಾಸನ ಮಹಾಸಂಸ್ಥಾನ ಮಠಕ್ಕೆ ಸಾವಿರ ವರ್ಷಗಳಿಗೂ ಮೀರಿದ ಉಜ್ವಲ ಇತಿಹಾಸವಿದೆ. ಮತ್ತು ತನ್ನದೇ ಆದ ಲೋಕಕಲ್ಯಾಣ ಕೈಂಕರ್ಯಗಳನ್ನು ಸಮಾಜಕ್ಕೆ ನೀಡುತ್ತಾ ಬಂದಿದೆ. ತಮಿಳುನಾಡಿನ ಚಕ್ರಾಧಿಪತಿ ರಾಜೇಂದ್ರ ಚೋಳ ಮತ್ತು ತಲಕಾಡಿನ ಗಂಗರ ದೊರೆ ರಾಚಮಲ್ಲರ ನಡುವೆ ಯುದ್ಧ ನಿಲ್ಲಿಸಿ ಶಾಂತಿ, ಸಾಮರಸ್ಯಗಳನ್ನು ಮೂಡಿಸಿದ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರಿಂದ ಸಂಸ್ಥಾಪಿಸಿದ ಧರ್ಮಪೀಠವಿದು. ಇಲ್ಲಿಯ ಇಪ್ಪತ್ತೆರಡು ಜಗದ್ಗುರುಗಳಿಗೂ ಮಹತ್ತರವಾದ ಸ್ಥಾನಮಾನವಿದೆ. ಇವರೆಲ್ಲಾ ಮಹಾನ್ ಸಂತರು, ಆಧ್ಯಾತ್ಮಿಕ ಗುರುಗಳು, ಸಮಾಜಮುಖಿ ಚಿಂತಕರು, ವಚನಕಾರರು, ದಾರ್ಶನಿಕರು ಆಗಿದ್ದರು. ಇವರೆಲ್ಲರ ನಡುವೆ ಹೊಳೆಯುವ ವಜ್ರದಂತಿದ್ದವರು ಶ್ರೀ ಮಠದ ಇಪ್ಪತ್ಮೂರನೇ ಪೀಠಾಧಿಪತಿಗಳಾದ ಶ್ರೀ ಮನ್ಮಹಾರಾಜ ರಾಜಗುರುತಿಲಕ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು.



1916 ಆಗಸ್ಟ್ 29 ಶಾಲಿವಾಹನ ಶಕ 1838 ನೇ ನಳನಾಮ ಸಂವತ್ಸರದ ಭಾದ್ರಪದ ಮಾಸ ಶುದ್ಧ ಪಾಡ್ಯದ ಮಂಗಳವಾರದಂದು ಶ್ರೀಮಠದ ಭಕ್ತರು ಆದ ಶ್ರೀ ಮಲ್ಲಿಕಾರ್ಜುನದೇವರು ಮತ್ತು ಶ್ರೀಮತಿ ಮರಮ್ಮಣ್ಣಿ(ಶಂಕರಮ್ಮ ) ದಂಪತಿಗಳ ಪುಣ್ಯಗರ್ಭದಲ್ಲಿ ಕಾರಣಿಕ ಶಿಶುವಾಗಿ ಜನಿಸಿದರು. ದಿನಕಳೆದಂತೆ ಶಿಶು ಶಿವರಾತ್ರಿ ರಾಜೇಂದ್ರರ ಬೆಳೆಯುವಿಕೆಯಲ್ಲಿ ಅಜ್ಜಿಯಂದಿರಾದ ಮಲ್ಲಮ್ಮಯ್ಯ ಮತ್ತು ಚಿಕ್ಕಬಸಮ್ಮಯ್ಯ ಅವರ ಪಾತ್ರ ಬಹಳ ಮುಖ್ಯವಾಗಿತ್ತು . ತಂದೆ-ತಾಯಿ, ಇಬ್ಬರು ಅಜ್ಜಿಯರ ಅಗಾಧ ಪ್ರೀತಿವಾತ್ಸಲ್ಯದಿಂದ ಬೆಳೆದ ಬಾಲಕ ಶಿವರಾತ್ರಿ ರಾಜೇಂದ್ರರನ್ನು ಶ್ರೀಮಠದ ಉತ್ತರಾಧಿಕಾರಿ ಮಾಡಿಕೊಂಡು ಹೆಚ್ಚಿನ ವಿಧ್ಯಾಭ್ಯಾಸಕ್ಕಾಗಿ ಸುತ್ತೂರಿನಿಂದ ಮೈಸೂರಿಗೆ ಕಳುಹಿಸಿಕೊಡಲಾಗಿತ್ತು. ಅಲ್ಲಿ ಅವರು ಸಕಲ ವಿದ್ಯಾಪಾರಂಗತರಾದರು. ನಂತರ 1928 ಫೆಬ್ರವರಿ 24ರಂದು ಕೇವಲ 12ನೇ ವಯಸ್ಸಿಗೆ ಬಾಲಕ ಶಿವರಾತ್ರಿ ರಾಜೇಂದ್ರರರು ಶ್ರೀ ಮತ್ಸುತ್ತೂರು ವೀರ ಸಿಂಹಾಸನ ಮಹಾಸಂಸ್ಥಾನ ಮಠದ ಪೀಠಾರೋಹಣ ಮಾಡಿ ಜಗದ್ಗುರುಗಳಾದರು. ಅಂದಿನಿಂದ ಈ ಸುತ್ತೂರ ಸುರಧೇನು ಜಾತಿಮತ ಭೇದವಿಲ್ಲದೆ ಸರ್ವರಿಗೂ ಅಕ್ಷರಭಾಗ್ಯ, ಅನ್ನಭಾಗ್ಯ , ಆಶ್ರಯಭಾಗ್ಯಗಳನ್ನು ಕರುಣಿಸುತ್ತಾ "ಇಲ್ಲಿ ನಾನು ಏನೂ ಮಾಡುತ್ತಿಲ್ಲ ಎಲ್ಲಾ ಶಿವರಾತ್ರೀಶ್ವರರ ಕೃಪೆ "ಎಂದು ನಿಸ್ವಾರ್ಥ ಸೇವಾ ಕೈಂಕರ್ಯದಲ್ಲಿ ತೊಡಗಿದರು.

ಭಕ್ತರು ಮಾಡಿಸಿಕೊಟ್ಟಿದ್ದ ಬಂಗಾರದ ಕರಡಿಗೆ, ಚಿನ್ನದ ರುದ್ರಾಕ್ಷಿಕವಚ ಮತ್ತು ಚಿನ್ನದ ಉಂಗುರವನ್ನು ಮಾರಿ ಬಂದ ಹಣದಿಂದ ಬಾಡಿಗೆ ಮನೆ ಪಡೆದು ಆರಂಭಿಸಿದ ಅವರ ತ್ರಿವಿಧ ದಾಸೋಹದ ಸಾರ್ಥಕ ಸೇವೆ ಇಂದು ಜಗದಗಲಕ್ಕೂ, ಮುಗಿಲೆತ್ತರಕ್ಕೂ ಬೆಳೆದು ನಿಂತಿದೆ. ಜೆ ಎಸ್ ಎಸ್ ಮಹಾವಿದ್ಯಾಪೀಠವೆಂಬ ಶಿಕ್ಷಣ ಕ್ಷೇತ್ರವನ್ನು ಕಲ್ಪನೆಗೂ ಸಾಧ್ಯವಾಗದಷ್ಟು ಎತ್ತರಕ್ಕೆ ಬೆಳೆಸಿ ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ವ್ಯಾಪಕವಾದ ಕೀರ್ತಿಯನ್ನು ಗಳಿಸುವಂತೆ ಮಾಡಿದೆ. ಇಂತಹ ಸಮಾಜದ ಶ್ರೇಯೋಭಿವೃದ್ಧಿಗಾಗಿ ಹಗಲು-ಇರುಳು ಶ್ರಮಿಸಿದ ಪೂಜ್ಯರು 1986 ಡಿಸೆಂಬರ್ 6 ರಂದು ಲಿಂಗೈಕ್ಯರಾಗಿ ಭೌತಿಕವಾಗಿ ನಮ್ಮನ್ನಗಲಿದರು.

"ಹುಲ್ಲಾಗು ಬೆಟ್ಟದಡಿ ಮನೆಗೆ ಮಲ್ಲಿಗೆಯಾಗು
ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೇ
ಬೆಲ್ಲ ಸಕ್ಕರೆಯಾಗು ದೀನ ದುರ್ಬಲರಿಗೆ
ಎಲ್ಲರೊಳಗೊಂದಾಗು"

ಎಂಬ ಡಿವಿಜಿಯವರ ಕವಿವಾಣಿಯ ಸಾಲುಗಳು ಎಷ್ಟೊಂದು ಅರ್ಥಪೂರ್ಣವಾಗಿ ಶ್ರೀಗಳಿಗೆ ಅನ್ವಯಿಸುತ್ತವೆ ಅಲ್ಲವೆ.

ಇಂತಹ ದಿವ್ಯ ಚೇತನಕ್ಕೆ ಸಕಲೇಶಪುರದ ಸಕಲ ಭಕ್ತರು ದಿನಾಂಕ;- 15.09.2017ನೇ ಶುಭ ಶುಕ್ರವಾರದಂದು 102 ನೇ ಜಯಂತಿ ಮಹೋತ್ಸವ ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ. ಬೆಳಗ್ಗೆ 8 ಗಂಟೆಗೆ ರೋಟರಿ ಶ್ರೀ ಎನ್ ಕೆ ಗಣಪಯ್ಯ ಶ್ರವಣದೋಷವುಳ್ಳ ಶಾಲಾ ಮಕ್ಕಳಿಗೆ "ಹಣ್ಣು-ಹಂಪಲು ವಿತರಣೆ"ಮಾಡುವ ಮೂಲಕ ಆರಂಭಿಸಿ ನಂತರ 8.30 ಕ್ಕೆ ಕ್ರಾಫರ್ಡ್ ಆಸ್ಪತ್ರೆಯ ಒಳರೋಗಿಗಳಿಗೆ ಹಣ್ಣು-ಹಂಪಲು ವಿತರಿಸಿ ಕಾರ್ಯಕ್ರಮಕ್ಕೆ ಚಾಲನೆ ಕೊಡಲಿದ್ದಾರೆ. ಬಳಿಕ 9.00 ಗಂಟೆಗೆ ಪೂಜ್ಯ ರಾಜೇಂದ್ರ ಶ್ರೀಗಳವರ ಭಾವಚಿತ್ರ ಮೆರವಣಿಗೆಯು ಶ್ರೀ ಸಕಲೇಶ್ವರಸ್ವಾಮಿ ದೇವಸ್ಥಾನದಿಂದ ಶ್ರೀ ಗುರವೇಗೌಡ ಕಲ್ಯಾಣ ಮಂಟಪದವರೆಗೂ ನಡೆಯುತ್ತದೆ. ಮೆರವಣಿಗೆಯನ್ನು ಪುರಸಭಾಧ್ಯಕ್ಷರಾದ ಶ್ರೀಮತಿ ಪುಷ್ಪಾವತಿ ರಮೇಶ್ ಶಾಸ್ತ್ರೋಕ್ತವಾಗಿ ಚಾಲನೆ ಮಾಡಲಿದ್ದಾರೆ. ಮೆರವಣಿಗೆಯು ಸಕಲೇಶಪುರದ ತಳಿರು ತೋರಣಗಳಿಂದ ಅಲಂಕೃತಗೊಂಡ ರಸ್ತೆಗಳಲ್ಲಿ ವಿಜೃಂಭಣೆಯಿಂದ ಸಾಗುತ್ತದೆ. ಇದರ ಜೊತೆಯಲ್ಲಿ ಜಾನಪದ ಮೇಳಗಳು ಸಾಗುತ್ತವೆ. ತದನಂತರ ನಡೆಯುವ ಸಭಾ ಕಾರ್ಯಕ್ರಮದಲ್ಲಿ ಕಿರಿಕೊಡ್ಲಿ ಮಠದ ಪೂಜ್ಯ ಶ್ರೀ ಸದಾಶಿವಸ್ವಾಮಿಗಳು, ಕಲ್ಮಠದ ಪೂಜ್ಯ ಶ್ರೀ ಮಹಾಂತ ಸ್ವಾಮಿಗಳು ಭಾಗವಹಿಸಲಿದ್ದಾರೆ. ಶ್ರೀ ವಿರಕ್ತ ಮಠ ತಮ್ಮಡಿಹಳ್ಳಿಯ ಪೂಜ್ಯ ಶ್ರೀ ಡಾ. ಅಭಿನವ ಮಲ್ಲಿಕಾರ್ಜುನ ಮಹಾಸ್ವಾಮಿಗಳ ನುಡಿನಮನವಿರುತ್ತದೆ. ಕಾರ್ಯಕ್ರಮದ ಉದ್ಘಾಟನೆಯನ್ನು ಜನಪ್ರಿಯ ಶಾಸಕರಾದ ಹೆಚ್ ಕೆ ಕುಮಾರಸ್ವಾಮಿಯವರು ನೆರವೇರಿಸಲಿದ್ದಾರೆ. ತಾ॥ ವಿವಿಧ ಸಂಘ-ಸಂಸ್ಥೆಗಳ ಗಣ್ಯರು, ಜೆ ಎಸ್ ಎಸ್ ಸಂಸ್ಥೆಯ ನೌಕರರು , ವಿದ್ಯಾರ್ಥಿಗಳು ಮತ್ತು ಸಕಲೇಶಪುರದ ಸಮಸ್ತ ಭಕ್ತಾಧಿಗಳು ಬಾಗವಹಿಸಲಿದ್ದಾರೆ. ಮಧ್ಯಾಹ್ನ ಪ್ರಸಾದದ ವ್ಯವಸ್ಥೆ ಇರುತ್ತದೆ. ಇಂಥಹ 102 ನೇ ಜಯಂತಿ ಮಹೋತ್ಸವದ ಗುರುಸ್ಮರಣೆ ಕಾರ್ಯಕ್ರಮ ಅರ್ಥಪೂರ್ಣವಾಗಿ ಆಚರಿಸಲಾಗುತ್ತಿದೆ.

ಈಸಂಧರ್ಭದಲ್ಲಿ ನಾವೆಲ್ಲರೂ ಕೃತಜ್ಞತಾಪೂರ್ವಕ ಭಕ್ತಿ ಗೌರವಗಳಿಂದ ಬಾಗವಹಿಸಿ ನಮ್ಮ ಧನ್ಯತೆಯನ್ನು ಮೆರೆಯೋಣ , ಪ್ರಾತಃಸ್ಮರಣೀಯರು ಹಾಕಿಕೊಟ್ಟ ದಾರಿಯಲ್ಲಿ ಸಾಗಲು ಪ್ರಯತ್ನಿಸೋಣ.



ಮಂಜುನಾಥ್ ಎಲ್ ಎಸ್
ಗ್ರಂಥಪಾಲಕರು
ಜೆ ಎಸ್ ಎಸ್
ಪಬ್ಲಿಕ್ ಶಾಲೆ
ಸಕಲೇಶಪುರ
9945314789

PRINCIPAL
J.S.S. Institute of Education
P.B. 26, SAKALESHPUR-573 13-
Hassan Dist

ಶ್ರೀಗಳ ಜಯಂತಿ | ಡಾ. ಶಿವರಾತ್ರಿರಾಜೇಂದ್ರ ಸ್ವಾಮೀಜಿ ಅವರ 102ನೇ ಜಯಂತಿಯಲ್ಲಿ ಶಾಸಕ ಎಚ್.ಕೆ ಕುಮಾರಸ್ವಾಮಿ ಅಭಿಮತ

# ಪ್ರತಿಯೊಬ್ಬರು ಶಿಸ್ತು, ಸಮಯಪ್ರಜ್ಞೆ ಬೆಳೆಸಿಕೊಳ್ಳಿ

• **ಕನ್ನಡಪ್ರಭ ವಾರ್ತೆ** ಸಕಲೇಶಪುರ

ಶಿಸ್ತು, ಕಾಯಕ ಹಾಗೂ ಸಮಯಪಾಲನೆ ಪ್ರಜ್ಞೆಯನ್ನು ದೇಶದ ಪ್ರತಿಯೊಬ್ಬ ನಾಗರಿಕರು ಮೈಗೂಡಿಸಿಕೊಂಡಾಗ ಮಾತ್ರ ದೇಶ ಪ್ರಗತಿ ಹೊಂದಲು ಸಾಧ್ಯ ಎಂದು ಶಾಸಕ ಎಚ್.ಕೆ ಕುಮಾರಸ್ವಾಮಿ ಹೇಳಿದರು.

ಪಟ್ಟಣದ ಗುರುವೇಗೌಡ ಕಲ್ಯಾಣ ಮಂಟಪದಲ್ಲಿ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕ ಜಗದ್ಗುರು ಡಾ.ಶಿವರಾತ್ರಿರಾಜೇಂದ್ರ ಮಹಾ ಸ್ವಾಮೀಜಿ ಅವರ 102ನೇ ಜಯಂತಿಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಎಲ್ಲರನ್ನು ಎಲ್ಲ ಕಾಲಕ್ಕೂ ನೆನೆಯಲು ಸಾಧ್ಯವಾಗುವುದಿಲ್ಲ. ಆದರೆ, ಮಹಾತ್ಮರನ್ನು ಮಾತ್ರ ಕೆಲವೊಂದು ಸಂದರ್ಭಗಳಲ್ಲಿ ನಾವು ನೆನೆಯಬೇಕಾಗುತ್ತದೆ. ಅಂತಹ ಮಹಾತ್ಮರ ಸಾಲಿನಲ್ಲಿ ರಾಜೇಂದ್ರ ಸ್ವಾಮೀಜಿಯೂ ಅಗ್ರಸ್ಥಾನದಲ್ಲಿ ನಿಂತಿದ್ದಾರೆ. ವಿದ್ಯೆ, ಅಕ್ಷರ, ಜ್ಞಾನಗಳು ಮನುಷ್ಯನ ಮೂಲಭೂತ ಹಕ್ಕಾಗಿದ್ದು, ಈ ಮೂರು ಮನುಷ್ಯನಿಗೆ ಇದ್ದರೆ ಆತ ಎಲ್ಲಿ ಬೇಕಾದರೂ ಜೀವನ ಸಾಗಿಸಬಲ್ಲ. ಇಂತಹ ಮೂರು ಅವಶ್ಯಕತೆಗಳನ್ನು ಮನಗೊಂಡ ರಾಜೇಂದ್ರ ಸ್ವಾಮೀಜಿಗಳು ವಿದ್ಯಾದಾನ, ಅನ್ನದಾನದ ಮುಖಾಂತರ ನೂರಾರು ವಿದ್ಯಾರ್ಥಿಗಳು ಬದುಕಿಗೆ ಅರ್ಥ ತುಂಬಿದ್ದಾರೆ ಎಂದರು.



ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕ ಜಗದ್ಗುರು ಡಾ.ಶಿವರಾತ್ರಿ ರಾಜೇಂದ್ರ ಮಹಾ ಸ್ವಾಮೀಜಿರವರ 102ನೇ ಜಯಂತಿಯನ್ನು ಶಾಸಕ ಎಚ್.ಕೆ ಕುಮಾರಸ್ವಾಮಿ ಉದ್ಘಾಟಿಸಿದರು.

ತಮ್ಮಡಿಹಳ್ಳಿ ಕುಪ್ಪೂರು ವಿರಕ್ತ ಮಠದ ಡಾ. ಅಭಿನವ ಮಲ್ಲಿಕಾರ್ಜುನ ಮಹಾಸ್ವಾಮೀಜಿ ಮಾತನಾಡಿ, ಕುವೆಂಪುರವರು ಸಾಮಾನ್ಯವಾಗಿ ಯಾವುದೇ ಕಾರ್ಯಕ್ರಮಕ್ಕೆ ಹೋಗುತ್ತಿರಲಿಲ್ಲ. ಆದರೆ, ಆ ಕಾಲದಲ್ಲಿ ಅವರು ಕಾರ್ಯಕ್ರಮವೊಂದಕ್ಕೆ ಹೋದಾಗ ಆಧುನಿಕ ಯುಗದ ಬಸವಣ್ಣ ರಾಜೇಂದ್ರ ಸ್ವಾಮೀಜಿ ಎಂದು ಹೊಗಳಿದ್ದರು. ಅದೇ ರೀತಿ ಮಾಜಿ ರಾಷ್ಟ್ರಪತಿ ಅಬ್ದುಲ್ ಕಲಾಂ ಸಹ ಬಸವಣ್ಣ, ಮಹಾತ್ಮಗಾಂಧಿ, ವಿವೇಕಾನಂದ, ಮದರ್ ತೆರೆಸಾ ಈ ಎಲ್ಲರ ವ್ಯಕ್ತಿತ್ವವನ್ನು ಹೊಂದಿರುವ ಏಕೈಕೆ ವ್ಯಕ್ತಿಯೆಂದರೆ ರಾಜೇಂದ್ರ ಸ್ವಾಮಿಗಳು ಎಂದು ಹೊಗಳಿದ್ದರು ಎಂದರು.

ರಾಜೇಂದ್ರ ಸ್ವಾಮಿಗಳು ತಮ್ಮ 12ನೇ ವಯಸ್ಸಿಗೆ ದೀಕ್ಷೆ ಪಡೆದು ಅತಿ ಸಣ್ಣ ವಯಸ್ಸಿನಲ್ಲಿ ಸಮಾಜಕ್ಕಾಗಿ ತಮ್ಮ ಸರ್ವಸ್ವವನ್ನು ಮೀಸಲಿಟ್ಟರು. ನಂತರ ಜೆಎಸ್‌ಎಸ್ ವಿದ್ಯಾಸಂಸ್ಥೆಗಳನ್ನು ಸ್ಥಾಪಿಸಿ ಸಮಾಜಕ್ಕೆ ಧಾರೆ ಎರೆದರು.

ಸಿದ್ಧಗಂಗಾ ಹಾಗೂ ಸುತ್ತೂರು ಮಠಗ[illegible] ವೀರಶೈವ ಸಮಾಜದ ಎರಡು ಕಣ್ಣುಗಳಿದ್ದ ಹಾ[illegible] ಸಮಾಜದ ಪ್ರತಿಯೊಬ್ಬರ ಈ ಮಠಗಳ ಶ್ರೀಗ[illegible] ಹಾಕಿಕೊಟ್ಟ ಹಾದಿಯಲ್ಲಿ ನಡೆಯಬೇಕಾಗಿದೆ.

ಈ ಕಾರ್ಯಕ್ರಮದ ಅಂಗವಾಗಿ ಪ್ರತಿಭಾನ್ವಿ[illegible] ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಯಿತ[illegible] ರೋಟರಿ ಗಣಪಯ್ಯ ಶ್ರವಣದೋಷವುಳ್ಳ ಶಾ[illegible] ಮಕ್ಕಳಿಗೆ ಹಾಗೂ ಕ್ರಾಫರ್ಡ್ ಆಸ್ಪತ್ರೆ[illegible] ರೋಗಿಗಳಿಗೆ ಹಣ್ಣು ಮತ್ತು ಹಾಲು ವಿತರ[illegible] ನಡೆಯಿತು ಮತ್ತು ನಗರದ ರಾಜಬೀದಿಗಳ[illegible] ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ವಿಧ್ಯಾರ್ಥಿಗಳಿಂ[illegible] ಹಾಗೂ ವೀರಶೈವ ಮುಖಂಡರಿಂದ ಸ್ವಾಮೀಜಿ[illegible] ಭಾವಚಿತ್ರ ದೊಂದಿಗೆ ಬೃಹತ್ ಮೆರವಣ[illegible] ನಡೆಯಿತು.

ಕೊಡ್ಲಿಪೇಟೆ ಕಿರಿಕೊಡ್ಲಿ ಮಠ[illegible] ಸದಾಶಿವಸ್ವಾಮಿಗಳು, ಕೊಡ್ಲಿಪೇಟೆ ಕಲ್ಮಠ[illegible] ಮಹಾಂತ ಸ್ವಾಮೀಜಿ, ಮಲೆನಾಡು ವೀರಶೈ[illegible] ಸಮಾಜದ ಅಧ್ಯಕ್ಷ ಎಚ್.ಎಂ.ಶಶಿಧರ[illegible] ಕಾರ್ಯದರ್ಶಿ ಎಂ.ಎಸ್.ಧರ್ಮಪ್ಪ, ಕಾ[illegible] ಬೆಳೆಗಾರ ದಿವಾನ್ ದೇವರಾಜ್, ತಾಪ ಮಾ[illegible] ಉಪಾಧ್ಯಕ್ಷ ಮಂಜುನಾಥ್, ತಾಪ ಸ್ಥಾ[illegible] ಸಮಿತಿ ಅಧ್ಯಕ್ಷ ಸಿಮೆಂಟ್ ಮಂಜುನಾಥ[illegible] ಶ್ಯಾಮಲಾ ನಾಗೇಂದ್ರ, ನರೇಶ್, ದಿವಾಕ[illegible] ಸೇರಿದಂತೆ ಮತ್ತಿತರರು ಇದ್ದರು.

ಕನ್ನಡ ಪ್ರಭ ಭಾನುವಾರ 17-9-2017 P/No 03

PRINCIPAL
J.S.S. Institute of Education
P.B. 26, SAKALESHPUR-573 13-
Hassan Dist

**14-09-2017** ಗುರುವಾರ

# ಕಲಬುರ್ಗಿ ಮತ್ತು ಗೌರಿ ಲಂಕೇಶ್ ಹತ್ಯೆಗೆ ಬಳಸಿದ್ದು ಒಂದೇ ವ

ಬೆಂಗಳೂರು, ಸೆ.13- ಅಂತಾರಾಷ್ಟ್ರೀಯ ಮಟ್ಟದಲ್ಲೂ ಭಾರೀ ಸದ್ದು ಮಾಡಿರುವ ಪತ್ರಕರ್ತೆ ಗೌರಿಲಂಕೇಶ್ ಹತ್ಯಾ ಪ್ರಕರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡ (ಎಸ್‌ಐಟಿ)ಕ್ಕೆ ಮಹತ್ವದ ಸುಳಿವು ಲಭ್ಯವಾಗಿದೆ. ಈ ಹಿಂದೆ ಧಾರವಾಡದಲ್ಲಿ ಸಾಹಿತಿ ಎಂ.ಎಂ.ಕಲಬುರ್ಗಿ ಕೊಲೆ ಮಾಡಲು ಬಳಸಿದ್ದ ಅದೇ ಮಾದರಿಯ ಬಂದೂಕನ್ನೇ ಗೌರಿ ಹತ್ಯೆಗೂ ಹಂತಕರು ಬಳಸಿರುವುದು ವಿಧಿ ವಿಜ್ಞಾನ ಪ್ರಯೋಗಾಲಯ (ಎಫ್‌ಎಸ್‌ಎಲ್)ದ ವರದಿಯಲ್ಲಿ ಬಹಿರಂಗಗೊಂಡಿದೆ.

ಕಳೆದ ಬುಧವಾರ ಬೆಂಗಳೂರಿನ ರಾಜರಾಜೇಶ್ವರಿನಗರದ ನಿವಾಸದ ಬಳಿ ಗೌರಿ ಲಂಕೇಶ್ ಅವರನ್ನು ರಾತ್ರಿ ಆರೋಪಿಗಳು ಬರ್ಬರವಾಗಿ ಹತ್ಯೆಗೈದಿದ್ದರು. ಈ ಘಟನೆ ನಡೆದ ಬಳಿಕ ಪ್ರಕರಣವನ್ನು ಕೈಗೆತ್ತಿಕೊಂಡ ಎಫ್‌ಎಸ್‌ಎಲ್ ಅಧಿಕಾರಿಗಳು



ತನಿಖೆ ನಡೆಸಿದ್ದರು. ಇದೀಗ ಎಫ್‌ಎಸ್‌ಎಲ್ ಅಧಿಕಾರಿಗಳು ತನಿಖಾ ತಂಡಕ್ಕೆ ನೀಡಿರುವ ಗೌಪ್ಯ ವರದಿಯಲ್ಲಿ ಸಾಹಿತಿ ಎಂ.ಎಂ.ಕಲಬುರ್ಗಿಯನ್ನು ಹತ್ಯೆಗೈಯಲು ಬಳಸಿದ್ದ ಬಂದೂಕನ್ನೇ ಗೌರಿ ಕೊಲೆಗೂ ಬಳಸಿದ್ದಾರೆ ಎಂದು ಖಚಿತ ಪಡಿಸಿದ್ದಾರೆ.

ಎಫ್‌ಎಸ್‌ಎಲ್ ಅಧಿಕಾರಿಗಳು ಶೇ.80ರಷ್ಟು ತನಿಖಾ ವರದಿಯನ್ನು ಪೂರ್ಣಗೊಳಿಸಿದ್ದು, ಎಸ್‌ಐಟಿ ಮುಖ್ಯಸ್ಥ ಬಿ.ಕೆ.ಸಿಂಗ್‌ಗೆ ಕೆಲವು ಮಾಹಿತಿಗಳನ್ನು ನೀಡಿದ್ದಾರೆ ಎಂದು ಪೊಲೀಸ್ ಮೂಲಗಳು ಖಚಿತ ಪಡಿಸಿವೆ.

## ಅದೇ ಹಂತಕ:

ಮೂಲಗಳ ಪ್ರಕಾರ ಕಲಬುರ್ಗಿ ಅವರನ್ನು ಹತ್ಯೆಗೈದ ಆರೋಪಿಯೇ ಗೌರಿಯನ್ನೂ ಕೊಲೆ ಮಾಡಿರುವ ಸಾಧ್ಯತೆ ಇದೆ ಎಂದು ಪೊಲೀಸರು ಶಂಕಿಸಿದ್ದಾರೆ. ಮಹಾರಾಷ್ಟ್ರದಲ್ಲಿ ಕೊಲೆಯಾದ ವಿಚಾರವಾದಿಗಳಾದ ಗೋವಿಂದ್ ಪಾನ್ಸರೆ, ನರೇಂದ್ರ ದಾಭೋಲ್ಕರ್ ಅವರುಗಳನ್ನು ಹತ್ಯೆ ಮಾಡಿದ ತಂಡವೇ ಈ ಕೃತ್ಯ ನಡೆಸಿರುವ ಸಾಧ್ಯತೆ ಇದೆ ಎಂಬುದು ಪೊಲೀಸರ ಬಲವಾದ ನಂಬಿಕೆ. ಮೇಲ್ನೋಟಕ್ಕೆ ಈ ಎಲ್ಲಾ ಪ್ರಕರ ಣಗಳಿಗೂ ಸಾಮ್ಯತೆ ಕಂಡು ರುವುದರಿಂದ ತನಿಖಾ ಈಗಾಗಲೇ ಮಹಾ ಆಂಧ್ರಪ್ರದೇಶ, ತೆಲಂ ಕೇರಳ ಹಾಗೂ ಧಾರ ತೆರಳಿ ಹೆಚ್ಚಿನ ಮಾಹಿ. ಹಾಕುತ್ತಿದೆ.

## ಮೂರು ಬಾರಿ ಭೆ ಕೊಟ್ಟಿದ್ದ:

ಇನ್ನೊಂದು ಮೂ ಪ್ರಕಾರ ಗೌರಿಯನ್ನು ಮಾಡುವ ಮುನ್ನ ಹಂತ ನಿವಾಸದ ಬಳಿ ಬೆಳಗ್ಗೆ ಸಂಜೆ ವರೆಗೂ ಮೂರ ದ್ವಿಚಕ್ರ ವಾಹನದಲ್ಲಿ ಎಂಬುದನ್ನು ಪೊಲಿ ಪತ್ತೆಹಚ್ಚಿದ್ದಾರೆ. ಮುಖ ಹಾಗೂ ತಲೆಗೆ ಹೆಲ್ಮೆಟ್ ವ್ಯಕ್ತಿ ಬೆಳಗ್ಗೆ ಗೌರಿ ಮನ ಕಚೇರಿಗೆ ತೆರಳಿದ್ದು, ಬಳಿ ಗಾಂಧೀಬಜಾರ್‌ಗೆ ಬಂದಿ ನಂತರ ಮನೆಗೆ ಹ ವವರೆಗೂ ಅವರ ಎಲ್ಲಾ ಲನಗಳ ಮೇಲೆ ಹದ್ದಿನ ಸರಿಯಾಗಿ ಅಂದುಕೊ

## ಜನ್ ಧನ್ ಖಾತೆಗಳು ಶೇ.20 ಕ್ಕೆ ಇಳಿಕೆ: ಜೇಟ್ಲಿ

PRINCIPAL
J.S.S. Institute of Education
P.B. 26, SAKALESHPUR-573 1.
Hassan Dist

# ಸುತ್ತೂರು ಮಠದ ಶೈಕ್ಷಣಿಕ ಸಾಧನೆ ಅನನ್ಯ


ಪ್ರಜಾವಾಣಿ ವಾರ್ತೆ

ಸಕಲೇಶಪುರ: ಸುತ್ತೂರು ಶ್ರೀಗಳು ದೇಶವಲ್ಲದೆ, ವಿದೇಶದಲ್ಲಿಯೂ ಶಿಕ್ಷಣ ಸಂಸ್ಥೆಗಳನ್ನು ತೆರೆದು ಸೇವೆ ಮಾಡುತ್ತಿದ್ದಾರೆ ಎಂದು ಶಾಸಕ ಎಚ್.ಕೆ. ಕುಮಾರಸ್ವಾಮಿ ಶುಕ್ರವಾರ ಹೇಳಿದರು.

ಗುರುವೇಗೌಡ ಕಲ್ಯಾಣ ಮಂಟಪದಲ್ಲಿ ಸುತ್ತೂರು ಮಠದ ಡಾ. ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ 102ನೇ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡುವುದು ಮುಖ್ಯ. ವಿಜ್ಞಾನ, ತಂತ್ರಜ್ಞಾನದ ಬೆಳವಣಿಗೆ ಹಿನ್ನೆಲೆಯಲ್ಲಿ ಗ್ರಾಮೀಣ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ ನೀಡುವುದು ಅಗತ್ಯವಾಗಿದೆ ಎಂದರು.

ತಮ್ಮಡಿಹಳ್ಳಿ ವಿರಕ್ತ ಮಠದ ಡಾ. ಅಭಿನವ ಮಲ್ಲಿಕಾರ್ಜುನ ಸ್ವಾಮಿ ಅವರು, ಮಕ್ಕಳ ಮನಕೆಡಿಸುವ ಮೊಬೈಲ್ ಆಟಗಳ ಬಗ್ಗೆ ಜಾಗೃತರಾಗಿರಬೇಕು ಎಂದು ಹೇಳಿದರು.



ಸಕಲೇಶಪುರದಲ್ಲಿ ಶುಕ್ರವಾರ ರಾಜೇಂದ್ರಶ್ರೀಗಳ ಜಯಂತಿ ಆಚರಣೆಯಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಯರನ್ನು ಗೌರವಿಸಲಾಯಿತು

ಕಿರಿಕೊಡ್ಲಿ ಮಠದ ಸದಾಶಿವಸ್ವಾಮಿ, ಕಲ್ಮಠದ ಮಹಂತಸ್ವಾಮಿ, ಮಲೆನಾಡು ವೀರಶೈವ ಸಮಾಜದ ಅಧ್ಯಕ್ಷ ಎಚ್.ಎಂ. ಶಶಿಧರ್, ಕಾರ್ಯದರ್ಶಿ ಎಂ.ಎಸ್. ಧರ್ಮಪ್ಪ, ಪುರಸಭಾ ಅಧ್ಯಕ್ಷೆ ಪುಷ್ಪಾವತಿ ರಮೇಶ್, ತಾಲ್ಲೂಕು ಕಾಂಗ್ರೆಸ್ ಅಧ್ಯಕ್ಷ ವಿದ್ಯಾಶಂಕರ್, ತಾ.ಪಂ ಮಾಜಿ ಉಪಾಧ್ಯಕ್ಷ ಯಡೇಹಳ್ಳಿ ಆರ್.ಮಂಜುನಾಥ್, ವೀರಶೈವ ಯುವ ವೇದಿಕೆ ಅಧ್ಯಕ್ಷ ಅರಕೆರೆ ನರೇಶ್, ಅಖಿಲ ಭಾರತ ವೀರಶೈವ ಸಮಾಜದ ತಾಲ್ಲೂಕು ಅಧ್ಯಕ್ಷ ಯತೀಶ್, ಕಾಫಿ ಬೆಳೆಗಾರ ಎನ್.ಎಂ. ಶಿವಪ್ರಸಾದ್, ಎಚ್‌ಡಿಪಿಎ ಮಾಜಿ ಉಪಾಧ್ಯಕ್ಷ ವೈ.ಎಸ್. ಗಿರೀಶ್, ಸೀಗೂರು ನಟರಾಜ್, ಸಂಸ್ಥೆಯ ಇಲ್ಲಿಯ ಅಧೀಕ್ಷಕ ಮಂಜುನಾಥ್, ಜೆಎಸ್‌ಎಸ್ ಬಿಇಡಿ ಕಾಲೇಜು ಪ್ರಾಂಶುಪಾಲ ಡಾ. ಎನ್.ಎಸ್. ಸುರೇಶ್, ಬಾಗೆ ಜೆಎಸ್‌ಎಸ್ ಪಬ್ಲಿಕ್ ಶಾಲೆಯ ಪ್ರಾಂಶುಪಾಲ ಬಿ.ಮಧುಕುಮಾರ್ ಅವರೂ ಇದ್ದರು.

ಇದಕ್ಕೂ ಮುನ್ನ ರಾಜೇಂದ್ರಶ್ರೀಗಳ ಭಾವಚಿತ್ರದ ಮೆರವಣಿಗೆ ನಡೆದಿದ್ದು, ವಿದ್ಯಾರ್ಥಿಗಳು, ಶಿಕ್ಷಕರು, ಮಲೆನಾಡು ವೀರಶೈವ ಸಮಾಜ, ಅಕ್ಕಮಹಾದೇವಿ ಮಹಿಳಾ ವೇದಿಕೆ ಸೇರಿದಂತೆ ವಿವಿಧ ಸಂಘ ಸಂಸ್ಥೆಗಳ ಕಾರ್ಯಕರ್ತರಿದ್ದರು.

ಪ್ರಜಾವಾಣಿ ಭಾನುವಾರ 17/9/2017 P/3B

PRINCIPAL
J.S.S. Institute of Education
P.B. 26, SAKALESHPUR-573 134
Hassan Dist

17-9-2017

# ಗುಣಮಟ್ಟದ ಶಿಕ್ಷಣ ನೀಡಿದಾಗ ವಿದ್ಯೆಗೆ ಅರ್ಥ

ವಿಕ ಚಿತ್ರಲೋಕ



ಸಕಲೇಶಪುರದಲ್ಲಿ ನಡೆದ ಸುತ್ತೂರು ಮಠದ ರಾಜೇಂದ್ರಶ್ರೀ ಅವರ 102 ನೇ ಜಯಂತಿ ಕಾರ್ಯಕ್ರಮದಲ್ಲಿ ಬಾಗೆಯ ಜೆಎಸ್‌ಎಸ್ ಪಬ್ಲಿಕ್ ಶಾಲೆಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿಧ್ಯಾರ್ಥಿಗಳಿಗೆ ಕಾಫಿ ಬೆಳೆಗಾರ ವೈ.ಎಸ್.ಗಿರೀಶ್ ದಂಪತಿಗಳು ಪಶಸ್ತಿ ನೀಡಿ ಗೌರವಿಸಿದರು.

ವಿಕ ಸುದ್ದಿಲೋಕ ಸಕಲೇಶಪುರ

ಗುಣಮಟ್ಟದ ಶಿಕ್ಷಣ ನೀಡಿದಾಗ ಮಾತ್ರ ವಿದ್ಯೆಗೆ ಅರ್ಥ ಸಿಗುತ್ತದೆ ಎಂದು ಶಾಸಕ ಎಚ್.ಕೆ.ಕುಮಾರಸ್ವಾಮಿ ಹೇಳಿದರು.

ಸುತ್ತೂರು ಮಠದ ಡಾ.ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿ ಅವರ 102 ನೇ ಜಯಂತಿ ಅಂಗವಾಗಿ, ಪಟ್ಟಣದ ಗುರುವೇಗೌಡ ಕಲ್ಯಾಣ ಮಂಟಪದಲ್ಲಿ ಶುಕ್ರವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಸಾಕಷ್ಟು ಬೆಳವಣಿಗೆಯಾಗುತ್ತಿದೆ. ಈ ನಿಟ್ಟಿನಲ್ಲಿ ಗುಣಮಟ್ಟದ ಶಿಕ್ಷಣ ಮಕ್ಕಳಿಗೆ ಅತ್ಯಗತ್ಯ, ಈ ನಿಟ್ಟಿನಲ್ಲಿ ಸುತ್ತೂರು ಮಠದ ಶ್ರೀಗಳು ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲೂ ಶಿಕ್ಷಣ ಸಂಸ್ಥೆಗಳನ್ನು ತೆರೆದು ವಿದ್ಯಾದಾನಕ್ಕೆ ಆದ್ಯತೆ ನೀಡಿರುವುದು ಶ್ಲಾಘನೀಯ. ಅಷ್ಟೆ ಅಲ್ಲದೆ ಶ್ರೀಗಳು ಕಟ್ಟಿದ ಸಂಸ್ಥೆ, ತಾಲೂಕು ಮತ್ತು ಗ್ರಾಮೀಣ ಮಟ್ಟದಲ್ಲೂ ಶಿಕ್ಷಣ ಕೇಂದ್ರಗಳನ್ನು ತೆರೆದು ಗುಣ ಮಟ್ಟದ ಶಿಕ್ಷಣದ ಜೊತೆಗೆ ಮಕ್ಕಳನ್ನು ಮನುಷ್ಯತ್ವದ ಹಾದಿಯಲ್ಲಿ ಕೊಂಡೊಯ್ಯುವ ಕೆಲಸ ಮಾಡಿದ್ದಾರೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ತಮ್ಮಡಿಹಳ್ಳಿ ವಿರಕ್ತ ಮಠದ ಡಾ.ಅಭಿನವ ಮಲ್ಲಿಕಾರ್ಜುನ ಸ್ವಾಮಿ ಮಾತನಾಡಿ, ಮಕ್ಕಳು ತಮ್ಮನ್ನು ತಾವು ಅರ್ಥ ಮಾಡಿಕೊಳ್ಳುವ ವಯಸ್ಸಿಗೆ ಬರುವವರೆಗೆ ಪೋಷಕರು ತೀವ್ರ ನಿಗಾ ಹಾಗೂ ಎಚ್ಚರವಹಿಸುವುದು ಅತ್ಯಗತ್ಯ. ಅವರ ಮನಸ್ಸು ಮೊಬೈಲ್, ವಿಡಿಯೋ ಗೇಮ್ಸ್ ಸೇರಿದಂತೆ ಇತರೆ ದುಷ್ಚಟಗಳ ಆಕರ್ಷಣೆಗೆ ಒಳಗಾಗದಂತೆ ಎಚ್ಚರ ವಹಿಸಬೇಕು, ವಿಡಿಯೋ ಗೇಮ್‌ಗಳನ್ನು ನೋಡಿ ಮಕ್ಕಳು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ ಎಂದರೆ, ಇವು ಸಮಾಜಕ್ಕೆ ಬೇಕೆ ಎಂದು ಆಲೋಚಿಸಬೇಕು ಎಂದರು.

ಕಾರ್ಯಕ್ರಮಲ್ಲಿ ಕಿರಿಕೊಡ್ಲಿ ಮಠದ ಸದಾಶಿವಸ್ವಾಮಿ, ಕಲ್ಮಠದ ಮಹಾಂತಸ್ವಾಮಿ, ಮಲೆನಾಡು ವೀರಶೈವ ಸಮಾಜದ ಅಧ್ಯಕ್ಷ ಶಶಿಧರ್, ಕಾರ್ಯದರ್ಶಿ ಧರ್ಮಪ್ಪ, ಪುರಸಭೆ ಅಧ್ಯಕ್ಷೆ ಪುಷ್ಪಾವತಿ, ಕಾಂಗ್ರೆಸ್ ಮುಖಂಡ ವಿಧ್ಯಾಶಂಕರ್, ತಾ.ಪಂ ಮಾಜಿ ಉಪಾಧ್ಯಕ್ಷ ಯಡೇಹಳ್ಳಿ ಮಂಜುನಾಥ್, ವೀರಶೈವ ಯುವ ವೇದಿಕೆ ಅಧ್ಯಕ್ಷ ಅರಕೆರೆ ನರೇಶ್, ಅಖಿಲ ಭಾರತ ವೀರಶೈವ ಸಮಾಜದ ತಾಲೂಕು ಅಧ್ಯಕ್ಷ ಯತೀಶ್, ಜೆಎಸ್‌ಎಸ್ ಪಬ್ಲಿಕ್ ಶಾಲೆ ಪ್ರಾಂಶುಪಾಲ ಮಧುಕುಮಾರ್ ಮುಂತಾದವರು ವೇದಿಕೆಯಲ್ಲಿದ್ದರು.

ಇದೆ ಸಂದರ್ಭ ಬಾಗೆಯ ಜೆಎಸ್‌ಎಸ್ ಪಬ್ಲಿಕ್ ಶಾಲೆಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿಧ್ಯಾರ್ಥಿಗಳಿಗೆ ಕಾಫಿ ಬೆಳೆಗಾರ ವೈ.ಎಸ್.ಗಿರೀಶ್ ದಂಪತಿಗಳು ಪಶಸ್ತಿ ನೀಡಿದರು.

ಇದಕ್ಕೂ ಮೊದಲು ಪಟ್ಟಣದ ಸಕಲೇಶ್ವರಸ್ವಾಮಿ ದೇವಸ್ಥಾನದ ಸಮೀಪದಿಂದ ಪ್ರಮುಖ ಬೀದಿಗಳಲ್ಲಿ ರಾಜೇಂದ್ರಶ್ರೀಯವರ ಭಾವಚಿತ್ರ ಮೆರವಣಿಗೆ ನಡೆಸಲಾಯಿತು. ಮೆರವಣಿಗೆಯಲ್ಲಿ ಜೆಎಸ್‌ಎಸ್ ಶಾಲೆಗಳ ವಿದ್ಯಾರ್ಥಿಗಳು ಶಿಕ್ಷಕರು, ಮಲೆನಾಡು ವೀರಶೈವ ಸಮಾಜ, ಅಕ್ಕಮಹಾದೇವಿ ಮಹಿಳಾ ವೇದಿಕೆ ಸೇರಿದಂತೆ ನಾನಾ ಸಂಘಸಂಸ್ಥೆಗಳ ಕಾರ್ಯಕರ್ತರು ಪಾಲ್ಗೊಂಡಿದ್ದರು.

ಜಯಂತಿ ಕಾರ್ಯಕ್ರಮದ ಅಂಗವಾಗಿ ಬೆಳಗ್ಗೆ ರೋಟರಿ ಶ್ರವಣದೋಷವುಳ್ಳ ಮಕ್ಕಳ ಶಾಲೆಯ ವಿಧ್ಯಾರ್ಥಿಗಳಿಗೆ ಮತ್ತು ಸರಕಾರಿ ಕ್ರಾಫರ್ಡ್ ಆಸ್ಪತ್ರೆ ರೋಗಿಗಳಿಗೆ ಹಣ್ಣುಹಂಪಲು, ಸಿಹಿ ಹಂಚಲಾಯಿತು.

PRINCIPAL
J.S.S. Institute of Education
P.B. 26, SAKALESHPUR-573 134
Hassan Dist

# ಸುತ್ತೂರು ಜಾತ್ರಾ ಪ್ರಚಾರ ರಥಕ್ಕೆ ಸ್ವಾಗತ

## ಜ. 13 ರಿಂದ 18 ರವರೆಗೆ ಸುತ್ತೂರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವ

• **ಕನ್ನಡಪ್ರಭ ವಾರ್ತೆ** ಸಕಲೇಶಪುರ

ಸುತ್ತೂರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವ ಜ. 13 ರಿಂದ 18 ರವರೆಗೆ ನಡೆಯಲಿದೆ ಈ ಜಾತ್ರಾ ಮಹೋತ್ಸವದ ಪ್ರಚಾರದ ಅಂಗವಾಗಿ ಸಕಲೇಶಪುರ ಹಾಗೂ ಹಾಸನ ನಗರಕ್ಕೆ ಶುಕ್ರವಾರ ಜಾತ್ರಾ ಪ್ರಚಾರದ ರಥ ಆಗಮಿಸಿತು.

ಸಕಲೇಶಪುರ ಪಟ್ಟಣದಲ್ಲಿ ಜಾತ್ರಾ ಪ್ರಚಾರ ರಥವನ್ನು ಜೆಎಸ್‌ಎಸ್ ಶಾಲಾ ಕಾಲೇಜಿನ ಸಿಬ್ಬಂದಿ ಹಾಗೂ ವೀರಶೈವ ಸಮಾಜದ ಮುಖಂಡರು ಸ್ವಾಗತಿಸಿದರು.

ಈ ವೇಳೆ ಪ್ರಚಾರ ಸಮಿತಿಯ ಪರವಾಗಿ ವೀರಶೈವ ಮುಖಂಡ ದಿವಾನ್ ದೇವರಾಜ್ ಮಾತನಾಡಿ, ಸುತ್ತೂರಿನಲ್ಲಿ ನಡೆಯುವ ಜಾತ್ರೆಯಲ್ಲಿ ಹಲವಾರು ಜನಪದ ತಂಡಗಳು ಕಲಾ ಪ್ರದರ್ಶನ ನೀಡಲಿದೆ. ಆರು ದಿನಗಳು ನಡೆಯುವ ಜಾತ್ರೆಯಲ್ಲಿ ಧಾರ್ಮಿಕ ಸಭೆ, ಸಾಮೂಹಿಕ ವಿವಾಹ, ವಸ್ತು ಪ್ರದರ್ಶನ, ಕೃಷಿಮೇಳ ಹಾಗೂ ಸಮ್ಮೇಳನ,ಭಜನಾ ಮೇಳ, ಕುಸ್ತಿಪಂದ್ಯಾವಳಿ ದೇಶಿ ಕ್ರೀಡಾ ಸ್ಪರ್ಧೆಗಳು, ರಂಗೋಲಿ, ಚಿತ್ರಕಲಾ ಸ್ಪರ್ಧೆ ಹಾಗೂ ಕೃಷಿ ಉತ್ತೇಜನಕ್ಕಾಗಿ ಸುಮಾರು ನೂರರಷ್ಟು ಪ್ರದರ್ಶನ ಮಳಿಗೆಗಳು ಸ್ಥಾಪಿಸಲಾಗಿದೆ.

**ಸಾರ್ವಜನಿಕರಿಗೆ ದಿನನಿತ್ಯ ದಾಸೋಹ ಹಾಗೂ ವಸತಿ ವ್ಯವಸ್ಥೆ ಇದೆ:** ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಸಕಲೇಶಪುರ ಸಂಯೋಜಕ ಮಂಜುನಾಥ್ ಮಾತನಾಡಿ, ಐತಿಹಾಸಿಕ ಹಿನ್ನೆಲೆ ಹೊಂದಿರುವ ಸುತ್ತೂರು ಮಠದಲ್ಲಿ ಸುಮಾರು 6ದಿನಗಳ ಕಾಲ ಜಾತ್ರ ಮಹೋತ್ಸವ ನಡೆಯಲಿದ್ದು ನಾಡಿನ ಹೆಸರಾಂತ ರಾಜಕೀಯ ಮುತ್ಸದ್ದಿಗಳು, ಸಾಹಿತಿಗಳು, ವಿವಿಧ ರಂಗಗಳಲ್ಲಿ ಸಾಧನೆ ಮಾಡಿರುವ



ಹಾಸನ ನಗರಕ್ಕೆ ಆಗಮಿಸಿದ ಜಾತ್ರಾ ಪ್ರಚಾರ ರಥವನ್ನು ಸ್ವಾಗತಿಸಲಾಯಿತು.

ಗಣ್ಯರುಗಳುಭಾಗವಹಿಸಲಿದ್ದಾರೆಎಂದರು. ಈ ವೇಳೆ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಯ ಪ್ರಾಂಶುಪಾಲಸುರೇಶ್,ಗಂಗಾಧರಸ್ವಾಮಿ, ರೇಣುಕಾಚಾರ್ಯ, ವೀರಶೈವ ನೌಕರರ ಸಂಘದ ಅಧ್ಯಕ್ಷ ದಿವಾಕರ್, ತಾಲೂಕು ಕಾಂಗ್ರೆಸ್ ಮಾಜಿ ಅಧ್ಯಕ್ಷ ವಿದ್ಯಾಶಂಕರ್, ಮಲೆನಾಡು ವೀರಶೈವ ಸಮಾಜದ ಶಶಿಧರ್ ಇತರರು ಇದ್ದರು.

**ಹಾಸನಕ್ಕೂ ಆಗಮಿಸಿದ ಪ್ರಚಾರ ರಥ:** ಮೈಸೂರು ಜಿಲ್ಲೆಯ ಶ್ರೀ ಕ್ಷೇತ್ರ ಸುತ್ತೂರುನಲ್ಲಿ ನಡೆಯುವ 6 ದಿನಗಳ ಜಾತ್ರಾ ಮಹೋತ್ಸವದ ಅಂಗವಾಗಿ ಶುಕ್ರವಾರ ಮಧ್ಯಾಹ್ನ ನಗರಕ್ಕೆ ರಥ ಆಗಮಿಸಿದಾಗ ವೀರಶೈವ ಮುಖಂಡರು ಭವ್ಯ ಸ್ವಾಗತ ನೀಡಿ ಬರಮಾಡಿಕೊಂಡರು. ನಗರದ ಅರಳೇಪೇಟೆ ರಸ್ತೆ ಬಳಿ ಇರುವ ಶ್ರೀ ಬಸವೇಶ್ವರ ದೇವಸ್ಥಾನಕ್ಕೆ ಸುತ್ತೂರು ಜಾತ್ರೆಯ ಜಾಗೃತಿ ರಥ ಆಗಮಿಸಿತು. ಈ ವೇಳೆ ಪುಷ್ಪವನ್ನು ಅರ್ಪಿಸಿ ನಮನ ಸಲ್ಲಿಸಿದರು. ಜೊತೆಗೆ ತೆಪ್ಪೋತ್ಸವ, ಲಕ್ಷದೀಪೋತ್ಸವ ವೀಕ್ಷಣೆ ಮಾಡಲು ನಾಡಿನ ಬೇರೆ ಬೇರೆ ಭಾಗಗಳಿಂದ ಆಗಮಿಸಲಿ ದ್ದಾರೆ. ಬಂದವರಿಗೆಲ್ಲಾ ಪ್ರಸಾದದ ವ್ಯವಸ್ಥೆ ಮಾಡಲಾಗಿದೆ. ತಾತ್ಕಲಿಕ ವಸತಿ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ಶ್ರೀ ವೀರಶೈವ ಸಂಘದ ಅಧ್ಯಕ್ಷ ಬಿ.ಪಿ. ಐಸಾಮೇಗೌಡ ತಿಳಿಸಿದ್ದಾರೆ.

ವೀರಶೈವ ಸಂಘದ ಕಾರ್ಯದರ್ಶಿ ಭುವನಾಕ್ಷ, ಸಹ ಕಾರ್ಯದರ್ಶಿ ಎಚ್. ಕೆ. ಲೋಕೇಶ್, ಕಿರಣ್ ಕುಮಾರ್, ನಿರ್ದೇಶಕ ಎಚ್. ಮಲ್ಲಿಕ್, ಅಖಿಲ ವೀರಶೈವ ಸಂಘದ ಕಟ್ಟಾಯ ಶಿವಕುಮಾರ್, ಕೀರ್ತಿಕುಮಾರ್, ಕುಮಾರ ಸ್ವಾಮಿ, ನಂಜುಂಡಪ್ಪ ಹಾಗೂ ಸಂಗಂ ಇತರರು ಇದ್ದರು.

ಕನ್ನಡ ಪ್ರಭ Page-4

ದಿನಾಂಕ 9-12-2017

PRINCIPAL
J.S.S. Institute of Education
P.B. 26, SAKALESHPUR-573 134
Hassan Dist

# ಸುತ್ತೂರು ಜಾತ್ರೆ ಪ್ರಚಾರ ರಥಕ್ಕೆ ಸ್ವಾಗತ

■ ವಿಜಯವಾಣಿ ಸುದ್ದಿಜಾಲ ಸಕಲೇಶಪುರ

ಸುತ್ತೂರು ಶ್ರೀ ಕ್ಷೇತ್ರದಲ್ಲಿ ಶ್ರೀಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವ ಹಿನ್ನೆಲೆಯಲ್ಲಿ ಪಟ್ಟಣಕ್ಕೆ ಆಗಮಿಸಿದ ಪ್ರಚಾರ ರಥವನ್ನು ಜೆಎಸ್‌ಎಸ್ ಶಾಲೆ, ಕಾಲೇಜಿನ ಸಿಬ್ಬಂದಿ ಹಾಗೂ ವೀರಶೈವ ಸಮಾಜದ ಮುಖಂಡರು ಸ್ವಾಗತಿಸಿದರು.

ಪ್ರಚಾರ ಸಮಿತಿ ಪರವಾಗಿ ವೀರಶೈವ ಮುಖಂಡ ದಿವಾನ್ ದೇವರಾಜ್ ಮಾತನಾಡಿ, ಜ.13ರಿಂದ 18ರವರೆಗೆ ಮೈಸೂರಿನ ಸುತ್ತೂರಿನಲ್ಲಿ ನಡೆಯುವ ಜಾತ್ರೆಯಲ್ಲಿ ಹಲವು ಜಾನಪದ ತಂಡಗಳು ಕಲಾ ಪ್ರದರ್ಶನ ನೀಡಲಿವೆ. ಆರು ದಿನಗಳ ಜಾತ್ರೆಯಲ್ಲಿ ಧಾರ್ಮಿಕ ಸಭೆ, ಸಾಮೂಹಿಕ ವಿವಾಹ, ವಸ್ತು ಪ್ರದರ್ಶನ, ಕೃಷಿಮೇಳ, ಭಜನಾ ಮೇಳ, ಕುಸ್ತಿ ಪಂದ್ಯಾವಳಿ, ದೇಶಿ ಕ್ರೀಡಾ ಸ್ಪರ್ಧೆಗಳು, ರಂಗೋಲಿ, ಚಿತ್ರಕಲಾ ಸ್ಪರ್ಧೆ ಸೇರಿದಂತೆ ಹಲವು ಕಾರ್ಯಕ್ರಮಗಳು ನಡೆಯಲಿವೆ. ಈ ಭಾಗದಿಂದ ಹೆಚ್ಚಿನ ಸಂಖ್ಯೆಯಲ್ಲಿ ಜನರು ಬಂದು ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು. ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಸಕಲೇಶಪುರ ಸಂಯೋಜಕ ಮಂಜುನಾಥ್, ಜೆಎಸ್ ಎಸ್ ಶಿಕ್ಷಣ ಸಂಸ್ಥೆ ಪ್ರಾಂಶುಪಾಲ ಸುರೇಶ್, ಗಂಗಾಧರಸ್ವಾಮಿ, ರೇಣುಕಾಚಾರ್ಯ, ವೀರಶೈವ ನೌಕರರ ಸಂಘದ ಅಧ್ಯಕ್ಷ ದಿವಾಕರ್, ತಾಲೂಕು ಕಾಂಗ್ರೆಸ್ ಮಾಜಿ ಅಧ್ಯಕ್ಷ ವಿದ್ಯಾಶಂಕರ್ ಇದ್ದರು.

ವಿಜಯವಾಣಿ ಚಿತ್ರ



ಸುತ್ತೂರು ಜಾತ್ರಾ ಮಹೋತ್ಸವದ ಅಂಗವಾಗಿ ಸಕಲೇಶಪುರಕ್ಕೆ ಆಗಮಿಸಿದ ಜಾತ್ರಾ ಪ್ರಚಾರ ರಥವನ್ನು ಸ್ವಾಗತಿಸಲಾಯಿತು.

ವಿಜಯವಾಣಿ Page - 4 ದಿನಾಂಕ 9-12-2017

PRINCIPAL
J.S.S. Institute of Education
P.B. 26, SAKALESHPUR-573 134
Hassan Dist

# ಮಲೆನಾಡಿನಲ್ಲೂ ವಾಯು ಮಾಲಿನ್ಯ: ಆತಂಕ

ಪ್ರಜಾವಾಣಿ · 19-6-19 · P-3B

ಪ್ರಜಾವಾಣಿ ವಾರ್ತೆ



ಜೆಎಸ್‌ಎಸ್ ಬಿಇಡಿ ಕಾಲೇಜಿನಲ್ಲಿ ಅರಣ್ಯ ಇಲಾಖೆ ಅಧಿಕಾರಿಗಳು, ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಗಿಡಗಳನ್ನು ನೆಟ್ಟರು

ಸಕಲೇಶಪುರ: ಏರುತ್ತಿರುವ ಜಾಗತೀಕ ತಾಪಮಾನ ತಡೆಯುವ ನಿಟ್ಟಿನಲ್ಲಿ ಯುವಕರು, ವಿದ್ಯಾರ್ಥಿಗಳು ಮರಗಿಡ, ಕಾಡುಗಳನ್ನು ಸಂರಕ್ಷಣೆ ಮಾಡುತ್ತೇವೆ ಎಂದು ತಮಗೆ ತಾವೇ ಪ್ರಮಾಣ ಮಾಡಿಕೊಳ್ಳಬೇಕಾದ ಸ್ಥಿತಿ ನಿರ್ಮಾಣವಾಗಿದೆ ಎಂದು ಕೌಡಹಳ್ಳಿಯ ಜೆಎಸ್‌ಎಸ್ ಬಿಇಡಿ ಕಾಲೇಜು ಪ್ರಾಂಶುಪಾಲ ಡಾ. ಎನ್.ಎಸ್.ಸುರೇಶ್ ಹೇಳಿದರು.

ಕಾಲೇಜು ಆವರಣದಲ್ಲಿ ಅರಣ್ಯ ಇಲಾಖೆ ಹಾಗೂ ಕಾಲೇಜು ವತಿಯಿಂದ ಸೋಮವಾರ ನಡೆದ ವನಮಹೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದರು. ಮಲೆನಾಡಿನ ಈ ಭಾಗದಲ್ಲಿಯೇ ನಾವು ಉಸಿರಾಡುವ ಗಾಳಿಯೂ ಸಹ ಬಿಸಿಯಾಗಿದೆ. ಹೈಟೆಕ್ ರಸ್ತೆಗಳು, ವಿವಿಧ ಯೋಜನೆಗಳಿಗಾಗಿ ಹಿಂದು ಮುಂದು ನೋಡದೆ ನಿರ್ಧಾಕ್ಷಣ್ಯವಾಗಿ ಮರಗಳನ್ನು ಕಡಿದು ಬಟಾ ಬಯಲು ಮಾಡುತ್ತಿದ್ದೇವೆ. ನಮ್ಮ ಸ್ವಾರ್ಥಕ್ಕಾಗಿ ಕೋಟ್ಯಂತರ ವರ್ಷಗಳಿಂದ ನೈಸರ್ಗಿಕವಾಗಿ ಇರುವ ವ್ಯವಸ್ಥೆಯನ್ನು ಹಾಳು ಮಾಡಿದ್ದೇವೆ. ಇಂತಹ ತಪ್ಪುಗಳು ಮುಂದೆ ಆಗದಂತೆ ತಡೆಯುವ ಶಕ್ತಿ ಯುವಕರಿಗೆ ವಿದ್ಯಾರ್ಥಿಗಳಿಗೆ ಮಾತ್ರ ಇದೆ ಎಂದರು. ಆ ನಿಟ್ಟಿನಲ್ಲಿ ಪರಿಸರ ಸಂರಕ್ಷಣೆ ಮಾಡಲು ಎಲ್ಲರೂ ಕೈಜೋಡಿಸಬೇಕು ಎಂದರು.

ಉಪ ವಲಯ ಅರಣ್ಯ ಅಧಿಕಾರಿ ಎಚ್.ಜಿ. ಪೃಥ್ವಿ, ಹೇಮಂತ್, ಮಂಜುನಾಥ್, ಅರಣ್ಯ ರಕ್ಷಕ ವೇಣುಗೋಪಾಲ್, ಪ್ರಾಧ್ಯಾಪಕರಾದ ಡಾ. ವೀರಯ್ಯ, ಡಾ. ದಿನೇಶ್, ಡಾ.ನಂಜುಂಡಸ್ವಾಮಿ, ಕಾಳೇಗೌಡ, ಮೀನಾಕ್ಷಿ, ಖಾದರ್ ಇತರರು ಇದ್ದರು.

PRINCIPAL
J.S.S. Institute of Education
P.B. 26, SAKALESHPUR-573 134
Hassan Dist

ಪ್ರಜಾವಾಣಿ 19/6/19



# ಪರಿಸರ ಸಂರಕ್ಷಣೆ ಎಲ್ಲರ ಹೊಣೆ

ಪ್ರಜಾವಾಣಿ ವಾರ್ತೆ



ಹೆತ್ತೂರು ಕರ್ನಾಟಕ ಪಬ್ಲಿಕ್ ಶಾಲೆ ಆವರಣದಲ್ಲಿ ಯುವ ರೈತ ಸಂಘದಿಂದ ಗಿಡ ನೆಡಲಾಯಿತು

ಹೆತ್ತೂರು: ಪರಿಸರ ಸಂರಕ್ಷಣೆ ಎಲ್ಲರ ಹೊಣೆಯಾಗಿದ್ದು ಮರಗಿಡಗಳನ್ನು ಬೆಳೆಸಲು ಪ್ರತಿಯೊಬ್ಬರೂ ಕೈಜೋಡಿಸಬೇಕು ಎಂದು ಯುವ ರೈತ ಸಂಘದ ಅಧ್ಯಕ್ಷ ಎಚ್.ಎಂ.ಡಿಲಾಕ್ಷ ಹೇಳಿದರು.

ಹೆತ್ತೂರು ಕರ್ನಾಟಕ ಪಬ್ಲಿಕ್ ಶಾಲೆ ಆವರಣದಲ್ಲಿ ಸಾವಿರ ಗಿಡಗಳನ್ನು ನೆಡುವ ಕಾರ್ಯಕ್ಕೆ ಚಾಲನೆ ನೀಡಿ ಮಾತಾನಾಡಿದ ಅವರು, 'ನಮ್ಮ ಮನೆ ಸ್ವಚ್ಛವಿದ್ದರೆ ಸಾಲದು ಪರಿಸರವನ್ನೂ ಸುಂದರವಾಗಿಡಬೇಕು. ಮಾಲಿನ್ಯ ತಡೆಗಟ್ಟುವ ನಿಟ್ಟಿನಲ್ಲಿ ಜನರು ಎಚ್ಚರ ವಹಿಸಬೇಕು. ಪರಿಸರವನ್ನು ನಾವು ಅನುಭವಿಸಿದರೆ ಸಾಲುವುದಿಲ್ಲ. ಮುಂದಿನ ಪೀಳಿಗೆಗೂ ಉತ್ತಮ ಪರಿಸರವನ್ನು ಬಿಟ್ಟುಹೋಗಬೇಕು ಎಂದು ಹೇಳಿದರು.

ಉಪವಲಯ ಅರಣ್ಯಾಧಿಕಾರಿ ಪ್ರವೀಣ್, ಹಳೆ ವಿದ್ಯಾರ್ಥಿ ಸಂಘದ ಕಾರ್ಯದರ್ಶಿ ಸಚಿನ್, ಸಂಘದ ಸದಸ್ಯರಾದ ರಾಶಿ, ಕಿಶೋರ್, ಅಶೋಕ್, ಕೀರ್ತಿ, ಲಿಖಿತ್, ಉಮೇಶ್, ಸಿಬ್ಬಂದಿ ನವೀನ್, ಕುಶಾಲ್, ರಘು ಇತರರು ಹಾಜರಿದ್ದರು.

PRINCIPAL
J.S.S. Institute of Education
P.B. 26, SAKALESHPUR-573 134
Hassan Dist

ವಿಜಯವಾಣಿ 10-7-2019

# ಶಿಕ್ಷಣ ನೀತಿಯಲ್ಲಿ ಕಲಿಕಾವಕಾಶ

## ಕರಡು ಪ್ರತಿ ಸಿದ್ಧಪಡಿಸಿದ ಸಮಿತಿ ಅಧ್ಯಕ್ಷ ಡಾ.ಕೆ.ಕಸ್ತೂರಿ ರಂಗನ್ ಅಭಿಪ್ರಾಯ

■ ವಿಜಯವಾಣಿ ಸುದ್ದಿಜಾಲ ಮೈಸೂರು

ಈಗ ಸಿದ್ಧಪಡಿಸುತ್ತಿರುವ ರಾಷ್ಟ್ರೀಯ ಶಿಕ್ಷಣ ನೀತಿಯು ಸಾಮಾಜಿಕ ಒಳಗೊಳ್ಳುವಿಕೆ, ಸಮಾನ ಶಿಕ್ಷಣ ಮತ್ತು ವೃತ್ತಿಯಾಧರಿತ ಶಿಕ್ಷಣದ ಆಶಯ ಒಳಗೊಂಡಿದ್ದು, 2030 ಹೊತ್ತಿಗೆ ಎಲ್ಲರಿಗೂ ಕಲಿಕಾವಕಾಶ ದಕ್ಕಿಸಿಕೊಡಬೇಕೆಂಬ ಮೂಲ ಉದ್ದೇಶ ಹೊಂದಿದೆ ಎಂದು ರಾಷ್ಟ್ರೀಯ ಶಿಕ್ಷಣ ನೀತಿ ಕರಡು ಪ್ರತಿ ಸಿದ್ಧಪಡಿಸಿದ ಸಮಿತಿಯ ಅಧ್ಯಕ್ಷ ಡಾ.ಕೆ.ಕಸ್ತೂರಿ ರಂಗನ್ ಅಭಿಪ್ರಾಯಪಟ್ಟರು.

ಮೈಸೂರು ವಿವಿ, ಕರ್ನಾಟಕ ರಾಜ್ಯ ವಿಶ್ರಾಂತ ಕುಲಪತಿಗಳ ಸಂಘದ ವತಿಯಿಂದ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಮಂಗಳವಾರ ಆಯೋಜಿಸಿದ್ದ 'ರಾಷ್ಟ್ರೀಯ ಶಿಕ್ಷಣ ನೀತಿ- 2019' ಕುರಿತ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದರು.

ರಾಷ್ಟ್ರೀಯ ಶಿಕ್ಷಣ ನೀತಿ-2019ರಲ್ಲಿ ಉದ್ಯೋಗ, ಕೌಶಲ ಮತ್ತು ಸಂಶೋಧನೆಗೆ ಒತ್ತು ನೀಡಲಾಗಿದ್ದು, ವೃತ್ತಿಯಾಧರಿತ ಶಿಕ್ಷಣ ಎಲ್ಲ ವಿದ್ಯಾರ್ಥಿ ಗಳಿಗೂ ಸಿಗಬೇಕೆಂಬ ಆಶಯ ಒಳಗೊಂಡಿದೆ. ಈ ನೀತಿ ರೂಪಿಸಲು ಎಲ್ಲ ಹಂತದಲ್ಲೂ ಚರ್ಚೆ ಮಾಡಿದ್ದು, ಸಂಶೋಧಕರು, ನೀತಿ ನಿರೂಪಕರು, ವಲಯ ತಜ್ಞರು, ಕೈಗಾರಿಕೋದ್ಯಮಿಗಳು, ಶಿಕ್ಷಣತಜ್ಞರು, ನಾಗರಿಕರ ಸಲಹೆ ಪಡೆದು ಯೋಜನೆ ರೂಪಿಸಲಾಗಿದೆ. ಮುಂದಿನ 20 ವರ್ಷದವರೆಗೆ ಈ ಶಿಕ್ಷಣ ನೀತಿಯನ್ನು ರೂಪಿಸಲಾಗಿದೆ ಎಂದರು.

### ಬಿ.ಇಡಿ ಅವಧಿ ಬದಲಾವಣೆ ಇಲ್ಲ

ಬ್ಯಾಚುಲರ್ ಆಫ್ ಎಜುಕೇಷನ್ (ಬಿ.ಇಡಿ) ಅವಧಿಯು 1 ವರ್ಷ ಇದ್ದು. ಈಗ 2 ವರ್ಷಕ್ಕೆ ಜಿಗಿದಿದೆ. ಈ ಪದ್ಧತಿ 2030 ರವರೆಗೂ ಮುಂದುವರಿಯಲಿದ್ದು, ನಂತರ 4 ವರ್ಷಕ್ಕೆ ವಿಸ್ತರಣೆಯಾಗಲಿದೆ ಎಂದು ಕಸ್ತೂರಿ ರಂಗನ್ ಸ್ಪಷ್ಟ ಪಡಿಸಿದರು.

ವಿದ್ಯಾರ್ಥಿಗಳು ತಾವು ಕಲಿತ ವಿಷಯದ ಮೂಲಕ ಕೌಶಲ ವೃದ್ಧಿಸಿಕೊಂಡು ಉದ್ಯೋಗ ಸೃಷ್ಟಿಸಿಕೊಳ್ಳಬೇಕು. ಪಿಯುಸಿ ಮುಗಿದ ತಕ್ಷಣ ಕೆಲಸಕ್ಕೆ ಹೋಗುವಂತಹ ವಾತಾವರಣ ನಿರ್ಮಾಣವಾಗಬೇಕು. ಒಂದೊಮ್ಮೆ ಪದವಿ ಮಾಡಲು ಸಾಧ್ಯವಾಗದೆ ಮೊಟಕುಗೊಳಿಸಿದರೆ ಬ್ರಿಡ್ಜ್ ಕೋರ್ಸ್ ಮೂಲಕ ಮತ್ತೆ ಡಿಗ್ರಿ ಪಡೆಯಲು ಅವಕಾಶವನ್ನು ರಾಷ್ಟ್ರೀಯ ಶಿಕ್ಷಣ ನೀತಿ ಒದಗಿಸಿದೆ. ಸಂಶೋಧನೆ, ವಿಜ್ಞಾನಕ್ಕೆ ಆದ್ಯತೆ ನೀಡಲಾಗಿದೆ. ಸಾಮಾಜಿಕ ಒಳಗೊಳ್ಳುವಿಕೆ ಮತ್ತು ಸಮಾನ ಶಿಕ್ಷಣದ ಆಶಯವನ್ನು ಇದು ಒಳಗೊಂಡಿದ್ದು, ಪ್ರಾಥಮಿಕ ಹಂತದ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಲಾಗಿದೆ ಎಂದರು.

ಮೈಸೂರು ವಿವಿ ಕುಲಪತಿ ಪ್ರೊ.ಜಿ. ಹೇಮಂತ್‌ಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ರಾಜ್ಯ ವಿಶ್ರಾಂತ ಕುಲಪತಿಗಳ ವೇದಿಕೆ ಅಧ್ಯಕ್ಷ ಪ್ರೊ.ಎಸ್.ಎನ್.ಹೆಗ್ಡೆ, ಕಾರ್ಯದರ್ಶಿ ಪ್ರೊ.ಆರ್.ಎನ್.ಶ್ರೀನಿವಾಸಗೌಡ, ಕುಲಸಚಿವ ಪ್ರೊ.ಲಿಂಗರಾಜ ಗಾಂಧಿ ಹಾಜರಿದ್ದರು.




'ರಾಷ್ಟ್ರೀಯ ಶಿಕ್ಷಣ ನೀತಿ- 2019' ಕುರಿತ ವಿಚಾರ ಸಂಕಿರಣಕ್ಕೆ ಡಾ.ಕೆ. ಕಸ್ತೂರಿ ರಂಗನ್ ಚಾಲನೆ ನೀಡಿದರು. ಪ್ರೊ.ಜಿ. ಹೇಮಂತ್‌ಕುಮಾರ್, ಪ್ರೊ.ಎಸ್.ಎನ್. ಹೆಗ್ಡೆ ಇತರರಿದ್ದರು.

### ಪದವಿ ವಿಂಗಡಣೆ

ರಾಜ್ಯದ ಎಲ್ಲ ವಿವಿಗಳಿಂದ ಶೇ. 93ರಷ್ಟು ಪದವೀಧರರು ಬರುತ್ತಾರೆ. 1 ಸಾವಿರ ವಿವಿಗಳು, 38 ಸಾವಿರ ಕಾಲೇಜುಗಳು, 10 ಸಾವಿರ ಸ್ವಾಯತ್ತ ಸಂಸ್ಥೆಗಳು, 36 ದಶಲಕ್ಷ ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಪಡೆಯುತ್ತಿದ್ದಾರೆ. ಶೇ.40 ರಷ್ಟು ಕಾಲೇಜುಗಳು ಪ್ರಶಿಕ್ಷಕರನ್ನು ತಯಾರಿಸುತ್ತಿವೆ. ಆದರೂ ಗುಣಮಟ್ಟದ ಶಿಕ್ಷಣದಲ್ಲಿ ವ್ಯತ್ಯಾಸ ಕಂಡು ಬರುತ್ತಿದೆ. ಮೂಲ ಸೌಕರ್ಯ ಕೊರತೆ ಇದೆ. ಹಾಗಾಗಿ 4 ವರ್ಷ ಪದವಿ, 1 ವರ್ಷ ಸ್ನಾತಕೋತ್ತರ ಪದವಿ ನೀಡ ಬಹುದು. 5 ವರ್ಷಗಳಿಗೆ ಎರಡು ಪದವಿ ವಿಂಗಡಣೆ ಮಾಡಬಹುದಾಗಿದೆ ಎಂದು ಡಾ.ಕೆ.ಕಸ್ತೂರಿ ರಂಗನ್ ತಿಳಿಸಿದರು.


### ಜಿಡಿಪಿ ಹೆಚ್ಚಳಕ್ಕೆ ಶಿಫಾರಸು

ಸದ್ಯದ ಪರಿಸ್ಥಿತಿಯಲ್ಲಿ ಶಿಕ್ಷಣಕ್ಕೆ ಶೇ.10ರಷ್ಟು ಜಿಡಿಪಿ ನೀಡ ಲಾಗುತ್ತಿದೆ. ಅದನ್ನು ಶೇ.20ರಷ್ಟಕ್ಕೆ ಹೆಚ್ಚು ಮಾಡಲು ಕರಡು ನೀತಿಯಲ್ಲಿ ತಿಳಿಸಲಾಗಿದೆ. ಸಂಶೋಧನಾ ಕ್ಷೇತ್ರದಲ್ಲಿ ಶೇ.6ರಷ್ಟು ಹೆಚ್ಚಳ ಮಾಡಲು ಶಿಫಾರಸು ಮಾಡಲಾಗಿದೆ. ಪ್ರೀ ಎಜುಕೇಷನ್‌ನಿಂದ ಹಿಡಿದು ಉನ್ನತ ಶಿಕ್ಷಣದವರೆಗೂ ಸಮಗ್ರ ದೃಷ್ಟಿಕೋನವನ್ನು ಒಳಗೊಂಡಿದೆ. ಈ ನೀತಿಯು ಪ್ರಮುಖವಾಗಿ ಗುಣಮಟ್ಟದ ಶಿಕ್ಷಣ, ಹಣಕಾಸು, ನಿಬಂಧನೆಗಳು, ಸಂಯೋಜನೆ ಕಲ್ಪಿಸುವ ಅಂಶಗಳನ್ನು ಒಳಗೊಂಡಿದೆ ಎಂದು ಡಾ.ಕೆ.ಕಸ್ತೂರಿ ರಂಗನ್ ತಿಳಿಸಿದರು.

PRINCIPAL
J.S.S. Institute of Education
P.B. 26, SAKALESHPUR-573 134
Hassan Dist

HSN 8

ಉದಯವಾಣಿ
11/7/19



ಸಕಲೇಶಪುರದ ಕೌಡಹಳ್ಳಿ ಜೆಎಸ್‌ಎಸ್ ಪಬ್ಲಿಕ್ ಶಾಲೆಯಲ್ಲಿ ನಡೆದ ಛದ್ಮವೇಶ ಸ್ಪರ್ಧೆಯಲ್ಲಿ ಪ್ರಶಿಕ್ಷಣಾರ್ಥಿಗಳು ವಿವಿಧ ವೇಷತೊಟ್ಟು ಗಮನ ಸೆಳೆದರು. ಪ್ರಾಂಶುಪಾಲ ಡಾ. ಎನ್.ಎಸ್. ಸುರೇಶ್ ಹಾಗೂ ಶಾಲಾ ಸಿಬ್ಬಂದಿ ಹಾಜರಿದ್ದರು.

PRINCIPAL
J.S.S. Institute of Education
P.B. 26, SAKALESHPUR-573 13
Hassan Dist

## ಯುವಕರಿಗೆ ರೆಡ್ ಕ್ರಾಸ್ ಸಂಸ್ಥೆಯ ಪಾಷಾ ಮನವಿ

# ಸ್ವಯಂ ಪ್ರೇರಿತ ರಕ್ತದಾನಕ್ಕೆ ಮುಂದಾಗಿ

**ವಿಕ ಸುದ್ದಿಲೋಕ** ಹಾಸನ

ರಕ್ತದಾನ ಮಹಾದಾನವಾಗಿದ್ದು, ಯುವಕರು ರಕ್ತದಾನ ಮಾಡಲು ಮುಂದೆ ಬಂದು ಜೀವ ಉಳಿಸುವ ಮಹತ್ಕಾರ್ಯಕ್ಕೆ ಕೈಜೋಡಿಸಬೇಕು ಎಂದು ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಜಿಲ್ಲಾ ಶಾಖೆ ನಿರ್ದೇಶಕ ಎಸ್.ಎಸ್. ಪಾಷಾ ತಿಳಿಸಿದರು.

ಜೆಎಸ್‌ಎಸ್ ಶಿಕ್ಷಣ ಮಹಾದ್ಯಾಲಯ, ಯುವ ರೆಡ್‌ಕ್ರಾಸ್ ಘಟಕ, ಐಕ್ಯೂಎಸಿ ಘಟಕ, ಸಕಲೇಶಪುರ, ಭಾರತೀಯರೆಡ್ ಕ್ರಾಸ್ ಸಂಸ್ಥೆ ಜಿಲ್ಲಾ ಶಾಖೆ, ಹಾಸನ ಮತ್ತು ತಾಲೂಕು ಘಟಕ ಸಕಲೇಶಪುರ, ರೋಟರಿ ಹಾಗೂ ಲಯನ್ಸ್ ಸಂಸ್ಥೆ ಸಕಲೇಶಪುರ ಆಶ್ರಯದಲ್ಲಿ ಲಿಂಗೈಕ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾ ಸ್ವಾಮೀಜಿಗಳ 108ನೇ ಜಯಂತ್ಯುತ್ಸವ ಪ್ರಯುಕ್ತ ಆಯೋಜಿಸಿದ್ದ 'ಸ್ವಯಂ ಪ್ರೇರಿತ ರಕ್ತದಾನ ಶಿಬಿರ' ಉದ್ಘಾಟಿಸಿ ಮಾತನಾಡಿದರು.

''ಸ್ವಯಂ ಪ್ರೇರಿತ ರಕ್ತದಾನ ಶಿಬಿರವನ್ನು ಜೆಎಸ್‌ಎಸ್ ಶಿಕ್ಷಣ ಮಹಾ ವಿದ್ಯಾಲಯ ಆಯೋಜಿಸಿರುವುದು ಶ್ಲಾಘನೀಯ ಮತ್ತು ಅನುಕರಣೀಯ. ರಕ್ತವನ್ನು ಕೃತಕವಾಗಿ ಸೃಷ್ಟಿಸಲು ಸಾಧ್ಯವಿಲ್ಲ. ಯುವಕರು ಸ್ವಯಂ ಪ್ರೇರಿತವಾಗಿ ರಕ್ತದಾನಕ್ಕೆ ಮುಂದಾಗಬೇಕು. ಈ ಮೂಲಕ ಅಮೂಲ್ಯ ಜೀವ ಕಾಪಾಡಬಹುದು,'' ಎಂದು ಅಭಿಪ್ರಾಯಪಟ್ಟರು.



**ಹಾಸನ ನಗರದಲ್ಲಿ ಯುವ ರೆಡ್‌ಕ್ರಾಸ್ ಘಟಕ, ಐಕ್ಯೂಎಸಿ ಘಟಕ, ಸಕಲೇಶಪುರದ ಜೆಎಸ್‌ಎಸ್ ಶಿಕ್ಷಣ ಮಹಾ ವಿದ್ಯಾಲಯ, ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಜಿಲ್ಲಾ ಶಾಖೆ, ಸಕಲೇಶಪುರ ರೋಟರಿ ಹಾಗೂ ಲಯನ್ಸ್ ಸಂಸ್ಥೆ ಆಶ್ರಯದಲ್ಲಿ ಡಾ. ಶಿವರಾತ್ರಿ ರಾಜೇಂದ್ರ ಸ್ವಾಮೀಜಿಗಳ 108ನೇ ಜಯಂತಿ ಮಹೋತ್ಸವದ ಪ್ರಯುಕ್ತ ಸ್ವಯಂ ಪ್ರೇರಿತ ರಕ್ತದಾನ ಶಿಬಿರ ನಡೆಯಿತು.**

ರೆಡ್‌ಕ್ರಾಸ್ ಸಂಸ್ಥೆ ಶಾಖೆಯ ಕಾರ್ಯದರ್ಶಿ ಶಬ್ಬೀರ್ ಅಹಮದ್, ನಿರ್ದೇಶಕ ಎಚ್.ಡಿ ಕುಮಾರ್, ಸಂಯೋಜಕ ಹರ್ಷಿತ್ ಎಚ್.ಆರ್, ಸಕಲೇಶಪುರ ತಾಲೂಕು ರೆಡ್‌ಕ್ರಾಸ್ ಘಟಕದ ಸಭಾಪತಿ ಶಾರದ ಗುರುಮೂರ್ತಿ, ಕಾರ್ಯದರ್ಶಿ ರೇಖಾ ಸುರೇಶ್, ಸದಾಶಿವ ಎಸ್.ಎಂ., ಸಕಲೇಶಪುರ ಲಯನ್ಸ್ ಕ್ಲಬ್ ಅಧ್ಯಕ್ಷ ಬಬಿತ ವಿಶ್ವನಾಥ್, ಎಚ್.ಎನ್ ದೇವರಾಜು (ದಿವಾನ್), ಲೋಹಿತ್ ಕೌಡಳ್ಳಿ, ಡಾ.ನಾಗಲಕ್ಷ್ಮಿ, ಅಶ್ವತ್ ಹಾಗೂ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಎಲ್ಲಾ ಮುಖ್ಯಸ್ಥರು ಮತ್ತು ಸಿಬ್ಬಂದಿ ವರ್ಗ ಹಾಜರಿದ್ದರು.

ಕಾಲೇಜಿನ ಸಿಬ್ಬಂದಿ ವರ್ಗ ಹಾಗೂ ಬಿಎಡ್ ಪ್ರಶಿಕ್ಷಣಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿ ಸ್ವಯಂ ಪ್ರೇರಿತರಾಗಿ ರಕ್ತದಾನ ಮಾಡಿದರು.

ವಿಜಯ ಕರ್ನಾಟಕ
ದಿನಾಂಕ: 05-09-2023

PRINCIPAL
J.S.S. Institute of Education
P.B. 26, SAKALESHPUR-573134
Hassan Dist.

ಜನತಾ ಮಾಧ್ಯಮ.
ದಿನಾಂಕ 5-9-2023.



# ರಾಜೇಂದ್ರ ಮಹಾಸ್ವಾಮಿ 108ನೇ ಜಯಂತಿ: ಸ್ವಯಂ ಪ್ರೇರಿತ ರಕ್ತದಾನ



ಸಕಲೇಶಪುರ: ಯುವ ರೆಡ್‌ಕ್ರಾಸ್ ಘಟಕ, ಐಕ್ಯೂಎಸಿ ಘಟಕ, ಜೆಎಸ್‌ಎಸ್ ಶಿಕ್ಷಣ ಮಹಾವಿದ್ಯಾಲಯ, ಸಕಲೇಶಪುರ, ಭಾರತೀಯರೆಡ್‌ಕ್ರಾಸ್ ಸಂಸ್ಥೆ, ಜಿಲ್ಲಾ ಶಾಖೆ, ಹಾಸನ ಮತ್ತು ತಾಲ್ಲೂಕು ಘಟಕ, ಸಕಲೇಶಪುರ,ರೋಟರಿ ಹಾಗೂ ಲಯನ್ಸ್ ಸಂಸ್ಥೆ ಸಕಲೇಶಪುರ ಇವರುಗಳ ಸಹಯೋಗದೊಂದಿಗೆ ಪರಮಪೂಜ್ಯ ಲಿಂಗೈಕ್ಯಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರಮಹಾ ಸ್ವಾಮಿಗಳವರ 108ನೇ ಜಯಂತಿ ಮಹೋತ್ಸವದ ಅಂಗವಾಗಿ ಸ್ವಯಂ ಪ್ರೇರಿತ ರಕ್ತದಾನ ಶಿಬಿರವನ್ನು ಪರಮಪೂಜ್ಯ ಲಿಂಗೈಕ್ಯಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಭಾವಚಿತ್ರಕ್ಕೆ ಪುಷ್ಪಾರ್ಚನೆಯನ್ನು ಸಲ್ಲಿಸಿ ಉದ್ಘಾಟಿಸಲಾಯಿತು.

ಈ ಶಿಬಿರದ ಉದ್ಘಾಟಕರಾಗಿ ಆಗಮಿಸಿದ ಎಸ್.ಎಸ್ ಪಾಷಾ, ನಿರ್ದೇಶಕರು, ಭಾರತೀಯರೆಡ್ ಕ್ರಾಸ್ ಸಂಸ್ಥೆ, ಜಿಲ್ಲಾ ಶಾಖೆ, ಹಾಸನ ರವರು ಉದ್ಘಾಟನಾ ಭಾಷಣದಲ್ಲಿ ಪರಮಪೂಜ್ಯ ಲಿಂಗೈಕ್ಯಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 108ನೇ ಜಯಂತಿ ಮಹೋತ್ಸವದ ಅಂಗವಾಗಿ ಸ್ವಯಂ ಪ್ರೇರಿತರಕ್ತದಾನ ಶಿಬಿರವನ್ನು ಜೆಎಸ್‌ಎಸ್ ಶಿಕ್ಷಣ ಮಹಾ ವಿದ್ಯಾಲಯ ಆಯೋಜಿಸಿರುವುದು ಶ್ಲಾಘನೀಯವಾದುದು ಮತ್ತು ಅನುಕರಣೀಯವಾದುದು ಎಂದರು. ರಕ್ತದಾನ ಮಹಾದಾನವಾಗಿದ್ದು, ಯುವಕರು ರಕ್ತದಾನ ಮಾಡಲು ಮುಂದೆ ಬಂದುಜೀವ ಉಳಿಸುವ ಮಹಾತ್ಕಾರ್ಯಕ್ಕೆ ಕೈಜೋಡಿಸಬೇಕು ಎಂದರು.

ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ಹಾಸನ ಶಾಖೆಯ ಕಾರ್ಯದರ್ಶಿ ಶಬ್ಬೀರ್‌ಅಹಮದ್, ನಿರ್ದೇಶಕರಾದ ಹೆಚ್.ಡಿಕುಮಾರ್, ಸಂಯೋಜಕ ಹರ್ಷಿತ್ ಹೆಚ್.ಆರ್, ಸಕಲೇಶಪುರ ತಾಲ್ಲೂಕು ರೆಡ್‌ಕ್ರಾಸ್ ಘಟಕದ ಸಭಾಪತಿ ಶಾರದಗುರುಮೂರ್ತಿ, ಕಾರ್ಯದರ್ಶಿ ರೇಖಾ ಸುರೇಶ್, ಶ್ರೀ ಸದಾಶಿವ ಎಸ್.ಎಂ, ಅಧ್ಯಕ್ಷರು, ರೋಟರಿ ಸಂಸ್ಥೆ, ಸಕಲೇಶಪುರ, ಲಯನ್ ಬಬಿತ ವಿಶ್ವನಾಥ್, ಅಧ್ಯಕ್ಷರು, ಲಯನ್ಸ್‌ಕ್ಲಬ್, ಸಕಲೇಶಪುರ, ದೇವರಾಜು ಹೆಚ್.ಎನ್ (ದಿವಾನ್) ಅಧ್ಯಕ್ಷರು, ಮಲೆನಾಡು ವೀರಶೈವ ಸಮಾಜ, ಸಕಲೇಶಪುರ, ಶ್ರೀ ಲೋಹಿತ್ ಕೌಡಳ್ಳಿ, ಮಾಜಿಅಧ್ಯಕ್ಷರು, ಟಿ.ಎ.ಪಿ.ಸಿ.ಎಂ.ಎಸ್, ಸಕಲೇಶಪುರ, ಡಾ ನಾಗಲಕ್ಷ್ಮಿ, ಶ್ರೀ ಅಶ್ವತ್ ಹಾಸನ ಜಿಲ್ಲಾಸ್ಪತ್ರೆರಕ್ತನಿಧಿ ವಿಭಾಗ, ಹಾಸನ, ಜೆ ಎಸ್ ಎಸ್ ಶಿಕ್ಷಣ ಸಂಸ್ಥೆಗಳ ಎಲ್ಲಾ ಮುಖ್ಯಸ್ಥರುಗಳು, ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಕಾಲೇಜಿನ ಸಿಬ್ಬಂದಿ ವರ್ಗ ದವರು, ಬಿಎಡ್‌ಕಾಲೇಜಿನ ಪ್ರಶಿಕ್ಷಣಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿ, ಸ್ವಯಂ ಪ್ರೇರಿತರಾಗಿ ರಕ್ತದಾನ ಮಾಡಿಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ಈ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲಾರನ್ನು ಡಾ ದಿನೇಶ್ ಎಂ.ಕೆ ಸಹಾಯಕ ಪ್ರಾಧ್ಯಾಪಕರು, ಸ್ವಾಗತಿಸಿದರು. ಈ ಸಂದರ್ಭದಲ್ಲಿ ಹೆಚ್ಚು ಬಾರಿ ರಕ್ತದಾನ ಮಾಡಿದ ಜೆಎಸ್‌ಎಸ್ ಶಿಕ್ಷಣ ಮಹಾವಿದ್ಯಾಲಯದ ಕಂಪ್ಯೂಟರ್ ಇನ್‌ಸ್ಟ್ರಕ್ಟರ್ ತಮ್ಮಯ್ಯ ಹೆಚ್.ಬಿ, ಇವರನ್ನು ಸನ್ಮಾನಿಸಲಾಯಿತು. ಡಾ ನಂಜುಂಡಪ್ಪ ಎಸ್ ಇವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ಬಿಎಡ್ ಪ್ರಶಿಕ್ಷಣಾರ್ಥಿಶಿಲ್ಪಶ್ರೀ ಎಸ್ ಎಲ್ಲರನ್ನು ವಂದಿಸಿದರು.

PRINCIPAL
J.S.S. Institute of Education
P.B. 26, SAKALESHPUR-573134
Hassan Dist.

# ಸಕಲೇಶಪುರದಲ್ಲಿ ನಾಳೆ ಶಿವರಾತ್ರಿ ರಾಜೇಂದ್ರ ಶ್ರೀ ಜಯಂತಿ ಉತ್ಸವ



ಸಕಲೇಶಪುರ : ಶ್ರೀ ಮಲೆನಾಡು ವೀರಶೈವ ಸಮಾಜ ಹಾಗೂ ಅಂಗ ಸಂಸ್ಥೆಗಳು ಮತ್ತು ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಶ್ರೀ ಸುತ್ತೂರು ಜಗದ್ಗುರು ಶ್ರೀ ವೀರಸಿಂಹಾಸನ ಮಹಾ ಸಂಸ್ಥಾನಾಧೀಶ್ವರರಾದ ಜಗದ್ಗುರು ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 108ನೇ ಜಯಂತಿ ಮಹೋತ್ಸವ ಕಾರ್ಯಕ್ರಮವನ್ನು ಸೆಪ್ಟಂಬರ್ 23ರಂದು ಶನಿವಾರ ಆಚರಿಸಲಾಗುತ್ತಿದೆ ಎಂದು ಮಲೆನಾಡು ವೀರಶೈವ ಸಮಾಜದ ಅಧ್ಯಕ್ಷ ಧಿವಾನ್ ದೇವರಾಜು ತಿಳಿಸಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಿಗ್ಗೆ 11 ಗಂಟೆಗೆ ಸಕಲೇಶಪುರದ ಶ್ರೀ ಗುರುವೇಗೌಡ ಕಲ್ಯಾಣ ಮಂಟಪದಲ್ಲಿ ಅರಕಲಗೂಡಿನ ಶ್ರೀ ದೊಡ್ಡ ಮಠದ ಮಠಾಧೀಶ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳವರ ಸಮ್ಮುಖದಲ್ಲಿ ಮಹೋತ್ಸವ ಆಚರಿಸಲಾಗುತ್ತಿದೆ. ಸಕಲೇಶಪುರ ಶಾಸಕ ಸಿಮೆಂಟ್ ಮಂಜು ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಅಖಿಲ ಭಾರತ ವೀರಶೈವ ಮಹಾಸಭಾದ ಬಿ.ಆರ್. ಗುರುದೇವ್, ಮಾಜಿ ಶಾಸಕರಾದ ಹೆಚ್.ಕೆ. ಕುಮಾರಸ್ವಾಮಿ ಮತ್ತು ಹೆಚ್.ಎಂ.ವಿಶ್ವನಾಥ್ ಇನ್ನಿತರರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದರು.

ಜೆಎಸ್‌ಎಸ್ ವಿದ್ಯಾಸಂಸ್ಥೆಯ ಅಧೀಕ್ಷಕ ಮಂಜುನಾಥ್ ಮಾತನಾಡಿ, ಅಂದು ಬೆಳಗ್ಗೆ 9 ಘಂಟೆಗೆ ಶ್ರೀ ಸಕಲೇಶ್ವರಸ್ವಾಮಿ ದೇವಸ್ಥಾನದಿಂದ ರಾಜೇಂದ್ರ ಶ್ರೀಗಳ ಭಾವಚಿತ್ರ ಮೆರವಣಿಗೆ ನಡೆಯಲಿದೆ ಎಂದು ಹೇಳಿದರು.

ಜನತಾ ಮಾಧ್ಯಮ ಶುಕ್ರವಾರ
ಸೆಪ್ಟೆಂಬರ್ 22. 2023. P-1

PRINCIPAL
J.S.S. Institute of Educatio
P.B. 26, SAKALESHPUR-57313
Hassan Dist.

# ಶನಿವಾರ ಸುತ್ತೂರು ಶ್ರೀ ಜಯಂತಿ



**ಸಕಲೇಶಪುರ:** ಮಲೆನಾಡು ವೀರಶೈವ ಸಮಾಜ ಹಾಗೂ ಅಂಗ ಸಂಸ್ಥೆಗಳು ಮತ್ತು ತಾಲೂಕಿನ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರ 108 ನೇ ಜಯಂತಿಯನ್ನು ಸೆ.23 ರ ಶನಿವಾರ ಹಮ್ಮಿಕೊಳ್ಳಲಾಗಿದೆ ಎಂದು ಮಲೆನಾಡು ವೀರಶೈವ ಸಮಾಜದ ಅಧ್ಯಕ್ಷ ಎಚ್.ಎನ್ ದೇವರಾಜ್ ಹೇಳಿದರು.

ಅರಕಲಗೂಡು ದೊಡ್ಡಮಠದ ಶ್ರೀ ಮಲ್ಲಿಕಾರ್ಜುನ್ ಸ್ವಾಮೀಜಿ ಸಾನಿಧ್ಯದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಶಾಸಕ ಸಿಮೆಂಟ್ ಮಂಜುನಾಥ್, ಮಾಜಿ ಶಾಸಕರು ಹಾಗೂ ಸಂಘ ಸಂಸ್ಥೆಗಳ ಮುಖಂಡರು ಭಾಗವಹಿಸಲಿದ್ದಾರೆ. ಕಾರ್ಯಕ್ರಮದ ಅಂಗವಾಗಿ ಸ್ವಾಮೀಜಿಗಳ ಭಾವ ಚಿತ್ರದೊಂದಿಗೆ ಪಟ್ಟಣದ ಮುಖ್ಯ ಬೀದಿಯಲ್ಲಿ ಮೆರವಣಿಗೆ ಹಮ್ಮಿಕೊಳ್ಳಲಾಗಿದೆ ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಜೆಎಸ್‌ಎಸ್ ಸಂಸ್ಥೆಯ ಮುಖ್ಯಸ್ಥ ಮಂಜುನಾಥ್ ಮಾತನಾಡಿ, ಸ್ವಾಮೀಜಿಗಳ 108 ನೇ ಜಯಂತಿ ಅಂಗವಾಗಿ ರಕ್ತದಾನ ಶಿಬಿರ ಹಮ್ಮಿಕೊಳ್ಳಲಾಗಿದೆ. ಅಲ್ಲದೆ ತಾಲೂಕಿನ ಕೌಡಳ್ಳಿ ಗ್ರಾಮದ ಶ್ರವಣ ದೋಷ ಶಾಲೆಯ ಮಕ್ಕಳಿಗೆ ಹಣ್ಣು ಹಂಪಲು ವಿತರಿಸಲಾಗುತ್ತಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಯ ಪ್ರಾಂಶುಪಾಲ ಡಾ.ನಂಜುಂಡಪ್ಪ, ವೀರಶೈವ ಸಮಾಜದ ಮುಖಂಡರಾದ ಅರೆಕೆರೆ ನರೇಶ್, ಎ.ಜಿ ಗಗನ್, ಮುಂತಾದವರು ಹಾಜರಿದ್ದರು.

C M Y K C M Y K

ಜನ ಮಿತ್ರ 22 ಸೆಪ್ಟೆಂಬರ್ 2023
ಶುಕ್ರವಾರ. P-08

PRINCIPAL
J.S.S. Institute of Education
P.B. 26, SAKALESHPUR-573134
Hassan Dist.

# ಸುತ್ತೂರು-ಸಿದ್ಧಗಂಗಾ ಮಠ ರಾಜ್ಯದ ಎರಡು ಕಣ್ಣುಗಳು

## ಶ್ರೀಮಲ್ಲಿಕಾರ್ಜುನ ಸ್ವಾಮೀಜಿ ಬಣ್ಣನೆ | ಶ್ರೀಶಿವರಾತ್ರಿ ರಾಜೇಂದ್ರ ಶ್ರೀಗಳ ಜಯಂತಿ ಆಚರಣೆ

■ ವಿಜಯವಾಣಿ ಸುದ್ದಿಜಾಲ ಸಕಲೇಶಪುರ

ಸುತ್ತೂರು ಹಾಗೂ ಸಿದ್ಧಗಂಗಾ ಮಠಗಳು ರಾಜ್ಯದ ಎರಡು ಕಣ್ಣುಗಳಿದ್ದಂತೆ ಎಂದು ಅರಕಲಗೂಡು ದೊಡ್ಡಮಠದ ಶ್ರೀಮಲ್ಲಿಕಾರ್ಜುನ ಸ್ವಾಮೀಜಿ ಬಣ್ಣಿಸಿದರು.

ಶನಿವಾರ ಪಟ್ಟಣದ ಗುರುವೇಗೌಡ ಕಲ್ಯಾಣ ಮಂಟಪದಲ್ಲಿ ಮಲೆನಾಡು ವೀರಶೈವ ಸಮಾಜ ಹಾಗೂ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು ಸಂಯುಕ್ತವಾಗಿ ಹಮ್ಮಿಕೊಂಡಿದ್ದ ಡಾ.ಶ್ರೀಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರ 108ನೇ ಜಯಂತಿ ಮಹೋತ್ಸವದಲ್ಲಿ ...ರ್ವಚನ ನೀಡಿ, ಸಮಕಾಲೀನ ಸಮಾಜಕ್ಕೆ ಅಗತ್ಯವಿರುವುದನ್ನು ಮನಗಂಡು ಅವುಗಳನ್ನು ಕಾರ್ಯಗತಗೊಳಿಸುವ ಮೂಲಕ ಸುತ್ತೂರು ಮಠದ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಹಾಗೂ ಸಿದ್ಧಗಂಗಾ ಮಠದ ಶ್ರೀಶಿವಕುಮಾರ ಸ್ವಾಮೀಜಿ ಮಹಾತ್ಮರಾದರು. 19ನೇ ಶತಮಾನದಲ್ಲಿ ರಾಜ್ಯದಲ್ಲಿದ್ದ ಅನಕ್ಷರತೆಯನ್ನು ಗುರುತಿಸಿ ಸಂಕಷ್ಟದ ಮಧ್ಯೆ ವಿದ್ಯಾಸಂಸ್ಥೆಗಳನ್ನು ಸ್ಥಾಪಿಸಿ ತ್ರಿವಿಧ ದಾಸೋಹ ಏರ್ಪಡಿಸುವ ಮೂಲಕ ಈ ಇಬ್ಬರು ಶ್ರೀಗಳು ಇಂದಿಗೂ ಜನರ ಮನದಲ್ಲಿ ಜೀವಂತವಾಗಿದ್ದಾರೆ ಎಂದರು.

ಸಮಾಜದಿಂದ ಎಲ್ಲವನ್ನೂ ಪಡೆಯುವ ನಾವು ಸಮಾಜಕ್ಕೆ ಕಿಂಚಿತ್ತೂ ಸಹಾಯ ಮಾಡದೆ ಹೋದರೆ ನಿಮ್ಮ ಜೀವನಕ್ಕೆ ಅರ್ಥ ಬರುವುದಿಲ್ಲ. ಸ್ವಾರ್ಥರಹಿತ ಸೇವೆ ನಮ್ಮನ್ನು ಎತ್ತರದ ಸ್ಥಾನಕ್ಕೆ ಕೊಂಡೊಯ್ಯಲಿದೆ. ಮಹಾತ್ಮರ ಜಯಂತಿಯ ಆಚರಣೆ ಅವರ ಜೀವನದ ಸಂದೇಶವನ್ನು ಮುಂದಿನ ಜನಾಂಗಕ್ಕೆ ಕೊಂಡೊಯ್ಯುವುದಾಗಿದೆ. ಆದ್ದರಿಂದ ಕಾಟಾಚಾರಕ್ಕೆ ಜಯಂತಿಯಲ್ಲಿ ಪಾಲ್ಗೊಳ್ಳದೆ ಉತ್ತಮ ಸಂದೇಶಗಳನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು ಎಂದರು. ಕಾರ್ಯಕ್ರಮ ಉದ್ಘಾಟಿಸಿ ಶಾಸಕ ಸಿಮೆಂಟ್ ಮಂಜು ಮಾತನಾಡಿ, ಮಲೆನಾಡಿನಲ್ಲಿ ಶಿಕ್ಷಣ ಕ್ರಾಂತಿ ಉಂಟುಮಾಡಿದ ಕೀರ್ತಿ ಸುತ್ತೂರು ಮಠಕ್ಕೆ ಸಲ್ಲುತ್ತದೆ. ತಾಲೂಕಿನಲ್ಲಿ ಮಠದ ವತಿಯಿಂದ ಮತ್ತಷ್ಟು ಶಿಕ್ಷಣ ಸಂಸ್ಥೆಗಳ ಸ್ಥಾಪನೆಯ ಅಗತ್ಯವಿದೆ. ಕೇವಲ ಧಾರ್ಮಿಕ ಕ್ಷೇತ್ರಕ್ಕೆ ಸೀಮಿತವಾಗದೆ ಬಡಮಕ್ಕಳಿಗೆ ಅನ್ನ, ವಸತಿ ಹಾಗೂ ಶಿಕ್ಷಣ ನೀಡುತ್ತಿರುವ ಮಠ ಮತ್ತಷ್ಟು ಎತ್ತರಕ್ಕೆ ಬೆಳೆಯಲಿ ಎಂದರು.

ಉಪ ವಿಭಾಗಾಧಿಕಾರಿ ಡಾ.ಎಂ.ಕೆ.ಶ್ರುತಿ ಮಾತನಾಡಿ, ಸುತ್ತೂರು ಮಠ ವಿದ್ಯಾರ್ಥಿಗಳಿಗೆ ವಿದ್ಯೆಯೊಂದಿಗೆ ಸಂಸ್ಕಾರ, ಸಂಸ್ಕೃತಿ ಹಾಗೂ ಶಿಸ್ತು ಕಲಿಸುತ್ತಿದೆ. ಇಂತಹ ಶಿಕ್ಷಣ ಇಂದಿನ ಸಮಾಜಕ್ಕೆ ಅಗತ್ಯವಿದೆ ಎಂದರು. ಬಲವಂತಪ್ಪ ಅವರ ಜ್ಞಾಪಕಾರ್ಥವಾಗಿ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಯ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಮಾಜಿ ಶಾಸಕ ಎಚ್.ಎಂ.ವಿಶ್ವನಾಥ್, ಮಲೆನಾಡು ವೀರಶೈವ ಸಮಾಜದ ಅಧ್ಯಕ್ಷ ದಿವಾನ್, ಕಾರ್ಯದರ್ಶಿ ಮೂಗಲಿ ಧರ್ಮರಾಜ್, ಮುಖಂಡರಾದ ಶಿವಪ್ರಸಾದ್, ವಿದ್ಯಾಶಂಕರ್, ಕಾಂಗ್ರೆಸ್ ಮುಖಂಡರಾದ ಮುರಳಿಮೋಹನ್, ಎಚ್.ಎಚ್. ಉದಯ್, ಜೆಎಸ್‌ಎಸ್ ಸಂಸ್ಥೆಯ ಮುಖ್ಯಸ್ಥ ಮಂಜುನಾಥ್ ಮತ್ತಿತರರಿದ್ದರು.

### ಹಣ್ಣು ಹಂಪಲು ವಿತರಣೆ

ವೇದಿಕೆ ಕಾರ್ಯಕ್ರಮಕ್ಕೂ ಮೊದಲು ರಕ್ತದಾನ ಶಿಬಿರ ಹಾಗೂ ಶ್ರವಣದೋಷವುಳ್ಳ ಮಕ್ಕಳಿಗೆ ಹಣ್ಣು ಹಂಪಲು ವಿತರಿಸಲಾಯಿತು. ನಂತರ ಸಕಲೇಶ್ವರಸ್ವಾಮಿ ದೇವಸ್ಥಾನದಿಂದ ಗುರುವೇಗೌಡ ಕಲ್ಯಾಣ ಮಂಟಪದವರೆಗೆ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಭಾವಚಿತ್ರದೊಂದಿಗೆ ಮೆರವಣಿಗೆ ನಡೆಸಲಾಯಿತು.



ಸಕಲೇಶಪುರದ ಗುರುವೇಗೌಡ ಕಲ್ಯಾಣ ಮಂಟಪದಲ್ಲಿ ಆಯೋಜಿಸಿದ್ದ ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರ 108ನೇ ಜಯಂತಿ ಮಹೋತ್ಸವದಲ್ಲಿ ದೊಡ್ಡಮಠದ ಶ್ರೀ ಮಲ್ಲಿಕಾರ್ಜುನ ಸ್ವಾಮೀಜಿ ಆಶೀರ್ವಚನ ನೀಡಿದರು. ಶಾಸಕ ಸಿಮೆಂಟ್ ಮಂಜು, ಮಾಜಿ ಶಾಸಕ ಎಚ್.ಎಂ.ವಿಶ್ವನಾಥ್, ಮಲೆನಾಡು ವೀರಶೈವ ಸಮಾಜದ ಅಧ್ಯಕ್ಷ ದಿವಾನ್, ಕಾರ್ಯದರ್ಶಿ ಮೂಗಲಿ ಧರ್ಮರಾಜ್ ಮುಖಂಡರಾದ ಶಿವಪ್ರಸಾದ್, ವಿದ್ಯಾಶಂಕರ್ ಮತ್ತಿತರರಿದ್ದರು.

ವಿಜಯವಾಣಿ, ಭಾನುವಾರ.
ದಿನಾಂಕ: 24-9-2023.
P-2

PRINCIPAL
J.S.S. Institute of Education
P.B. 26, SAKALESHPUR-573134
Hassan Dist.

# ಉತ್ತಮ ಸಮಾಜಕ್ಕೆ ಶಿಕ್ಷಕರ ಪಾತ್ರ ಮಹತ್ವ

## ಸಮುದಾಯ ವಾಸ್ತವ್ಯ ಶಿಬಿರಕ್ಕೆ ನ್ಯಾಯಾಧೀಶರಾದ ನಿರ್ಮಲಾ ಚಾಲನೆ

ಪ್ರಜಾವಾಣಿ ವಾರ್ತೆ

ಆಲೂರು: ವಿದ್ಯಾರ್ಥಿಗಳನ್ನು ಉತ್ತಮ ಪ್ರಜೆಗಳಾಗಿ ರೂಪಿಸುವವಲ್ಲಿ ಶಿಕ್ಷಕರ ಪಾತ್ರ ಮಹತ್ವದ್ದು ಎಂದು ನ್ಯಾಯಾಧೀಶರಾದ ಎಂ. ಸಿ. ನಿರ್ಮಲಾ ತಿಳಿಸಿದರು.

ಆಲೂರು ಕಸಬಾ ಮರಸು ಹೊಸಳ್ಳಿ ಮೊರಾರ್ಜಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ, ಜೆಎಸ್‌ಎಸ್ ಶಿಕ್ಷಣ ಮಹಾವಿದ್ಯಾಲಯ ಸಕಲೇಶಪುರ ವತಿಯಿಂದ ಮೂರು ದಿನಗಳ ಸಮುದಾಯ ವಾಸ್ತವ್ಯ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು.

ಶಿಬಿರದಲ್ಲಿ ವ್ಯಕ್ತವಾಗುವ ಪ್ರತಿಯೊಂದು ಅಂಶಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಉತ್ತಮ ಸಮಾಜ ನಿರ್ಮಾಣ ಮಾಡಬೇಕು ಎಂದರು. ಪ್ರಾಂಶುಪಾಲ ಎಸ್. ನಂಜುಂಡಪ್ಪ ಅಧ್ಯಕ್ಷತೆ ವಹಿಸಿ ಮಾತನಾಡಿ, ಶಿಬಿರಾರ್ಥಿಗಳಿಗೆ ಶಿಸ್ತು ಹಾಗೂ ಸಮಯ ಪ್ರಜ್ಞೆ ಅವಶ್ಯ ಎಂದರು.

ವಕೀಲ ಕೆ. ಜಿ. ನಾಗರಾಜ್ ಮಾತನಾಡಿ, ವಿದ್ಯಾರ್ಥಿಗಳನ್ನು ಉತ್ತಮ ಮಾರ್ಗದಲ್ಲಿ ಬೆಳೆಸುವ ಜವಾಬ್ದಾರಿ ಪ್ರತಿಯೊಬ್ಬರಿಗೂ ಇದೆ ಎಂದರು. ಮೊರಾರ್ಜಿ ವಸತಿ ಶಾಲೆ ಪ್ರಾಂಶುಪಾಲ ಎಂ. ಎಸ್. ಪ್ರಕಾಶ್ ಮಾತನಾಡಿ, ಈಗಿನ ವಿದ್ಯಾರ್ಥಿಗಳ ಮನೋಭಾವವನ್ನು ತಿಳಿಸಿದರು.

ಕಣತೂರು ಗ್ರಾಮ ಪಂಚಾಯಿತಿ ಸದಸ್ಯರು ಹಾಗೂ ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಪೃಥ್ವಿರಾಮ್, ಸಂಚಾಲಕ ಸಿ. ಬಿ. ವಿಕ್ರಮ್, ಮಾರ್ಗದರ್ಶಕ ಆರ್. ಮಂಜುನಾಥ್, ಎಲಿಜಬೆತ್ ಸೋನಿ, ಅಮೃತಾ, ಚಾಂದಿನಿ, ಸುನೀತಾ, ಆರ್. ಬಿ. ಸುರೇಶ್, ಹೆಚ್.ಬಿ. ತಮ್ಮಯ್ಯ, ಮಹೇಶ್, ಎಂ. ಸಿ. ರಶ್ಮಿ ಇದ್ದರು.




ಆಲೂರು ಮರಸು ಹೊಸಳ್ಳಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ, ಜೆಎಸ್‌ಎಸ್ ಶಿಕ್ಷಣ ಮಹಾವಿದ್ಯಾಲಯ ಸಕಲೇಶಪುರ ವತಿಯಿಂದ ಏರ್ಪಡಿಸಲಾಗಿದ್ದ ಸಮುದಾಯ ವಾಸ್ತವ್ಯ ಶಿಬಿರ ಉದ್ಘಾಟಿಸಿ ನ್ಯಾಯಾಧೀಶರಾದ ಎಂ. ಸಿ. ನಿರ್ಮಲಾ ಮಾತನಾಡಿದರು. ಡಾ. ಎಸ್. ನಂಜುಂಡಪ್ಪ, ಎಂ. ಎಸ್. ಪ್ರಕಾಶ್, ವಕೀಲರಾದ ಕೆ. ಜಿ. ನಾಗರಾಜ್, ಆರ್. ಬಿ. ಸುರೇಶ್, ಎಂ. ಸಿ. ರಶ್ಮಿ ಉಪಸ್ಥಿತರಿದ್ದರು.

P-2 ಪ್ರಜಾವಾಣಿ, ಗುರುವಾರ ಅಕ್ಟೋಬರ್ 12, 2023

PRINCIPAL
J.S.S. Institute of Education
P.B. 26, SAKALESHPUR-573134
Hassan Dist.

ಪ್ರಜಾವಾಣಿ 31-01-2024 ಪು.ಸ-5

## ಮತದಾನ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಿ: ಆರ್. ಧನಲಕ್ಷ್ಮಿ

ಪ್ರಜಾವಾಣಿ ವಾರ್ತೆ

ಸಕಲೇಶಪುರ: 'ಪ್ರತಿಯೊಬ್ಬರೂ ಕಡ್ಡಾಯವಾಗಿ ಮತದಾನ ಮಾಡಬೇಕು' ಎಂದು ಹಿರಿಯ ಸಿವಿಲ್ ನ್ಯಾಯಾಧೀಶೆ ಆರ್. ಧನಲಕ್ಷ್ಮಿ ಹೇಳಿದರು.

ಇಲ್ಲಿಯ ಕೌಡಹಳ್ಳಿ ಜೆಎಸ್ಎಸ್ ಬಿಇಡಿ ಹಾಗೂ ಪಿಯುಸಿ ಕಾಲೇಜಿನಲ್ಲಿ ತಾಲ್ಲೂಕು ಕಾನೂನು ಸೇವಾ ಪ್ರಾಧಿಕಾರ, ತಾಲ್ಲೂಕು ಪಂಚಾಯಿತಿ, ಜೆಎಸ್ಎಸ್ ಶಿಕ್ಷಣ ಸಂಸ್ಥೆ ಹಾಗೂ ವಕೀಲರ ಸಂಘದಿಂದ ನಡೆದ ಮತದಾರರ ದಿನಾಚರಣೆಯಲ್ಲಿ ಮಾತನಾಡಿದರು.

'ವಿದ್ಯಾವಂತರು, ಪ್ರಜ್ಞಾವಂತರು ಮತಗಟ್ಟೆಗಳಿಗೆ ಬಂದು ಮತದಾನ ಮಾಡದೆ, ಪ್ರವಾಸಕ್ಕೆ ತೆರಳುತ್ತಿದ್ದಾರೆ. ಇದರಿಂದ ದೇಶದಲ್ಲಿ ಬದಲಾವಣೆ ತರಲು ಸಾಧ್ಯವಾಗುವುದಿಲ್ಲ' ಎಂದರು.

ಸಿವಿಲ್ ನ್ಯಾಯಾಧೀಶ ಸುಧೀರ್, ಉಪ ವಿಭಾಗಾಧಿಕಾರಿ ಡಾ.ಶ್ರುತಿ, ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲ ವಿ.ಪಿ. ರಮೇಶ್ ಮಾತನಾಡಿದರು. ತಾ.ಪಂ. ಇಒ ಆರ್. ರಾಮಕೃಷ್ಣ, ತಹಶೀಲ್ದಾರ್ ಪುರಂದರ, ಬಿಇಒ ಪುಷ್ಪಾ, ಹರೀಶ್, ನಂಜುಂಡಪ್ಪ, ಮಂಜುನಾಥ್ ಭಾಗವಹಿಸಿದ್ದರು.



ಸಕಲೇಶಪುರದ ಕೌಡಹಳ್ಳಿ ಜೆಎಸ್ಎಸ್ ಕಾಲೇಜಿನಲ್ಲಿ ನಡೆದ ಕಾರ್ಯಕ್ರಮವನ್ನು ಡಾ.ಶ್ರುತಿ ಉದ್ಘಾಟಿಸಿದರು. ಆರ್. ಧನಲಕ್ಷ್ಮಿ, ಸುಧೀರ್ ಭಾಗವಹಿಸಿದ್ದರು

## 'ಶಾಸಕರ ಒತ್ತಡದಿಂದ ಶಾಲೆ

ಪ್ರಜಾವಾಣಿ ವಾರ್ತೆ

ಅರಸೀಕೆರೆ: 'ನಗರದಲ್ಲಿ ಜ.26ರಂದು ನಡೆದ ಗಣರಾಜ್ಯೋತ್ಸವದಲ್ಲಿ ನಗರದ ಚಂದ್ರಶೇಖರ ಇಂಟರ್‌ನ್ಯಾಷನಲ್ ಶಾಲೆ ವಿದ್ಯಾರ್ಥಿಗಳು ಪ್ರದರ್ಶಿಸಿದ ನೃತ್ಯಕ್ಕೆ ಪ್ರಥಮ ಬಹುಮಾನ ಬಂದರೂ, ಶಾಸಕರ ಒತ್ತಡದಿಂದಾಗಿ 4ನೇ ಬಹುಮಾನ ನೀಡಲಾಗಿದೆ' ಎಂದು ಬಿಜೆಪಿ ಮುಖಂಡ ಜಿವಿಟಿ ಬಸವರಾಜು ಆರೋಪಿಸಿದರು.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ವಿದ್ಯಾರ್ಥಿಗಳು ನೃತ್ಯ ಪ್ರದರ್ಶಿಸುವ ವೇಳೆ ರಾಷ್ಟ್ರೀಯ ಚಿಹ್ನೆಗಳಾದ ಅಶೋಕ ಚಕ್ರ, ನವಿಲು, ಕಮಲದ ಹೂ ಪ್ರದರ್ಶಿಸಿದ್ದು, ಇದು ರಾಜಕೀಯ ಪ್ರೇರಿತವಾಗಿರ... ಬಾರಿ ಶಾಸಕರಾಗಿ ಅನು... ರಾಜಕಾರಣಿಯು ಮಕ್ಕಳು, ... ಮೇಲೆ ಅಭಿಮಾನ, ಪ್ರೀತಿ ... ಬೇಕಿತ್ತು. ಆದರೆ, ಶಾಸಕರು ... ಮತ್ತು ಶಿಕ್ಷಕಿಯರ ಮೇಲೆ ಕಿಡಿ... ಅವರು ಶಿಕ್ಷಕಿಯರ ಕ್ಷಮೆ ...

### ಇದರಲ್ಲಿ ನನ್ನ...

'ಚಂದ್ರಶೇಖರ ಇಂಟರ್ ನ... ಹೂವನ್ನು ದೊಡ್ಡದಾಗಿ ಪ್ರ... ಇದಕ್ಕೆ ರಾಜಕೀಯ ಬಣ್ಣ ಕ... ವಿಚಾರವು ತಾಲ್ಲೂಕು ಆಡ... ಇದರಲ್ಲಿ ನನ್ನ ಪಾತ್ರವಿಲ್ಲ' ... ಸ್ಪಷ್ಟಪಡಿಸಿದರು.

PRINCIPAL
J.S.S. Institute of Education
P.B. 26, SAKALESHPUR-573134
Hassan Dist.